Editor: NITYANANDASWAMI Publisher: U. BASAVARAJA RNI No. KARKAN/2006/17926


ಜನಶಕ್ತಿ ಕನ್ನಡ ವಾರ ಪತ್ರಿಕೆ

ದುಡಿಯುವ ಜನರ ಪ್ರಾಣಮಿತ್ರ

JANASHAKTHI KANNADA VARA PATRIKE ಸಂಪುಟ 16 | ಸಂಚಿಕೆ 25 | ಜೂನ್ 13–19, 2022 | ಪುಟ 16 | ರೂ.10/-

Volume: 16 Issue: 25 June 13-19, 2022 Pages: 16 Price: 10/-

https://janashakthi.wordpress.com e-mail : js_weekly@yahoo.com



ಹಣದುಬ್ಬರ ತಡೆ ಯಾರ ಕೈಯ್ಯಲ್ಲಿ?



ರಾಜ್ಯ ಸಭೆ ಚುನಾವಣೆ:
ಕಾಂಗ್ರೆಸ್–ಜೆ.ಡಿ.ಎಸ್ ಪಕ್ಷಗಳ ಅಕ್ಷಮ್ಯ ಹೊಣೆಗೇಡಿತನ



ಕುಡಿತಿನಿ:
ನೆಲ ಅರಸಿ ಅಲೆದದವರ ಕಥೆ- ವ್ಯಥೆ



ಮುಸ್ಲಿಂ ವಿರೋಧಿ ಧೋರಣೆ:
ಪರಧರ್ಮ ನಿಂದನೆಗೆ ತೆತ್ತ ಬೆಲೆ





ಬೆಂಗಳೂರು:
ಬಂಗಲೆಗಳ ಕಟ್ಟಿದವರ ಬವಣೆಗಳು

ಮತ್ತೆ ರೈತರಿಗೆ ಕೇಂದ್ರ ಸರ್ಕಾರದ ಎಂಎಸ್‌ಪಿ ವಂಚನೆ

ರಾಷ್ಟ್ರವ್ಯಾಪಿ ಪ್ರತಿಭಟನೆಗಳಿಗೆ ಎಐಕೆಎಸ್ ಕರೆ

ಮುಂಗಾರು ಬೆಳೆಗಳ ಕನಿಷ್ಟ ಬೆಂಬಲ ಬೆಲೆಯಲ್ಲಿ (ಎಂಎಸ್‌ಪಿ) ಅತ್ಯಲ್ಪ ಹೆಚ್ಚಳವನ್ನು ಪ್ರಕಟಿಸುವ ಮೂಲಕ ಮೋದಿ ಸರಕಾರ ಮತ್ತೊಮ್ಮೆ ರೈತರನ್ನು ವಂಚಿಸಿದೆ. ಮುಂಗಾರು 2022–23ಕ್ಕೆ ಘೋಷಿಸಲಾದ ಎಂಎಸ್‌ಪಿಯಲ್ಲಿ ಅಕ್ಕಿ, ಮೆಕ್ಕೆಜೋಳ, ಹುರುಳಿ, ಉದ್ದಿನಬೇಳೆ ಮತ್ತು ಕಡಲೆಕಾಯಿಗೆ ಎಂಎಸ್‌ಪಿ ಕೇವಲ 7% ದಷ್ಟು ಮತ್ತು ಸೆಜ್ಜೆಗೆ ಕೇವಲ 8% ಹೆಚ್ಚಿಸಲಾಗಿದೆ. ಹೆಚ್ಚಿನ ಬೆಳೆಗಳಲ್ಲಿ, ಈ ಹೆಚ್ಚಳವು ಕೇವಲ ಸಾಮಾನ್ಯ ಹಣದುಬ್ಬರವನ್ನು ಸರಿದೂಗಿಸುತ್ತದಷ್ಟೇ ಎಂದು ಅಖಿಲ ಭಾರತ ಕಿಸಾನ್ ಸಭಾ(ಎಐಕೆಎಸ್) ಖಂಡಿಸಿದೆ.

ರೈತರಿಗೆ ಉತ್ಪಾದನಾ ವೆಚ್ಚವು ಇಂಧನ ಮತ್ತು ಇತರ ಲಾಗುವಾಡುಗಳ ಏರಿದ ಬೆಲೆಗಳು ಮತ್ತು ರಸಗೊಬ್ಬರಗಳ ಪೂರೈಕೆಯಲ್ಲಿ ಭಾರಿ ಕೊರತೆ ಮತ್ತು ಬೆಲೆ ಏರಿಕೆಯಿಂದಾಗಿ ತೀವ್ರವಾಗಿ ಹೆಚ್ಚಾಗಿರುವಾಗ ಎಂಎಸ್‌ಪಿ ಯಲ್ಲಿ ಈ ಅಲ್ಪ ಹೆಚ್ಚಳವನ್ನು ಮಾಡಲಾಗಿದೆ ಎಂಬುದನ್ನು ಗಮನಿಸುವುದು ಮುಖ್ಯವಾಗಿದೆ. ಕಳೆದ ಹಂಗಾಮಿನಲ್ಲೂ ಪೂರೈಕೆ ಕೊರತೆಯಿಂದ ರಸಗೊಬ್ಬರಗಳ ಕಾಳಸಂತೆ ಜೋರಾಗಿತ್ತು. ಬೆಲಾರುಸ್ ಮತ್ತು ರಷ್ಯಾ ವಿರುದ್ಧ ಅಮೆರಿಕ ಸಂಯುಕ್ತ ಸಂಸ್ಥಾನಗಳು ಮತ್ತು ಯುರೋಪಿಯನ್ ಒಕ್ಕೂಟದ ನಿರ್ಬಂಧಗಳಿಂದಾಗಿ ಇತ್ತೀಚಿನ ತಿಂಗಳುಗಳಲ್ಲಿ ಪರಿಸ್ಥಿತಿ ಇನ್ನಷ್ಟು ಹದಗೆಟ್ಟಿದೆ.

ಆಹಾರ ಪದಾರ್ಥಗಳ ಜಾಗತಿಕ ಬೆಲೆಗಳು ತುಂಬಾ ಹೆಚ್ಚಿರುವ ಅವಧಿಯಲ್ಲಿ ಹೀಗೆ ಮಾಡಲಾಗಿದೆ ಎಂಬುದು ಕೂಡ ಗಮನಾರ್ಹ. ಇದರರ್ಥ, ಭಾರತವು ಆಮದು ಅವಲಂಬಿತವಾಗಿರುವ ಖಾದ್ಯ ತೈಲಗಳು ಮತ್ತು ಬೇಳೆಕಾಳುಗಳಂತಹ ಸರಕುಗಳಿಗೆ, ತೈಲಬೀಜಗಳು ಮತ್ತು ಬೇಳೆಕಾಳುಗಳನ್ನು ಬೆಳೆಯುವ ಅಭಿವೃದ್ಧಿ ಹೊಂದಿದ ದೇಶಗಳ ರೈತರಿಗೆ ಆಮದು ಮೂಲಕ ನಮ್ಮದೇ ರೈತರಿಗೆ ಪಾವತಿಸಲು ಉದ್ದೇಶಿಸಿರುವ ಬೆಲೆಗಿಂತ ಹೆಚ್ಚಿನ ಬೆಲೆಯನ್ನು ನೀಡಲಾಗುತ್ತದೆ. ಭಾರತದ ಆಮದು ಅವಲಂಬನೆಯನ್ನು ಕಡಿಮೆ ಮಾಡಲು ನಮ್ಮದೇ ರೈತರಿಗೆ ಫಲದಾಯಕ ಬೆಲೆಗಳನ್ನು ನೀಡುವ ಬದಲು, ಸರ್ಕಾರವು ಅವರ ವಿರುದ್ಧ ತಾರತಮ್ಯ ಮಾಡುತ್ತಿದೆ ಎಂದು ಎಐಕೆಎಸ್ ಆಪಾದಿಸಿದೆ.

ಮತ್ತೊಮ್ಮೆ, ಎಂಎಸ್‌ಪಿ ಮೂಲಕ ಉತ್ಪಾದನಾ ವೆಚ್ಚಕ್ಕಿಂತ ಹೆಚ್ಚಿನ ಆದಾಯವನ್ನು ಕೊಡುವ ಆಶ್ವಾಸನೆಯನ್ನು ಈಡೇರಿಸಲಾಗಿದೆ ಎಂದು ಸರ್ಕಾರವು ತಪ್ಪುದಾರಿಗೆಳೆಯುವ ದಾವೆ ಮಾಡಿದೆ. 2022–23 ಮುಂಗಾರಿಗೆ ಉತ್ಪಾದನಾ ವೆಚ್ಚದ ಸರ್ಕಾರದ ಅಂದಾಜು ವಾಸ್ತವ ಮಟ್ಟಕ್ಕಿಂತ ಕೆಳಗಿದೆ. ಮತ್ತು, ಇತ್ತೀಚಿನ ವರ್ಷಗಳಲ್ಲಿ ಅದು ಮಾಡುತ್ತಿರುವಂತೆ, ಒಟ್ಟು ವೆಚ್ಚದ (ಸಿ2) ಆದಾಯವನ್ನು ಲೆಕ್ಕ ಹಾಕುವ ಬದಲು, ಎ2+ಈಐ ಎ2+ಎಫ್‌ಎಲ್ ವೆಚ್ಚದ ಮೇಲೆ ಆದಾಯವನ್ನು ಲೆಕ್ಕಹಾಕಲಾಗುತ್ತದೆ, ಇದು ರೈತರ ಸ್ವಂತ ಸಂಪನ್ಮೂಲಗಳ ವೆಚ್ಚವನ್ನು ಪರಿಗಣನೆಗೆ ತಗೊಳ್ಳುವುದಿಲ್ಲ. ಇದರ ಪ್ರಕಾರ ಎಂಎಸ್‌ಪಿಯು ಉತ್ಪಾದನಾ ವೆಚ್ಚವನ್ನು ಸಂಪೂರ್ಣವಾಗಿ ಭರಿಸುವುದಿಲ್ಲವಾದ್ದರಿಂದ ಇದು ರೈತರಿಗೆ ಮಾಡುತ್ತಿರುವ ವಂಚನೆಯಾಗಿದೆ.

ಸರ್ಕಾರ ಸಿ2+50% ರ ಸ್ವಾಮಿನಾಥನ್ ಆಯೋಗದ ಸೂತ್ರವನ್ನು ಶ್ರದ್ಧೆಯಿಂದ ಜಾರಿಗೆ ತರಬೇಕು, ಉತ್ಪಾದನೆಯ ಒಟ್ಟು ವೆಚ್ಚದ ನೈಜ ಅಂದಾಜನ್ನು ತಯಾರಿಸಬೇಕು ಮತ್ತು ರೈತರಿಗೆ ಅದರ ಮೇಲೆ 50% ಪ್ರತಿಫಲವನ್ನು ನೀಡುವುದನ್ನು ಖಚಿತಪಡಿಸಬೇಕು. ಬೇಳೆಕಾಳುಗಳು, ಎಣ್ಣೆಕಾಳುಗಳು ಮತ್ತು ರಾಗಿಗೆ ಸಾರ್ವಜನಿಕ ಸಂಗ್ರಹಣೆಯ ವ್ಯವಸ್ಥೆಗಳನ್ನು ಜಾರಿಗೆ ತರುವುದನ್ನು ಸರ್ಕಾರವು ಖಚಿತಪಡಿಸಬೇಕು, ಇದರಿಂದಾಗಿ ರೈತರು ಈ ಬೆಳೆಗಳನ್ನು ಹೆಚ್ಚು ಬೆಳೆಯಲು ಪ್ರೋತ್ಸಾಹಿಸಬಹುದು ಮತ್ತು ದ್ವಿದಳ ಧಾನ್ಯಗಳು ಮತ್ತು ಎಣ್ಣೆಕಾಳುಗಳಿಗೆ ಭಾರತದ ಆಮದು ಅವಲಂಬನೆಯನ್ನು ಕಡಿಮೆ ಮಾಡಬಹುದು. ಖಾದ್ಯ ತೈಲ ಮತ್ತು ಬೇಳೆಕಾಳುಗಳನ್ನು ಸಾರ್ವಜನಿಕ ವಿತರಣಾ ವ್ಯವಸ್ಥೆಯಲ್ಲಿ ಸೇರಿಸಬೇಕು, ಇದು ಈ ನೀರು ಉಳಿಸುವ ಬೆಳೆಗಳನ್ನು ಬೆಳೆಯಲು ರೈತರನ್ನು ಉತ್ತೇಜಿಸುತ್ತದೆ, ಆಹಾರ ಹಣದುಬ್ಬರವನ್ನು ತಗ್ಗಿಸಲು ಮತ್ತು ದೇಶದಲ್ಲಿ ಆಹಾರ ಭದ್ರತೆಯನ್ನು ಉತ್ತಮಪಡಿಸಲು ಸಹಾಯ ಮಾಡುತ್ತದೆ.

ಇದಲ್ಲದೆ, ಎಲ್ಲರಿಗೂ ತಿಳಿದಿರುವಂತೆ, ದೇಶದ ಹೆಚ್ಚಿನ ಭಾಗಗಳಲ್ಲಿ ಸರ್ಕಾರಿ ಸಂಗ್ರಹಣೆ ಇಲ್ಲದಿರುವುದರಿಂದ, ಭಾರತದಲ್ಲಿನ ಒಂದು ಸಣ್ಣ ಭಾಗದ ರೈತರು ಮಾತ್ರ ಕೇಂದ್ರ ಸರ್ಕಾರವು ಘೋಷಿಸಿರುವ ಈ ಅಲ್ಪ ಪ್ರಮಾಣದ ಎಂಎಸ್‌ಪಿಯ ಲಾಭವನ್ನು ಪಡೆಯಲು ಸಾಧ್ಯವಾಗುತ್ತದೆ ಎಂಬುದನ್ನೂ ನೆನಪಿಸಿರುವ ಎಐಕೆಎಸ್ , ರೈತರಿಗೆ ಮೋದಿ ಸರ್ಕಾರವು ಮಾಡುತ್ತಿರುವ ಈ ಎಂಎಸ್‌ಪಿ ವಂಚನೆಯ ವಿರುದ್ಧ ಪ್ರತಿಭಟಿಸಬೇಕು ಮತ್ತು ತಮ್ಮ ಬೆಳೆಗಳಿಗೆ ಫಲದಾಯಕ ಎಂಎಸ್‌ಪಿ ಯನ್ನು ಪಡೆಯುವ ಒಂದು ಶಾಸನಬದ್ಧ ಹಕ್ಕನ್ನು ಒತ್ತಾಯಿಸಲು ಮತ್ತೊಮ್ಮೆ ಒಗ್ಗಟ್ಟಿನಿಂದ ಅಣಿನೆರೆಯಬೇಕು ಎಂದು ಕರೆ ನೀಡಿದೆ.

ಭಾರತದ ರೈತರ ದನಿಗಳಿಗೆ ಕಿವಿಗೊಡಿ, ಡಬ್ಲ್ಯುಟಿಒ ದ ಎಂಸಿ12 ರಲ್ಲಿ

ರೈತರ ಹಿತಗಳನ್ನು ಕಾಪಾಡಿ-ಪ್ರಧಾನ ಮಂತ್ರಿಗಳಿಗೆ ಎಐಕೆಎಸ್ ಪತ್ರ

ಜೂನ್ 12 ರಿಂದ 15 ರವರೆಗೆ ಜಿನೇವಾದಲ್ಲಿ ‘ವಿಶ್ವ ವ್ಯಾಪಾರ ಸಂಘಟನೆ’(ಡಬ್ಲ್ಯುಟಿಒ)ಯ ಹನ್ನೆರಡನೇ ಮಂತ್ರಿಮಟ್ಟದ ಸಮ್ಮೇಳನ(ಎಂಸಿ12) ನಡೆಯಲಿದೆ. ಇದರಲ್ಲಿ ಭಾರತದ ರೈತರ ದನಿಗಳಿಗೆ ಕಿವಿಗೊಡಬೇಕು, ಅವರ ಹಿತಾಸಕ್ತಿಗಳನ್ನು ರಕ್ಷಿಸುವ ಗಟ್ಟಿ ನಿಲುವುಗಳನ್ನು ತಳೆಯಬೇಕು ಎಂದು ಆಗ್ರಹಿಸಿ ಅಖಿಲ ಭಾರತ ಕಿಸಾನ್ ಸಭಾ (ಎಐಕೆಎಸ್) ಪ್ರಧಾನ ಮಂತ್ರಿಗಳಿಗೆ ಪತ್ರ ಬರೆದಿದೆ.

ತೀವ್ರ ಕೃಷಿ ಬಿಕ್ಕಟ್ಟಿನಲ್ಲಿ ನರಳುತ್ತಿದ್ದ ಭಾರತದ ರೈತರನ್ನು ಕೊವಿಡ್–19 ಮತ್ತಷ್ಟು ಹಿಂಡಿ–ಹಿಪ್ಪೆ ಮಾಡಿದೆ. ಲಾಗುವಾಡುಗಳ ವಿಪರೀತ ಬೆಲೆಯೇರಿಕೆಗಳು ಒಂದೆಡೆಯಲ್ಲಿ, ಕೃಷಿ ಉತ್ಪನ್ನಗಳಿಗೆ ತಕ್ಕ ಫಲ ನೀಡದ ಬೆಲೆಗಳು ಇನ್ನೊಂದೆಡೆಯಲ್ಲಿ ರೈತರನ್ನು ಸಾಲದ ಬಲೆಗೆ ತಳ್ಳುತ್ತಿವೆ. ರೈತರ ಈ ಪರಿಸ್ಥಿತಿಯಲ್ಲಿ ದೇಶದ ಆಹಾರ ಭದ್ರತೆಯ ಅಗತ್ಯಗಳನ್ನು ಪೂರೈಸುವುದು ಕೂಡ ಕಷ್ಟಕರವಾಗುತ್ತದೆ. ಮಂತ್ರಿಮಟ್ಟದ ಸಭೆಯಲ್ಲಿ ಭಾರತದ ಪಾತ್ರ ಇದನ್ನು ಗಮನದಲ್ಲಿಟ್ಟುಕೊಳ್ಳಬೇಕು ಎಂದು ಎಐಕೆಎಸ್ ಪ್ರಧಾನಿಗಳಿಗೆ ಬರೆದ ಪತ್ರದಲ್ಲಿ ಹೇಳಿದೆ.

ಈ ಸಮ್ಮೇಳನ ಕೃಷಿ ಮತ್ತು ಆಹಾರ ಭದ್ರತೆಗೆ ಸಂಬಂಧಪಟ್ಟ ಬಹಳ ಮಹತ್ವದ ಪ್ರಶ್ನೆಗಳನ್ನು ಚರ್ಚಿಸಲಿದೆ. ಈ ಚರ್ಚೆಗಳಿಂದ ಮೂಡಿ ಬರಬಹುದಾದ ಕಾನೂನುಪ್ರಕಾರ ಪಾಲಿಸಲೇ ಬೇಕಾದ ಒಪ್ಪಂದಗಳು ಕೋಟ್ಯಂತರ ಭಾರತೀಯ ರೈತರಿಗೆ ಕೇಡುಂಟು ಮಾಡಬಹುದು. ಆದ್ದರಿಂದ ಭಾರತ ಸರಕಾರ ನಮ್ಮ ದೇಶದ ರೈತರ ದನಿಗಳಿಗೆ ಕಿವಿಗೊಡುವುದು ಮತ್ತು ಅವನ್ನು ಈ ಸಮ್ಮೇಳನದಲ್ಲಿ ಬಿಂಬಿಸುವುದು ಅತ್ಯಗತ್ಯವಾಗಿದೆ. ಡಬ್ಲ್ಯುಟಿಒ ದಲ್ಲಿ ‘ಸಾರ್ವಜನಿಕ ದಾಸ್ತಾನು ಪ್ರಶ್ನೆಗೆ ಶಾಶ್ವತ ಪರಿಹಾರ’(ಪಿಎಸ್‌ಹೆಚ್) ಮತ್ತು ‘ವಿಶೇಷ ರಕ್ಷಕ ವ್ಯವಸ್ಥೆ’(ಎಸ್‌ಎಸ್‌ಎಂ) ಈ ಪ್ರಶ್ನೆಗಳನ್ನು ಈ ಮೊದಲೇ ಎತ್ತಲಾಗಿದ್ದು ಭಾರತದಂತಹ ಮೂರನೇ ಜಗತ್ತಿನ ದೇಶಗಳಿಗೆ ಬಹುಮುಖ್ಯವಾದ ಈ ಪ್ರಶ್ನೆಗಳನ್ನು ಶ್ರೀಮಂತ ಪಾಶ್ಚಿಮಾತ್ಯ ದೇಶಗಳು ಬದಿಗೊತ್ತಲು ಪ್ರಯತ್ನಿಸುತ್ತ ಬಂದಿವೆ. ತಮ್ಮ ದೊಡ್ಡ ರೈತರಿಗೆ ಭಾರೀ ಬ್ಸಿಡಿಗಳನ್ನು ಕೊಡುವ ಈ ದೇಶಗಳು ಭಾರತದಂತಹ ದೇಶಗಳು ತಮ್ಮ ರೈತರಿಗೆ ಕೊಡುವ ಅಲ್ಪ ಬೆಂಬಲ ಬೆಲೆಗಳ ವಿರುದ್ಧ ಆಕ್ಷೇಪಗಳನ್ನು ಎತ್ತುತ್ತ ಬಂದಿವೆ. ಈ ಬಾರಿಯೂ ಅದೇ ಪ್ರಯತ್ನ ನಡೆಯುತ್ತಿದೆ. ಬಡ ದೇಶಗಳ ರೈತರ ಸಮಸ್ಯೆಗಳಿಗೆ ಶಾಶ್ವತ ಪರಿಹಾರದ ಪ್ರಯತ್ನಗಳಿಗೆ ಅಡ್ಡಗಾಲು ಹಾಕುತ್ತಲೇ ತಮ್ಮ ಮಾರುಕಟ್ಟೆ ಬಲವನ್ನು ಹೆಚ್ಚಿಸಿಕೊಳ್ಳಲು ‘ವ್ಯಾಪಾರ ಮತ್ತು ಆಹಾರ ಭದ್ರತೆಯ ಘೋಷಣೆ’ ಅಂಗೀಕರಿಸುವಂತೆ ಮಾಡುವ ಯೋಜನೆ ಹಾಕಿವೆ ಎಂದು ವರದಿಯಾಗಿದೆ.

ಈ ಹಿಂದೆ ಭಾರತ ಸರಕಾರ ಈ ಪ್ರಶ್ನೆಗಳ ಮೇಲೆ ಅಭಿವೃದ್ಧಿಶೀಲ ದೇಶಗಳನ್ನು ಅಣಿನೆರೆಸುವಲ್ಲಿ ಒಂದು ಪಾತ್ರವನ್ನು ವಹಿಸಿತು. ಈ ಬಾರಿಯೂ ಈ ವಿಷಯದಲ್ಲಿ ಅದು ಗಟ್ಟಿ ನಿಲುವು ತಳೆಯಬೇಕು. ಭಾರತದ ರೈತರು ಇತ್ತೀಚೆಗೆ ಭಾರತ ಸರಕಾರ ತಂದ ಮೂರು ಕೃಷಿ ಕಾಯ್ದೆಗಳ ವಿರುದ್ಧ ಒಂದು ವರ್ಷಕ್ಕೂ ಹೆಚ್ಚು ಕಾಲ ಹೋರಾಟ ಮಾಡಿರುವುದನ್ನು ಈ ಸಂದರ್ಭದಲ್ಲಿ ಎಐಕೆಎಸ್ ನೆನಪಿಸಿದೆ. ಈ ಕೃಷಿ ಕಾಯ್ದೆಗಳು ಡಬ್ಲ್ಯುಟಿಒ ಆದೇಶಪಾಲನೆಗೆ ತಂದ ಕಾಯ್ದೆಗಳು. ಈ ಹೋರಾಟದಲ್ಲಿ ಸಾರ್ವಜನಿಕ ಧಾನ್ಯ ಖರೀದಿ ಮತ್ತು ರೈತರಿಗೆ ಕನಿಷ್ಟ ಬೆಂಬಲ ಬೆಲೆ ಪ್ರಮುಖ ಪ್ರಶ್ನೆಗಳಾಗಿ ಮುನ್ನೆಲೆಗೆ ಬಂದಿದ್ದವು. ಭಾರತದ ರೈತರ ಈ ದನಿಗಳಿಗೆ ಸರಕಾರ ಕಿವಿಗೊಡಬೇಕು. ದ್ವಿಗುಣ ಶಕ್ತಿಯಿಂದ ಅಭಿವೃದ್ಧಿಶೀಲ ದೇಶಗಳನ್ನು ಅಣಿನೆರೆಸಬೇಕು. ಪಿಎಸ್‌ಹೆಚ್ ಮತ್ತು ಎಸ್‌ಎಸ್‌ಎಂ ಪ್ರಶ್ನೆಗಳ ಬಗ್ಗೆ ದೃಢ ನಿಲುವು ತಳೆಯಬೇಕು ಮತ್ತು ಶ್ರೀಮಂತ ದೇಶಗಳು ಕೊಡುತ್ತಿರುವ ಸಬ್ಸಿಡಿಗಳಿಗೆ ಸವಾಲು ಹಾಕಬೇಕು ಎಂದು ಎಐಕೆಎಸ್ ಆಗ್ರಹಿಸಿದೆ.

ಈ ಮಧ್ಯಂತರ ಕ್ರಮಗಳೊಂದಿಗೆ ಡಬ್ಲ್ಯುಟಿಒದಲ್ಲಿ ನಾವು ಭಾಗವಹಿಸುವುದರಿಂದ ಸಿಗುವ ಪ್ರಯೋಜನಗಳು ಮತ್ತು ಅದಕ್ಕೆ ತೆರಬೇಕಾದ ಬೆಲೆಗಳ ಒಂದು ಸ್ವತಂತ್ರ ವಿಶ್ಲೇಷಣೆ ನಡೆಬೇಕು, ಅಂತಿಮವಾಗಿ ಇದರಿಂದ ಹೊರಬರುವ ಕ್ರಮಗಳ ಬಗ್ಗೆ ಯೋಚಿಸಬೇಕು ಎಂದೂ ಎಐಕೆಎಸ್ ಹೇಳಿದೆ. ಏಕೆಂದರೆ ಈ ಸಂಘಟನೆಯ ಮೂಲಕ ನಮ್ಮಂತಹ ದೇಶಗಳ ಮೇಲೆ ಅಸಮ ಮತ್ತು ಅನ್ಯಾಯದ ನಿಯಮಗಳನ್ನು ಹೇರುತ್ತಲೇ ಶ್ರೀಮಂತ ದೇಶಗಳು ಮತ್ತು ದೊಡ್ಡ ಕೃಷಿ ವ್ಯಾಪಾರೀ ಸಂಸ್ಥೆಗಳಿಗೆ ಅನುಕೂಲಕರವಾದ ನಿಯಮಗಳನ್ನು ಮಾಡಲಾಗುತ್ತಿದೆ. ಈ ಸಂದರ್ಭದಲ್ಲಿ, ಈ ಸಮಸ್ತ ನವ–ಉದಾರವಾದಿ ಆರ್ಥಿಕ ಧೋರಣೆಗಳನ್ನು ಹಿಂದಕ್ಕೆ ಪಡೆಯಬೇಕು ಮತ್ತು ಕೃಷಿಯನ್ನು ಡಬ್ಲ್ಯುಟಿಒ ಮತ್ತು ಅಸಮ ‘ಮುಕ್ತ ವ್ಯಾಪಾರ ಒಪ್ಪಂದ’ಗಳಿಂದ ಹೊರಗಿಡಬೇಕು ಎಂಬ ತನ್ನ ಮೂಲಭೂತ ನಿಲುವನ್ನು ಎಐಕೆಎಸ್ ಪುನರುಚ್ಚರಿಸಿದೆ.

ಭಾರತ ಸರಕಾರ ರೈತರ ನಿಲುವುಗಳನ್ನು ಗಮನಕ್ಕೆ ತಗೊಳ್ಳುತ್ತದೆ ಮತ್ತು ಜಿನೇವಾದಲ್ಲಿ ನಡೆಯಲಿರುವ ಎಂಸಿ12ರಲ್ಲಿ ಭಾರತದ ರೈತರು ಮತ್ತು ಜನಸಮೂಹಗಳ ಹಿತಗಳನ್ನು ಬಿಂಬಿಸುತ್ತದೆ ಎಂಬ ಆಶಾಭಾವನೆಯನ್ನು ಅಖಿಲ ಭಾರತ ಕಿಸಾನ್ ಸಭಾ ಪ್ರಧಾನಿಗಳಿಗೆ ಬರೆದ ಈ ಪತ್ರದಲ್ಲಿ ವ್ಯಕ್ತಪಡಿಸಿದೆ.

“ಕಾಶ್ಮೀರದಲ್ಲಿ ಮುಗ್ಧ ಜನಗಳ ಹತ್ಯೆಗಳ ಹೀನ ಕೃತ್ಯ–ಸರಕಾರ ತುರ್ತು ಕ್ರಮಗಳನ್ನು ಕೈಗೊಳ್ಳಬೇಕು”

ಕೇಂದ್ರ ಗೃಹಮಂತ್ರಿಗಳಿಗೆ ಸಿಪಿಐ(ಎಂ) ಸಂಸದ ಶಿವದಾಸನ್ ಪತ್ರ

ಕಾಶ್ಮೀರದಲ್ಲಿ ಪರಿಸ್ಥಿತಿ ಅತ್ಯಂತ ಕಳವಳಕಾರಿಯಾಗಿದೆ, ನಾಗರಿಕರ ಬದುಕಿನ ಹಕ್ಕನ್ನು ಖಾತ್ರಿಪಡಿಸಬೇಕಾಗಿದೆ, ಇದಕ್ಕಾಗಿ ಸರಕಾರ ಮುಂದಾಗಿ ಕ್ರಮಗಳನ್ನು ಕೈಗಳ್ಳಬೇಕಾಗಿದೆ, ಜನಗಳ ಜೀವ ಮತ್ತು ಜೀವನೋಪಾಯಗಳನ್ನು ರಕ್ಷಿಸಬೇಕಾಗಿದೆ ಎಂದು ರಾಜ್ಯಸಭೆಯಲ್ಲಿ ಸಿಪಿಐ(ಎಂ) ಸದಸ್ಯ ವಿ. ಶಿವದಾಸನ್ ಜೂನ್ 7ರಂದು ಕೇಂದ್ರ ಗೃಹ ಮಂತ್ರಿಗೆ ಪತ್ರ ಬರೆದು ಆಗ್ರಹಿಸಿದ್ದಾರೆ.

ಕಾಶ್ಮೀರದಲ್ಲಿ ಪರಿಸ್ಥಿತಿ ಅತ್ಯಂತ ಕಳವಳಕಾರಿಯಾಗಿದೆ. ಅಮಾಯಕ ನಾಗರಿಕರು ನಿಲ್ಲದೆ ಸಾಗಿರುವ ಹತ್ಯೆಗಳಿಗೆ ಬಲಿಯಾಗುತ್ತಿದ್ದಾರೆ. ಭಯೋತ್ಪಾದಕರು ಹರಿಯಬಿಟ್ಟ ಹೀನ ದಾಳಿಗಳಿಂದ 18ಕ್ಕೂ ಹೆಚ್ಚು ಮಂದಿ ಪ್ರಾಣ ಕಳಕೊಂಡಿದ್ದಾರೆ. ಇತರ ಜನಗಳು ಜೀವ ಭಯದಿಂದ ಬದುಕುವಂತಾಗಿದೆ. ಮಹಿಳಾ ಕಲಾಕಾರರಾದ ಅಮ್ರೀನಾ ಭಟ್ ರಿಂದ ಹಿಡಿದು ಬ್ಯಾಂಕ್ ಮ್ಯಾನೇಜರ್ ವಿಜಯ್ ಕುಮಾರ್ ವರೆಗೆ ವಿವಿಧ ಜನವಿಭಾಗಗಳ ಜನರನ್ನು ಒಬ್ಬೊಬ್ಬರನ್ನಾಗಿ ಗುರುತಿಸಿ ಕಗ್ಗೊಲೆ ನಡೆಸಲಾಗುತ್ತಿದೆ ಮತ್ತು ಅವರ ಕುಟುಂಬಗಳ ಸದಸ್ಯರುಗಳ ಮೇಲೆ ಹಲ್ಲೆ ನಡೆಸಲಾಗುತ್ತಿದೆ.

ಕಾಶ್ಮೀರಿ ಪಂಡಿತ್ ಸಮುದಾಯದವರು ರಕ್ಷಣೆ ಮತ್ತು ಭದ್ರತೆಗೆ ಆಗ್ರಹಿಸಿ ಬೀದಿಗಿಳಿದಿದ್ದಾರೆ. ಕಾಶ್ಮೀರದಲ್ಲಿನ ಪರಿಸ್ಥಿತಿ 1990ರ ದಶಕದಲ್ಲಿದ್ದುದಕ್ಕಿಂತಲೂ ಕೆಟ್ಟದಾಗಿದೆಂದು ಅವರಲ್ಲಿ ಹಲವರು ಭೀತಿ ವ್ಯಕ್ತಪಡಿಸಿದ್ದಾರೆ. ಜಮ್ಮು ಮತ್ತು ಕಾಶ್ಮೀರ ಆಡಳಿತ ತಮ್ಮನ್ನು ಒತ್ತೆಯಾಳುಗಳಾಗಿ ಮಾಡಿಕೊಂಡಿದೆ, ತಮ್ಮನ್ನು ಒಳಗೇ ಬಂಧಿಸಿಟ್ಟಿದೆ ಎಂದೂ ಅವರು ಆರೋಪಿಸಿದ್ದಾರೆ.

ಒಂದು ಪ್ರಜಾಸತ್ತಾತ್ಮಕವಾಗಿ ಚುನಾಯಿತವಾದ ಸರಕಾರ ಇಲ್ಲದಿರುವುದು ಮತ್ತು ಆಡಳಿತ ಜನಗಳಿಗೆ ಪರಿಕೀಯಗೊಂಡಿರುವುದು ಪರಿಸ್ಥಿತಿಯನ್ನು ಉಲ್ಬಣಗೊಳಿಸಿದೆ ಎಂದಿರುವ ಈ ಪತ್ರ ಮೇಲಿನಿಂದ ನೇಮಿಸಲ್ಪಟ್ಟಿರುವ ಆಡಳಿತ ತಮಗೆ ನೀಡಿರುವ ಅಧಿಕಾರವನ್ನು ಯಾರ ಮೇಲೆ ಚಲಾಯಿಸುತ್ತಿದೆಯೋ ಅಂತಹ ಜನಗಳೊಂದಿಗೆ ಸಂಪರ್ಕ ಕಳಕೊಂಡಿದೆ ಎಂದು ಖೇದ ವ್ಯಕ್ತಪಡಿಸಿದೆ. ಇದರಿಂದಾಗಿ ಆಡಳಿತ ಯಂತ್ರಕ್ಕೆ ಲಕ್ವಾ ಹೊಡೆದಂತಾಗಿದೆ, ಜನಗಳಿಂದ ದೂರವಾದ ಮತ್ತು ಪ್ರಜಾಸತ್ತಾತ್ಮಕ ಜನಾದೇಶವಿಲ್ಲದ ಆಡಳಿತ ತನ್ನ ಮುಂದಿರುವ ಕ್ಲಿಷ್ಟ ಪರಿಸ್ಥಿತಿಯನ್ನು ಅರ್ಥ ಮಾಡಿಕೊಳ್ಳುವ

ಪುಟ 7 ಕ್ಕೆ

ಸಂಪಾದಕೀಯ

ರಾಜ್ಯ ಸಭೆ ಚುನಾವಣೆ: ಕಾಂಗ್ರೆಸ್– ಜೆ.ಡಿ.ಎಸ್ ಪಕ್ಷಗಳ ಅಕ್ಷಮ್ಯ ಹೊಣೆಗೇಡಿತನ

ಕರ್ನಾಟಕದ ವಿಧಾನಸಭೆಯಿಂದ ರಾಜ್ಯಸಭೆಯ ನಾಲ್ಕು ಸದಸ್ಯರ ಆಯ್ಕೆಗಾಗಿ ಜೂನ್ 10 ರಂದು ನಡೆದ ಚುನಾವಣಾ ಫಲಿತಾಂಶವು ಅಚ್ಚರಿ ಮತ್ತು ರಾಜಕೀಯವಾಗಿ ಗಂಭೀರ ಪರಿಣಾಮವನ್ನು ಬೀರಬಲ್ಲ ಸಂಕೇತಗಳನ್ನು ನೀಡಿದೆ. ಒಬ್ಬ ಅಭ್ಯರ್ಥಿ ಗೆಲುವಿಗೆ 45 ಮತಗಳು ಅಗತ್ಯ ಎಂದು ಭಾವಿಸಿದಲ್ಲಿ ವಿಧಾನಸಭೆಯಲ್ಲಿನ ವಿವಿಧ ಪಕ್ಷಗಳ ಸಂಖ್ಯಾಬಲವನ್ನು ಪರಿಗಣಿಸಿದರೆ ಬಿಜೆಪಿ ಎರಡು ಸ್ಥಾನ, ಕಾಂಗ್ರೆಸ್ ಒಂದು ಸ್ಥಾನವನ್ನು ಅನಾಯಾಸವಾಗಿ ಗೆಲ್ಲುವುದು ನಿರೀಕ್ಷಿತವಾಗಿತ್ತು. ಈ ನಂತರದಲ್ಲೂ ವಿವಿಧ ಪಕ್ಷಗಳಲ್ಲಿ ಉಳಿಯುವ ಹೆಚ್ಚುವರಿ ಸಂಖ್ಯೆಯನ್ನು ಲಕ್ಷಿಸಿದರೆ ಬಿಜೆಪಿ ಹೊರತು ಪಡಿಸಿಯೂ ಮತ್ತೊಬ್ಬ ಅಭ್ಯರ್ಥಿಯ ಆಯ್ಕೆಯು ಆಗಲಿತ್ತು. ಕಾಂಗ್ರೆಸ್ ಮತ್ತು ಜೆಡಿಎಸ್ ಪಕ್ಷಗಳ ನಡುವಿನ ತೀವ್ರ ಕಿತ್ತಾಟದಿಂದಾಗಿ ಅದು ಕೈತಪ್ಪಿ ಸುಲಭವಾಗಿ ಬಿಜೆಪಿಗೆ ದೊರೆಯುವಂತೆ ಮಾಡಿದ್ದು ರಾಜಕೀಯವಾಗಿ ಅತ್ಯಂತ ನಕಾರಾತ್ಮಕ ಬೆಳವಣಿಗೆ.

ಫ್ಯಾಸಿಸ್ಟ್ ಮನೋಭಾವದ ಬಿಜೆಪಿ ಮತ್ತು ಸಂಘ ಪರಿವಾರಕ್ಕೆ ತಕ್ಕ ಉತ್ತರವನ್ನು ನೀಡಿ ಭವಿಷ್ಯದ ರಾಜಕೀಯ ಬೆಳವಣಿಗೆಗಳಿಗೆ ಜನತೆಯಲ್ಲಿ ಆತ್ಮವಿಶ್ವಾಸವನ್ನು ಉಂಟು ಮಾಡುವ, ರಾಜ್ಯದ ಹಿತವೇ ಪ್ರಮುಖ ಎಂದು ಸಾರಿ ಹೇಳುವ ಅತ್ಯಂತ ಮಹತ್ವದ ಒಂದು ಸಂದರ್ಭವನ್ನು ಇದು ಕಳೆದುಕೊಳ್ಳುವಂತೆ ಮಾಡಿದೆ. ಇದರಲ್ಲಿ ಕೆಲವರ ವ್ಯಕ್ತಿ ಪ್ರತಿಷ್ಠೆ, ಸೇಡು ಹಾಗೂ ರಾಜಕೀಯ ಹೊಣೆಗೇಡಿತನ ಎದ್ದು ಕಾಣುತ್ತದೆ. ಜಾತ್ಯಾತೀತ ಪಕ್ಷಗಳ ನಡುವಿನ ವೈರುದ್ಯಗಳನ್ನು ಬಿ.ಜೆ.ಪಿ ಪಕ್ಷ ತನ್ನ ಅನುಕೂಲಕ್ಕೆ ತಕ್ಕಂತೆ ಬಳಸಿಕೊಂಡು ಶಕ್ತಿವರ್ಧನೆ ಮಾಡಿಕೊಂಡಿದೆ. ಮಾತ್ರವಲ್ಲದೆ ವಿರೋಧಪಕ್ಷಗಳ ಸದಸ್ಯ ಬಲದ ಬುಟ್ಟಿಗೆ ಕೈಹಾಕಿ ಯಶಸ್ಸು ಪಡೆಯಬಲ್ಲೆ ಎನ್ನುವ ಬಿಜೆಪಿಯ ರಾಜಕೀಯ ಬೆದರಿಕೆಯನ್ನು ಇದು ಎತ್ತಿ ತೋರಿಸುತ್ತದೆ. ಇದೇ ಚುನಾವಣೆಯಲ್ಲಿ ಮಹಾರಾಷ್ಟ್ರ ಮುಂತಾದೆಡೆ ಅದರ ರಾಜಕೀಯ ಆಕ್ರಮಣ ನಿಚ್ಚಳವಾಗಿ ಕಂಡಿದೆ.

ಕರ್ನಾಟಕ ವಿಧಾನ ಸಭೆಯಲ್ಲಿರುವ 121 ಬಿಜೆಪಿ ಶಾಸಕರ ಸಂಖ್ಯೆಯನ್ನು ಲಕ್ಷಿಸಿದರೆ ಅಭ್ಯರ್ಥಿಯಾಗಿದ್ದ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಮತ್ತು ಸಿನಿಮಾ ನಟ ಜಗ್ಗೇಶ್ ಅವರು ಆಯ್ಕೆಯಾಗಿ ಅದರ ಬಳಿ 31 ಸಂಖ್ಯೆಯ ಮತದಾರರು ಉಳಿಯುತ್ತಿದ್ದರು. ಕಾಂಗ್ರೆಸ್ ಪಕ್ಷದಿಂದ ಸ್ಪರ್ಧಿಸಿದ್ದ ಮಾಜಿ ಸಚಿವ ಜೈರಾಮ್ ರಮೇಶ್ ಅವರ ಆಯ್ಕೆಯ ನಂತರ ಅದರ ಬಳಿ 25 ಉಳಿಯುತ್ತಿದ್ದವು. 32 ಸದಸ್ಯರನ್ನು ಹೊಂದಿದ್ದ ಜಾತ್ಯಾತೀತ ಜನತಾದಳ ತನ್ನ ಅಭ್ಯರ್ಥಿಯಾದ ಕುಪೇಂದ್ರರೆಡ್ಡಿಯವರ ಗೆಲುವಿಗೆ ಸರಳ ಲೆಕ್ಕಾಚಾರ ಹಾಕಿತ್ತಾದರೂ ಬೇರೆ ಪಕ್ಷದ ಮತಗಳು ಇಲ್ಲವೇ ಎರಡನೆಯ ಪ್ರಾಶಸ್ತ್ಯದ ಮತಗಳಿಲ್ಲದೇ ಗೆಲ್ಲುವುದು ದುರ್ಲಭವಾಗಿದ್ದ ಜೆಡಿ ಎಸ್ ಪಕ್ಷದ ಸ್ಥಿತಿ ಹಗ್ಗದ ಮೇಲಿನ ನಡಿಗೆಯಾಗಿತ್ತು. ಹೀಗಾಗಿ ಅನಿವಾರ್ಯವಾಗಿ ಬೇರೊಂದು ಪಕ್ಷದ ಮತದಾರರ ಬೆಂಬಲ ಅಗತ್ಯವಿತ್ತು. ಕಾಂಗ್ರೆಸ್ಸಿನ ಬೆಂಬಲವನ್ನು ಅದು ನಿರೀಕ್ಷಿಸಿದ್ದು ಸಹಜವಾಗಿತ್ತು. ಆರಂಭದಲ್ಲಿ ಕೇವಲ ಒಂದು ಸ್ಥಾನಕ್ಕೆ ಅಭ್ಯರ್ಥಿಯನ್ನು ಇಳಿಸುವುದಾಗಿ ನಿರ್ಧರಿಸಿದ್ದ ಕಾಂಗ್ರೆಸ್ ಪ್ರಕ್ರಿಯೆಯ ಒಂದು ಹಂತದಲ್ಲಿ ಎರಡನೆಯ ಅಭ್ಯರ್ಥಿಯಾಗಿ ಮಮ್ತಾಜ್ ಅಲಿ ಖಾನ್ ರವರನ್ನು ಕಣಕ್ಕೆ ಇಳಿಸಿದ್ದು ಜೆ.ಡಿ.ಎಸ್. ನ ನಿರೀಕ್ಷೆಯನ್ನು ಆತಂಕಕ್ಕೆ ಈಡು ಮಾಡಿತ್ತು. ಇಂತಹ ನಿರ್ಧಾರದ ಹಿಂದೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯನವರ ಬಹು ಮುಖ್ಯ ಪಾತ್ರ ಹಾಗೂ ರಾಜಕೀಯ ತಂತ್ರಗಾರಿಕೆ ಇದೆ ಎಂದೂ ಹೇಳಲಾಗುತ್ತಿದೆ. ಆರಂಭದಲ್ಲಿ ಎರಡನೆಯ ಅಭ್ಯರ್ಥಿಗೆ ಒಪ್ಪಿಗೆಯಿಲ್ಲದ ಹೈಕಮಾಂಡ್ ನಂತರದ ಬೆಳವಣಿಗೆಯಲ್ಲಿ ಸಮ್ಮತಿ ನೀಡಿತು.

ಇದರಲ್ಲಿ ಜೆ.ಡಿ.ಎಸ್ ನಾಯಕರು ವಿಶೇಷವಾಗಿ ಅಭ್ಯರ್ಥಿ ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರನ್ನು ಮತ್ತು ವಿಧಾನಪರಿಷತ್ತಿನ ನಾಯಕರಾದ ಬಿ.ಕೆ.ಹರಿಪ್ರಸಾದ ರವರನ್ನು ಕಂಡು ಮಾತನಾಡಿದರೆಂದು, ಸಿದ್ದರಾಮಯ್ಯನವರನ್ನು ಕಂಡು ಮಾತನಾಡಿಲ್ಲ ಎನ್ನುವ ಮುಜುಗರದ ಒಂದು ಪ್ರಶ್ನೆಯೂ ಕಾರಣವಾಯಿತೇ ಎಂಬ ಅಂಶ ಚರ್ಚೆಗೆ ಒಳಪಟ್ಟಿದೆ. ಎರಡೂ ಪಕ್ಷಗಳಿಂದ ಸಮಾನಾಂತರ ದೂರ ಎಂದು ಜೆ.ಡಿ.ಎಸ್ ಹೇಳಿಕೊಂಡಿದ್ದರೂ ಬಿಜೆಪಿಗೆ ಎದುರಾಗಿ ತನ್ನ ಅಸ್ತಿತ್ವವನ್ನು ಉಳಿಸಿಕೊಳ್ಳಲು ಹೋರಾಡುತ್ತಿದೆ. ಈ ಸನ್ನಿವೇಶದಲ್ಲಿ ಈಗ ಕಾಂಗ್ರೆಸ್ಸಿನ ಬೆಂಬಲದ ನಿರೀಕ್ಷೆ ಇಟ್ಟುಕೊಂಡಿದ್ದ ಜೆ.ಡಿ.ಎಸ್ ಪಕ್ಷಕ್ಕೆ ಖಾನ್ ರವರ ಅಭ್ಯರ್ಥಿತನದಿಂದ ಆತಂಕಕ್ಕೆ ಈಡಾದದ್ದು ಸಹಜವಾಗಿದೆ. ಆದಾಗ್ಯೂ, ಕೊನೆಯ ಗಳಿಗೆಯವರೆಗೆ ಜೆ.ಡಿ.ಎಸ್ ಮತ್ತು ಕಾಂಗ್ರೆಸ್ ಪಕ್ಷಗಳ ನಡುವೆ ಆಂತರಿಕ ಮತ್ತು ಬಹಿರಂಗ ಮಾತುಕತೆಗಳು ನಡೆಯುತ್ತಲೇ ಇದ್ದವು. ಕೊನೇ ಪಕ್ಷ ಮೊದಲ ಪ್ರಾಶಸ್ತ್ಯ ಮತ ನೀಡದಿದ್ದರೂ ಎರಡನೆಯ ಪ್ರಾಶಸ್ತ್ಯದ ಮತಗಳನ್ನಾದರೂ ನೀಡಿ ಎನ್ನುವುದು ಜೆ.ಡಿ.ಎಸ್ ನ ಕೋರಿಕೆ ಯಾಗಿತ್ತು. ಮತದಾನದ ಸಂದರ್ಭದಲ್ಲಿ ಕಾಂಗ್ರೆಸ್ ಪಕ್ಷ ಜೆ.ಡಿ.ಎಸ್.ನ್ನು ಬೆಂಬಲಿಸಲಿಲ್ಲ. ಮಾತ್ರವಲ್ಲ, ಮತ್ತೊಂದೆಡೆ ಜೆ.ಡಿ.ಎಸ್ ಪಕ್ಷದಲ್ಲಿದ್ದ ಕೋಲಾರದ ಶ್ರೀನಿವಾಸಗೌಡ, ಗುಬ್ಬಿ ಕ್ಷೇತ್ರದ ಶ್ರೀನಿವಾಸ್ ಈ ಇಬ್ಬರು ಶಾಸಕರು ಅಡ್ಡ ಮತದಾನ ಮಾಡುವ ಮೂಲಕ ಬಿಜೆಪಿಯ ಲೆಹರ್ ಸಿಂಗ್ ರ ಗೆಲುವು ಇನ್ನಷ್ಟು ಸುಭವಾಗಲು ಕಾರಣರಾದರು. ಹೀಗಾಗಿ ಜೆ.ಡಿ.ಎಸ್. ನಿಕಟದಲ್ಲಿ ಪರಾಭವವಾಯಿತು.

ಕಾಂಗ್ರೆಸ್ ಮೂರನೇ ಅಭ್ಯರ್ಥಿಯನ್ನಾಗಿ ಅಲಿಖಾನ್ ರವನ್ನು ಕಣಕ್ಕಿಳಿಸಿ ಅಲ್ಪಸಂಖ್ಯಾತ ಅಭ್ಯರ್ಥಿಯನ್ನು ಗೆಲ್ಲಿಸಲು ಜೆ.ಡಿ.ಎಸ್ ಪಕ್ಷ ಮುಂದಾಗಲಿಲ್ಲ ಎನ್ನುವ ಒಂದು ಆರೋಪವನ್ನು ಅದರ ಮೇಲೆಯೇ ಹೊರಿಸಬಹುದಾದ ರಾಜಕೀಯ ತಂತ್ರವೂ ಇತ್ತು ಎಂದು ಹೇಳಲಾಗುತ್ತಿದೆ. ಕಾಂಗ್ರೆಸ್ಸಿನ ಆ ನಡೆಯ ಹಿಂದೆ ಆ ಪಕ್ಷದ ಕೆಲವು ಮತ್ತು ಬಿಜೆಪಿ ಪಕ್ಷದೊಳಗಿನ ಕೆಲವು ನಾಯಕರ ನಡುವಿನ ಒಳ ಒಪ್ಪಂದಗಳು ಕಾರಣವಾಗಿವೆ. ಅದಕ್ಕಾಗಿ ಜೆ.ಡಿ.ಎಸ್ ನಾಯಕರ ವಿರುದ್ಧವಿರುವ ಕಾಂಗ್ರೆಸ್ಸಿನ ವೈಷಮ್ಯಗಳನ್ನು ಬಿಜೆಪಿ ಯಶಸ್ವಿಯಾಗಿ ಬಳಸಿಕೊಂಡಿದೆ ಎಂದೂ ಹೇಳಲಾಗುತ್ತಿದೆ. ಬಿಜೆಪಿಯನ್ನು ಎದುರಿಸಬೇಕಾದ ಸಂದರ್ಭದಲ್ಲಿ ಕಾಂಗ್ರೆಸ್ ಪಕ್ಷವು ಜೆ.ಡಿ.ಎಸ್ ಪಕ್ಷವೇ ತನ್ನ ಮೊದಲ ಶತ್ರುವೆಂದು ಭಾವಿಸಿ ವರ್ತಿಸಿದೆ ಎಂದು, ಬಿಜೆಪಿ ವಿರುದ್ಧದ ಹೋರಾಟ ಎನ್ನುವುದು ಸೋಗಲಾಡಿತನ ಎಂದು ಜೆ.ಡಿ.ಎಸ್ ಸಹ ತೀವ್ರವಾಗಿ ಟೀಕಿಸಿದೆ. ಟೀಕೆ ಆರೋಪ–ಪ್ರತ್ಯಾರೋಪಗಳ ಸತ್ಯಾಸತ್ಯತೆ ಏನೇ ಇದ್ದರೂ ಅಂತಿಮವಾಗಿ, ಬಿಜೆಪಿಯ ಶಕ್ತಿ ಬಲಗೊಳ್ಳಲು ಇವೆಲ್ಲಾ ಕಾರಣವಾದವು ಎನ್ನುವುದನ್ನು ಗಂಭೀರವಾಗಿ ಪರಿಗಣಿಸಬೇಕು. ಇದು ಅಕ್ಷಮ್ಯ.

ರಾಜ್ಯಸಭೆಯ ಸದಸ್ಯರಾಗಿ ಆಯ್ಕೆಗೊಳ್ಳುವ ಈ ಚುನಾವಣೆ ಖರ್ಚುಗಳು ಸಹ ಅತ್ಯಂತ ದುಬಾರಿ 'ವ್ಯವಹಾರ'ವಾಗಿರುವಾಗ ತಕ್ಕಡಿಯ ಮುಳ್ಳು ಯಾರತ್ತ ವಾಲಿದೆ ಎನ್ನುವುದೂ ಊಹಾತೀತ! ಪುಟ 4 ಕ್ಕೆ

ಪ್ರತಿ ದಿನವೂ ಒಂದಿಲ್ಲೊಂದು ವಿವಾದ. ವಿದ್ವೇಷ, ಆವೇಶ ಹೆಚ್ಚಿಸುವ ಸ್ಫೋಟಕ ಮಾತುಗಳು. ಒಮ್ಮೆ ಧಾರ್ಮಿಕ ಆಚರಣೆಗಳನ್ನು ಹೀಗಳೆದರೆ ಮತ್ತೊಮ್ಮೆ ಮತಧರ್ಮ ಹಾಗೂ ಅನುಯಾಯಿಗಳನ್ನು ಅವಹೇಳನ ಮಾಡಿ ಅವರನ್ನು ಅಪರಾಧಿ ಸ್ಥಾನದಲ್ಲಿ ನಿಲ್ಲಿಸಿ, ನ್ಯಾಯ ನಿರ್ಣಯಿಸಿ ದಂಡಿಸುವ ನಡೆಗಳು. ಪ್ರತಿಭಟಿಸಿದರೆ ಮನೆಗಳನ್ನೇ ನೆಲ ಸಮಗೊಳಿಸುವ ಕೃತ್ಯಗಳು. ಇವರ ವಿಷದ ನಾಲಿಗೆಗೆ ಉಣ್ಣುವ ಆಹಾರವೂ ತಪ್ಪಿಸಿಕೊಂಡಿಲ್ಲ. ವಿವಾದಕ್ಕೆ ಪೂಜಾ ಸ್ಥಳಗಳೂ ಹೊರತಾಗಲಿಲ್ಲ. ಇಷ್ಟಕ್ಕೆ ಕೋಮುವಾದಿ ಪಿಶಾಚಿಗಳಿಗೆ ತೃಪ್ತಿ ಇಲ್ಲ. ಇದೀಗ ಧರ್ಮ ಪ್ರವರ್ತಕ, ಪ್ರವಾದಿ ಮಹಮ್ಮದ್ ಪೈಗಂಬರ್ ರವರನ್ನೇ ಗುರಿಯಾಗಿಸಿ ನಿಂದಿಸಲಾಗಿದೆ. ಏನು ಮಾಡಿಯಾದರೂ ಜನರನ್ನು ಪ್ರಚೋದಿಸಬೇಕು. ಕೆರಳಿಸಬೇಕು. ಮೇಲಿಂದ ಮೇಲೆ ಬೀಳುವ ಪೆಟ್ಟು, ಅವಹೇಳನಗಳಿಂದ ಸಹಿಸಲು ಅಸಾಧ್ಯವೆಂದು 'ನೀರೊಳಗಿರ್ದೂ ಬೆವರ ಬೇಕು', ಬೀದಿಗಿಳಿಯಬೇಕು. ಏನೋ ಒಂದು ಅಚಾತುರ್ಯ ನಡೆದು ಗಲಭೆ ಸಿಡಿಯಬೇಕು. ಅವರನ್ನು ಹುಡುಕಿ, ಹುಡುಕಿ ಜೇಲಿಗಟ್ಟ ಬೇಕು. 'ನೋಡಿ ಅಪರಾಧಿಗಳೆಲ್ಲಾ ಇವರೇ. ಇವರ ಬಣ್ಣ ಎಲ್ಲಾ ಒಂದೇ. ಇದಕ್ಕೆಲ್ಲಾ ಅವರ ಧರ್ಮವೇ ಮೂಲ, ನಮ್ಮ ಧರ್ಮ ಅಪಾಯದಲ್ಲಿದೆ. ಬನ್ನಿ, ಒಂದಾಗಿ ದೇಶ ಉಳಿಸೋಣ' ಎಂದೆಲ್ಲಾ ಪ್ರವಚನಗಳು ನೀಡಬೇಕು. ಅದನ್ನೇ ಜಗದ ಮುಂದೆ ಚಾಚಿ ಪ್ರಜಾಪ್ರಭುತ್ವ, ಮತ ನಿರಪೇಕ್ಷತೆಯ ಮೌಲ್ಯಗಳೇ ಇಷ್ಟೆಲ್ಲವಕ್ಕೂ ಕಾರಣವಾಗಿ ಇರುವುದರಿಂದ ಅಂತಹದ್ದನ್ನು ರಕ್ಷಿಸುವ ಈ ಸಂವಿಧಾನವನ್ನು ಕಿತ್ತೆಸೆದು ಹಿಂದುತ್ವ ಆಧಾರಿತ ವ್ಯವಸ್ಥೆ ಜಾರಿಯಾಗಬೇಕು.

ಈ ವಾರ

ಹಿಂಸಾತ್ಮಕ ಪ್ರಚೋದನೆಗಳಿಗೆ ಶಾಂತಿ ಸಂಯಮವೇ ಉತ್ತರ

ಎಸ್.ವೈ. ಗುರುಶಾಂತ್

ಎಲ್ಲಿಂದಲೋ ಆರಂಭಗೊಂಡು ಇನ್ನೆಲ್ಲಿಗೋ ಮುಟ್ಟಿಸುತ್ತಾರೆ ಕುತರ್ಕಿಗಳು. ಪಠ್ಯಗಳ ವಿಕೃತಿಯೂ ನಡೆಯಿತು. ಹಿಜಾಬ್ ನಿಂದ ಹಲಾಲ್, ಆಜಾನ್ ದಾಟಿ ಮಸೀದಿ–ದರ್ಗಾಗಳೊಳಗೆ ಶಿವಲಿಂಗದ ಹುಡುಕಾಟವೂ ಮುಗಿಯಿತು ಇಂತಹವು ಒಂದೆರಡಲ್ಲ, ಕೆ.ಎಸ್. ಈಶ್ವರಪ್ಪನವರ ಪ್ರಕಾರ ಭಾರತದಲ್ಲಿ ಬರೋಬ್ಬರಿ 36000 ಇವೆಯಂತೆ. ಅವುಗಳ ವಿಮೋಚನೆ ಆಗಬೇಕಂತೆ. ಅದರಲ್ಲಿ ಶ್ರೀರಂಗಪಟ್ಟಣದ ಜುಮ್ಮಾ ಮಸೀದಿ ಹನುಮನ ಆವಾಸ ಸ್ಥಾನವಂತೆ. ಬಜರಂಗದಳದ ಕಾರ್ಯಕರ್ತರು ಪ್ರವಾಸಿಗಳಂತೆ ನುಸುಳಿ ಮಸೀದಿಯೊಳಗೆ ಕೂತು ಹನುಮಾನ್ ಚಾಲೀಸ್ ಪಠಣ ಮಾಡಿ ಅಸಹ್ಯ, ಅಸಭ್ಯತೆ ಮೆರೆದಿದ್ದಾರೆ. ಮತ್ತೇ ಬೆಂಗಳೂರಿನ ಚಾಮರಾಜಪೇಟೆ ಈದ್ಗಾ ಮೈದಾನದಲ್ಲಿ ತ್ರಿವರ್ಣ ಧ್ವಜವನ್ನು ತಾವು ಹಾರಿಸಬೇಕೆಂದೂ, ಗಣೇಶೋತ್ಸವವನ್ನೂ ಅಲ್ಲೇ ಮಾಡಬೇಕೆಂದೂ ವಿವಾದ ಹುಟ್ಟು ಹಾಕಿ ಗಲಾಟೆ ಎಬ್ಬಿಸಿದ್ದಾರೆ. ಇಂತಹವುಗಳಿಗೆ ಕುಮ್ಮಕ್ಕು ಕೊಡುವಂತೆ ಬಿ.ಬಿ.ಎಂ.ಪಿ ಮತ್ತು ಸರಕಾರದ ಇಲಾಖೆಗಳು ನಡೆದುಕೊಳ್ಳುತ್ತಿವೆ. ಈದ್ಗಾ ಮೈದಾನದ ವಿವಾದ ಸುಪ್ರಿಂ ಕೋರ್ಟ್ ಮೆಟ್ಟಿಲೇರಿ ಇತ್ಯರ್ಥವಾಗಿದೆ. ಅದು ವಕ್ಫ ಬೋರ್ಡ್ ಆಸ್ತಿ ಎಂದಾಗಿದೆ. ಅದರ ತೀರ್ಪು, ಕಾನೂನು ಆಧರಿಸಿ ಕ್ರಮ ವಹಿಸಿ ಎಂದು ಸಮುದಾಯದ ಮುಖಂಡರು ವಕ್ಫ್ ಬೋರ್ಡ್ ಅದ್ಯಕ್ಷರು ಹೇಳಿದರೂ ಅತ್ತ ಕಿವಿಗೊಡುವವರಿಲ್ಲ. ಸರಕಾರದ ಗೃಹ ಇಲಾಖೆಯ ಕತ್ತಿ ಅಲ್ಪಸಂಖ್ಯಾತರತ್ತಲೇ ಝುಳಪಿಸುತ್ತಿದೆ. ಸಂಘಪರಿವಾರ ಸುಮ್ಮನಿದ್ದವರ ಕಾಲು ತುಳಿದು ಕೆರಳಿಸಲು ನೋಡುತ್ತಿದೆ.

ನೋಡಿ, ಪ್ರವಾದಿಗಳನ್ನು ಏನಕೇನಾ ನಿಂದಿಸಿದ ಶ್ರೀಮತಿ ನೂಪುರ್ ಶರ್ಮಾ ರ ಮೆಲೆ ಕ್ರಮವಿಲ್ಲ. ಬಂಧನವನ್ನೂ ಮಾಡಿಲ್ಲ. ಬದಲಾಗಿ ಬಿಗಿ ಭದ್ರತೆ! ಆದರೆ ಪ್ರತಿಭಟಿಸಿದವರ ಮೇಲೆ ಹಲ್ಲೆ, ಪ್ರಚೋದನೆ, ಆಸ್ತಿ ನಾಶ, ಹಲವು ಕ್ರಿಮಿನಲ್ ಕೇಸ್ ಗಳ ದಾಖಲು. ಇದರರ್ಥ ಕಾನೂನು ಮೀರಿ ಗಲಭೆ ಎಬ್ಬಿಸಿದವರನ್ನು ರಕ್ಷಿಸಬೇಕೆಂದರೆ ಹೇಗೆ ಅಂತಹ ಕೃತ್ಯಗಳು ಅಪರಾಧವೋ ನೂಪುರ್ ಶರ್ಮರವರ ಕೃತ್ಯವೂ ಮಹಾಪರಾಧ. ಈ ಪ್ರಕರಣದಲ್ಲಿ ರಾಜ್ಯ ಸರ್ಕಾರ ಮತ್ತು ಕೇಂದ್ರದ ಪ್ರಧಾನಿ ನರೇಂದ್ರ ಮೋದಿ ಹಾಗೂ ಗೃಹ ಸಚಿವ ಅಮಿತ್ ಶಾ ರವರು ವಹಿಸಿದ ಘೋರ ಮೌನವು ಸಂದೇಶವನ್ನು ನೀಡುತ್ತಿದೆ? ನೂಪುರ್ ಶರ್ಮ ರವರ ಪ್ರಚೋದನಾತ್ಮಕ ಅವಹೇಳನ ಪ್ರಕರಣ ಹೊರ ಬಂದ ಕೂಡಲೇ ಸೂಕ್ತ ಕಾನೂನು ಕ್ರಮ ಜರುಗಿಸಿ ಬಂಧಿಸಿದ್ದರೆ ಮುಂದೆ ನಡೆಯಬಹುದಾದ ಪ್ರತಿಭಟನೆಗಳನ್ನು ತಡೆಯಬಹುದಿತ್ತು. ಮಾತ್ರವಲ್ಲ, ಅಂತರಾಷ್ಟ್ರೀಯ ಮಟ್ಟದಲ್ಲಿ ಭಾರತ ದೇಶ ತೀವ್ರತರ ಟೀಕೆಗೆ ಮತ್ತು ಒತ್ತಡಗಳಿಗೆ ಸಿಲುಕುವ ಒಂದು ಅವಮಾನಕಾರಿ ಪ್ರಸಂಗವನ್ನು ತಪ್ಪಿಸಬಹುದಿತ್ತು. ತನ್ನ ಶಾಮೀಲುತನ ಮತ್ತು ವೈಫಲ್ಯದ ಬಗ್ಗೆ ಇದರತ್ತ ಕೇಂದ್ರ ಮತ್ತು ರಾಜ್ಯದಲ್ಲಿನ ಸರಕಾರಗಳು ಚಕಾರವನ್ನೇ ಎತ್ತದಿರುವುದು ಆಶ್ಚರ್ಯ!

ಬೆಳಗಾವಿಯಲ್ಲಿ ಯಾರೋ ಕಿಡಿಗೇಡಿಗಳು ಶರ್ಮಾರ ಪ್ರತಿಕೃತಿಗೆ ನೇಣು ಹಾಕಿ ವಿಕೃತಿ ತೋರಿದರೆ ತನಿಖೆ ಆರಂಭಗೊಳ್ಳುವ ಮೊದಲೇ ಕೆಲವರನ್ನು ಅಪರಾಧಿ ಕಟೆಕಟೆಯಲ್ಲಿ ನಿಲ್ಲಿಸಿದ್ದಾಯ್ತು. ಮೇಲಾಗಿ ಗೃಹ ಸಚಿವ ಆರಗ ರವರ ಉಗ್ರ ಎಚ್ಚರಿಕೆಯ ಡ್ಯೂಟಿ!

ಇಲ್ಲಿ ಒಂದು ಮಾತನ್ನು ನೆನಪಿಡಬೇಕು. ಸಂಘಪರಿವಾರ ಮತ್ತು ಸರಕಾರ ಸಂಯೋಜಿತವಾದ ಪಾತ್ರವನ್ನು ನಿರ್ವಹಿಸುತ್ತಿವೆ ಎಂಬುದು ಎದ್ದುಕಾಣುತ್ತದೆ. ಸಂಘಪರಿವಾರ ಏನಾದರೂ ಮಾಡಿ ಮುಸ್ಲಿಂ ಅಲ್ಪಸಂಖ್ಯಾತರನ್ನು ಪ್ರಚೋದಿಸಿ ಅವರು ಆಕ್ರೋಶ ಗೊಳ್ಳುವಂತೆ ಮಾಡಬೇಕೆಂದು ಸತತ ಪ್ರಯತ್ನಿಸುತ್ತದೆ. ಹೀಗೆ ಆದಲ್ಲಿ ಬಹಳ ಸುಲಭವಾಗಿ ಅವರನ್ನು ತೋರಿಸಿ ಹಿಂದುತ್ವದ ಕಡೆಗೆ ಸಾಮಾನ್ಯ ಹಿಂದುಗಳನ್ನು, ಜನಸಾಮಾನ್ಯರನ್ನು ಸೆಳೆದು ಕೋಮು ಆಧಾರದಲ್ಲಿ ಧ್ರುವೀಕರಿಸಿಕೊಳ್ಳುವ ಯೋಜನೆಯನ್ನು ಅದು ಹೊಂದಿದೆ. ಇನ್ನೊಂದು ಕಡೆ ಅಲ್ಪಸಂಖ್ಯಾತರು ಕೆರಳಿ ಕೆಂಡವಾದರೆ ಅವರನ್ನು ಜೈಲಿಗಟ್ಟಿ ದಂಡಿಸಿ ಶಾಶ್ವತ ಅಪರಾಧಿಗಳನ್ನಾಗಿ ಮಾಡಲಾಗುತ್ತದೆ. ಇಂತಹ ಸನ್ನಿವೇಶದಲ್ಲಿ ಯಾರೂ ಕೂಡ ಪ್ರಚೋದನೆಗೆ ಒಳಗಾಗಬಾರದು. ಅತ್ಯಂತ ಶಾಂತಿ, ಸಂಯಮದಿಂದ ಇದನ್ನು ಎದುರಿಸಬೇಕು. ಇದೇ ಹೊತ್ತಿನಲ್ಲಿ ಸಂಘಪರಿವಾರದ ಹುನ್ನಾರಗಳನ್ನು ಬಯಲಿಗೆಳೆದು ಸೋಲಿಸಬೇಕು. ಆದರೆ ಭಾರತ ದೇಶದ ಹಲವು ಕಡೆಗಳಲ್ಲಿ ಆತಂಕಿತರಾದ ಅಲ್ಪಸಂಖ್ಯಾತ ಸಮುದಾಯವನ್ನು ಪ್ರಚೋದಿಸಿ ಸಂಘ ಪರಿವಾರದ ಬಲೆಗೆ ಜನರನ್ನು ಕೆಡಹುವ ಪ್ರಯತ್ನಗಳು ನಡೆದಿವೆ. ಅಂತಹುದಕ್ಕೆ ಕರ್ನಾಟಕ ರಾಜ್ಯದ ಜನ ಕಿವಿಗೊಡಬಾರದು ಮತ್ತು ಹಿಂದಿನಂತೆ ಸಂಯಮ ದೃಢತೆಯಿಂದ ಅವನ್ನು ತಿರಸ್ಕರಿಸಿ, ಸೋಲಿಸಬೇಕು.

ಅವೈಜ್ಞಾನಿಕ ಟ್ರಾಫಿಕ್ ಐಲ್ಯಾಂಡ್ ರಚನೆ ವಿರೋಧಿಸಿ ಮಂಗಳೂರಿನಲ್ಲಿ ಪ್ರತಿಭಟನೆ

ಮಂಗಳೂರು ನಗರದಲ್ಲಿ ಸ್ಮಾರ್ಟ್ ಸಿಟಿ ಯೋಜನೆಯಡಿ ಅವೈಜ್ಞಾನಿಕ ಟ್ರಾಫಿಕ್ ಐಲ್ಯಾಂಡ್‌ಗಳ ನಿರ್ಮಾಣಕ್ಕಾಗಿ ತಾತ್ಕಾಲಿಕ ಕಲ್ಲುಗಳನ್ನು ಹಾಕಲಾಗಿದೆ. ಇದರಿಂದ ಸುಗಮ ಸಂಚಾರಕ್ಕೆ ತೊಂದರೆಯಾಗುತ್ತಿದ್ದು ವಾರದೊಳಗೆ ಆ ಕಲ್ಲುಗಳನ್ನು ತೆರವುಗೊಳಿಸದಿದ್ದರೆ ಸಾರ್ವಜನಿಕರೊಂದಿಗೆ ಸಂಘಟನೆಯ ಕಾರ್ಯಕರ್ತರೇ ಆ ಕಾರ್ಯವನ್ನು ಮಾಡಲಿದ್ದಾರೆ ಎಂದು ಡಿವೈಎಫ್ಐ ಜಿಲ್ಲಾಧ್ಯಕ್ಷ ಬಿ.ಕೆ. ಇಮ್ತಿಯಾಜ್ ಹೇಳಿದ್ದಾರೆ.

ನಗರದ ಹ್ಯಾಮಿಲ್ಟನ್ ಸರ್ಕಲ್‌ನಲ್ಲಿ ಡಿವೈಎಫ್ಐ ನೇತೃತ್ವದಲ್ಲಿ ನಗರದ ವಿವಿದ ಕಡೆ ಟ್ರಾಫಿಕ್ ಐಲ್ಯಾಂಡ್ ರಚನೆಯನ್ನು ವಿರೋಧಿಸಿ ಜೂನ್ 9 ರಂದು ನಡೆದ

ವರದಿ: ವಾ. ಉಚ್ಚಿಲ್

ಪ್ರತಿಭಟನೆಯನ್ನುದ್ದೇಶಿಸಿ ಅವರು ಮಾತನಾಡಿದರು.

ಟ್ರಾಫಿಕ್ ಐಲ್ಯಾಂಡ್ ನಿರ್ಮಾಣದ ಹಿನ್ನೆಲೆಯಲ್ಲಿ ಒಂದು ವಾರದ ಪ್ರಾಯೋಗಿಕ ನೆಲೆಯಲ್ಲಿ ನಗರದ ಹ್ಯಾಮಿಲ್ಟನ್, ಕ್ಲಾಕ್ ಟವರ್ ಬಳಿ ಕಲ್ಲುಗಳನ್ನು ಹಾಕಿ ವಿನ್ಯಾಸ ಮಾಡಲಾಗಿದೆ. ಆದರೆ ಇದರಿಂದ ಈಗಾಗಲೇ ವಾಹನ ದಟ್ಟಣೆಯಿಂದ ಕೂಡಿದ ಈ ಪ್ರದೇಶಗಳಲ್ಲಿ ಟ್ರಾಫಿಕ್ ಸಮಸ್ಯೆ ಎದುರಾಗಿದೆ.



ಲೇಡಿಗೋಶನ್ ರಕ್ತನಿಧಿಯಿಂದ ನಗರದ ಬೇರೆ ಆಸ್ಪತ್ರೆಗಳಿಗೆ ರಕ್ತ ವರ್ಗಾವಣೆಗೆ ಗಂಟೆಗಟ್ಟಲೆ ಸಂಚಾರ ಮಾಡಬೇಕಾಗಿದೆ. ಬೀದಿ ಬದಿ ವ್ಯಾಪಾರಿಗಳಿಂದ ಟ್ರಾಫಿಕ್ ಸಮಸ್ಯೆ ಉಂಟಾಗುತ್ತಿದೆ ಎನ್ನುವವರಿಗೆ ಇಂತಹ ಅವೈಜ್ಞಾನಿಕ ರಸ್ತೆ ಕಾಮಗಾರಿಗಳ ಬಗ್ಗೆ ಅರಿವು ಯಾಕೆ ಆಗುತ್ತಿಲ್ಲ ಎಂದವರು ಪ್ರಶ್ನಿಸಿದರು.

ಸಿಪಿಎಂ ಮುಖಂಡ ಸುನಿಲ್ ಕುಮಾರ್ ಬಜಾಲ್ ಮಾತನಾಡಿ, ಈಗಾಗಲೇ ಅಭಿವೃದ್ಧಿ ಹೆಸರಿನಲ್ಲಿ ಇದ್ದ ಕಾಂಕ್ರಿಟ್ ರಸ್ತೆ, ವ್ಯವಸ್ಥೆಗಳನ್ನು ತೆರವುಗೊಳಿಸಿ ಅಭಿವೃದ್ಧಿ ಹೆಸರಿನಲ್ಲಿ ಲೂಟಿ ಮಾಡಲಾಗುತ್ತಿದೆ. ಇದು ಪರ್ಸೆಂಟ್ ಕಮಿಷನ್ ರಾಜಕೀಯದ ಭಾಗ ಎಂದು ಆರೋಪಿಸಿದರು.

ಪ್ರತಿಭಟನೆಯಲ್ಲಿ ಮುಖಂಡರಾದ ದಯಾನಂದ ಶೆಟ್ಟಿ, ಮನೋಜ್ ವಾಮಂಜೂರು, ನವೀನ್ ಕೊಂಚಾಡಿ, ಮಾಧುರಿ ಬೋಳಾರ್, ಭಾರತಿ ಬೋಳಾರ್, ಕಟ್ಟಡ ಕಾರ್ಮಿಕರ ಸಂಘಟನೆಯ ಯೋಗೀಶ್ ಜಪ್ಪಿನಮೊಗರು, ಸಾಮಾಜಿಕ ಕಾರ್ಯಕರ್ತ ಜೆರಾರ್ಡ್ ಟವರ್ಸ್, ಹಮಾಲಿ ಸಂಘದ ವಿಲ್ಲಿ ವಿಲ್ಸನ್, ವಿದ್ಯಾರ್ಥಿ ಸಂಘಟನೆಯ ಪ್ರಥಮ್ ಬಜಾಲ್, ರೇವಂತ್ ಮತ್ತಿತರರು ಭಾಗವಹಿಸಿದ್ದರು.

ಪಠ್ಯ ಪುಸ್ತಕ ಪರಿಷ್ಕರಣ - ಹೊಣೆಗೇಡಿ ಸಚಿವ ನಾಗೇಶ್ ವಜಾಕ್ಕೆ ಸಿಪಿಐ(ಎಂ) ಆಗ್ರಹ

ಕೆಲವು ಪಠ್ಯಗಳಲ್ಲಿ ಇರಬಹುದಾದ ಸೂಕ್ಷ್ಮ ಸಂಕೀರ್ಣ ವಿಷಯಗಳ ಕುರಿತು ಪರಿಶೀಲಿಸಿ ವರದಿ ನೀಡುವುದಕ್ಕೆ ರಚಿಸಲಾದ ರಚಿಸಲಾದ ರೋಹಿತ್ ಚಕ್ರವರ್ತಿ ಅಧ್ಯಕ್ಷೀಯ ಸಮಿತಿ ತನಗೆ ವಹಿಸಿದ ಜವಾಬ್ದಾರಿಯನ್ನು ಮೀರಿ, ಪಠ್ಯ ಪುಸ್ತಕ ಪರಿಷ್ಕರಣೆಗೆ ಮುಂದಾದ ದುಷ್ಕೃತ್ಯವನ್ನು ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸವಾದಿ) ಕರ್ನಾಟಕ ರಾಜ್ಯ ಸಮಿತಿ ಬಲವಾಗಿ ಖಂಡಿಸಿದೆ.

ಈ ಸರಕಾರದಲ್ಲಿ ಯಾರು ಹೇಗೆ ಬೇಕಾದರೂ ವರ್ತಿಸಬಹುದೆಂಬುದನ್ನು ಮತ್ತು ಆಡಳಿತದ ಮೇಲೆ ಸರಕಾರದ ಯಾವುದೇ ನಿಯಂತ್ರಣವಿಲ್ಲವೆಂಬುದನ್ನು ಮತ್ತೊಮ್ಮೆ ಸ್ಪಷ್ಠ ಪಡಿಸಿದೆ.

ಯಾವುದೇ ಸೂಕ್ತ ವೇದಿಕೆಗಳಲ್ಲಿ ಚರ್ಚಿಸದೇ, ಸೂಕ್ತ ಆದೇಶ ಹೊರಡಿಸದೇ ತಮಗೆ ತಿಳಿದಂತೆ ಕಾರ್ಯ ನಿರ್ವಹಿಸುವುದು, ಇಲ್ಲವೇ ಮತ್ಯಾವುದೋ ಅವಿತಿಟ್ಟುಕೊಂಡ ದುಷ್ಠ ಶಕ್ತಿಯ ನಿಯಂತ್ರಣದಲ್ಲಿ ಕಾರ್ಯ ನಿರ್ವಹಿಸುತ್ತಿರುವುದನ್ನು ಇದು ಮತ್ತೊಮ್ಮೆ ಎತ್ತಿ ತೋರಿಸಿದೆ.

ಈ ಅಧಿಕಾರ ದುರುಪಯೋಗದಿಂದ ಮತ್ತು ತಜ್ಞರಲ್ಲದವರ ದುರ್ನಡೆಯಿಂದ ನಾಡಿನ ಗಣ್ಯ ವ್ಯಕ್ತಿಗಳು ಅಪಮಾನಿತರಾಗುವಂತಾಯಿತು. ರಾಜ್ಯದ ದಶ ಲಕ್ಷಾಂತರ ಶಾಲಾ ಮಕ್ಕಳು ಪಠ್ಯ ಪುಸ್ತಕ ಲಭ್ಯವಿಲ್ಲದೇ ಶೈಕ್ಷಣಿಕವಾಗಿ ಈ ವರ್ಷವೂ ತೊಂದರೆಗೀಡಾಗುವಂತಾಯಿತು.

ಮಾತ್ರವಲ್ಲಾ, ರಾಜ್ಯದ ಬೊಕ್ಕಸದ ನೂರಾರು ಕೋಟಿ ರೂಗಳ ಮೊತ್ತ ದುರ್ವಿನಿಯೋಗವಾಗುವಂತಾಯಿತು.

ಸಚಿವ ನಾಗೇಶ್ ರವರ ಇಂತಹ ಜವಾಬ್ದಾರಿ ಹೀನ ಮತ್ತು ದೂರದೃಷ್ಠಿ ರಹಿತ ದುರ್ವರ್ತನೆಗಳಿಂದ ಕರ್ನಾಟಕದ ಭವಿಷತ್ತಿನ ಅಭಿವೃದ್ಧಿಯ ಮೇಲೆ ಖಂಡಿತಾ ದುಷ್ಪರಿಣಾಮ ಬೀರಲಿದೆ.

ಇದೊಂದು, ನಾಗರೀಕ ಜಗತ್ತಿನ ಮುಂದೆ ಕರ್ನಾಟಕದ ಜನತೆ ಮತ್ತೊಮ್ಮೆ ನಾಚಿಕೆಯಿಂದ ತಲೆ ತಗ್ಗಿಸುವಂತಹ ಪ್ರಸಂಗವಾಗಿದೆ.

ಮುಖ್ಯಮಂತ್ರಿಗಳಿಗೆ ಸ್ವಲ್ಪವಾದರು ನಾಚಿಕೆ ಎಂಬುದೇನಾದರು ಇದ್ದರೇ ಶಿಕ್ಷಣ ಸಚಿವರು ಹಾಗೂ ಪಠ್ಯ ಪುಸ್ತಕ ಪರಿಶೀಲನಾ ಸಮಿತಿಯನ್ನು ಈ ಕೂಡಲೇ ವಜಾ ಮಾಡುವಂತೆ ಸಿಪಿಐ(ಎಂ) ಬಲವಾಗಿ ಆಗ್ರಹಿಸಿದೆ.

ಕೋವಿಡ್ ಕಾರಣದಿಂದ ಈಗಾಗಲೇ ಕಳೆದೆರಡು ವರ್ಷಗಳಿಂದ ವಿದ್ಯಾರ್ಥಿ ಗಳು ಮಕ್ಕಳು ಶಿಕ್ಷಣದಿಂದ ವಂಚಿತರಾಗಿದ್ದಾರೆ. ಮುಖ್ಯಮಂತ್ರಿಗಳು ಹಾಗೂ ಸರಕಾರಕ್ಕೆ ಆಡಳಿತದ ಮೇಲೆ ಯಾವುದೇ ಹಿಡಿತವಿಲ್ಲದೇ ಇರುವುದರಿಂದ ಉಂಟಾದ ಈ ಅನಗತ್ಯ ಪ್ರಹಸನದಿಂದ ಈ ವರ್ಷವು ಮಕ್ಕಳು, ವಿದ್ಯಾರ್ಥಿಗಳು ಶಿಕ್ಷಣದಿಂದ ವಂಚಿತರಾಗುವುದನ್ನು ತಪ್ಪಿಸಲು ಹಳೆಯ ಪಠ್ಯಕ್ರಮವನ್ನೇ ಮುಂದು ವರೆಸುವಂತೆ ಮತ್ತು ರಾಜ್ಯದ ಬೊಕ್ಕಸಕ್ಕಾದ ನಷ್ಠವನ್ನು ಅಧಿಕಾರ ದುರುಪಯೋಗ ಮಾಡಿಕೊಂಡ ಸಚಿವ ನಾಗೇಶ್ ಮತ್ತು ಪಠ್ಯ ಪುಸ್ತಕ ಪರಿಷ್ಕರಣಾ ಸಮಿತಿಯಿಂದ ವಸೂಲಿ ಮಾಡುವಂತೆ ಸಿಪಿಐ(ಎಂ) ಮುಖ್ಯಮಂತ್ರಿಗಳನ್ನು ಒತ್ತಾಯಿಸಿದೆ.

ಕಾರ್ಮಿಕ ಸಚಿವರ ವಜಾಕ್ಕೆ ಆಗ್ರಹ ರಾಜ್ಯಾದ್ಯಂತ ಕಟ್ಟಡ ಕಾರ್ಮಿಕರ ಹೋರಾಟ

ಕಟ್ಟಡ ಕಾರ್ಮಿಕರಿಗೆ ಪ್ರಯೋಜನವಾಗದ ಸಾಮಾಗ್ರಿಗಳನ್ನು ಖರೀದಿಸಿ ನೂರಾರು ಕೋಟಿ ಅವ್ಯವಹಾರ

ಕಾರ್ಮಿಕರು ಎಂದರೆ ದೇಶದ ಆಸ್ತಿ ಇವರು ಇದ್ದರೆ ಮಾತ್ರ ಸಮಾಜದಲ್ಲಿ ರಾತ್ರಿ ನೆಮ್ಮದಿಯಿಂದ ಜೀವನ ನಡೆಸಲು ಸಾಧ್ಯ

ರಾಜ್ಯ ಸರಕಾರದ ಕಾರ್ಮಿಕ ಸಚಿವ ಶಿವರಾಂ ಹೆಬ್ಬಾರ್ ಕಟ್ಟಡ ಕಾರ್ಮಿಕ ಕಲ್ಯಾಣ ಮಂಡಳಿಯಲ್ಲಿ ನೂರಾರು ಕೋಟಿ ಭ್ರಷ್ಟಾಚಾರ ನಡೆಸಿದ್ದು. ಅವರನ್ನು ಕೂಡಲೇ ಸಚಿವ ಸ್ಥಾನದಿಂದ ವಜಾಗೊಳಿಸಬೇಕೆಂದು ಆಗ್ರಹಿಸಿ ರಾಜ್ಯಾದ್ಯಂತ ಕಟ್ಟಡ ನಿರ್ಮಾಣ ಕಾರ್ಮಿಕರು, ತೀವ್ರ ಸ್ವರೂಪದ ಹೋರಾಟಕ್ಕೆ ಸಿದ್ದವಾಗುತ್ತಿದ್ದಾರೆ ಎಂದು ಕರ್ನಾಟಕ ರಾಜ್ಯ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಫೆಡರೇಶನ್ ರಾಜ್ಯ ಪ್ರಧಾನ ಕಾರ್ಯದರ್ಶಿ ಕೆ.ಮಹಾಂತೇಶ್ ತಿಳಿಸಿದರು.

ನಗರದ ಲಯನ್ಸ್ ಭವನದಲ್ಲಿ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಸಂಘದ 4 ನೇ ಜಿಲ್ಲಾ ಸಮ್ಮೇಳವನ್ನು ಉದ್ಘಾಟಿಸಿ ಮಾತನಾಡಿದ ಅವರು, ಕೊರೊನಾ ಮತ್ತು ಕೊರೊನೋತ್ತರದ ಕಾಲಘಟ್ಟದಲ್ಲಿ ಕಾರ್ಮಿಕ ಸಚಿವರು ಮತ್ತು ಮಂಡಳಿ ಕಾರ್ಯದರ್ಶಿ ಹಾಗೂ ಕಾರ್ಮಿಕ ಆಯುಕ್ತರು ಸೇರಿ ಮಂಡಳಿ ಸಭೆಯನ್ನು ಸೇರಿಸದೇ, ಎಲ್ಲ ನಿಯಮಾವಳಿ ಹಾಗೂ ಕೇಂದ್ರ ಕಾರ್ಮಿಕ ಇಲಾಖೆಯ ಆದೇಶವನ್ನು ಉಲ್ಲಂಘಿಸಿ ರೇಷನ್ ಕಿಟ್, ಟೂಲ್ ಕಿಟ್, ಬೂಸ್ಟರ್ ಕಿಟ್ ಗಳನ್ನು, ದುಬಾರಿ ಕಾರುಗಳು, ಅಂಬ್ಯೂಲೆನ್ಸ್ ಗಳನ್ನು ಹಾಗೂ ಕಾರ್ಮಿಕ ಇಲಾಖೆಗೆ ಸ್ವತಂತ್ರ ತಂತ್ರಾಂಶ, ಕ್ಯಾಲೆಂಡರ್ ಮುದ್ರಣ ಹೀಗೆ ಕಟ್ಟಡ ಕಾರ್ಮಿಕರಿಗೆ ಪ್ರಯೋಜನವಾಗದ ಸಾಮಾಗ್ರಿಗಳನ್ನು ಖರೀದಿಸಿ ನೂರಾರು ಕೋಟಿಗಳ ಅವ್ಯವಹಾರವನ್ನು ನಡೆಸಿದ್ದಾರೆ ಎಂದು ಆರೋಪಿಸಿದರು.

ಕಾರ್ಮಿಕರು ಎಂದರೆ ದೇಶದ ಆಸ್ತಿ ಇವರು ಇದ್ದರೆ ಮಾತ್ರ ಸಮಾಜದಲ್ಲಿ ರಾತ್ರಿ ನೆಮ್ಮದಿಯಿಂದ ಜೀವನ ನಡೆಸಲು ಸಾಧ್ಯ. ಆದರೆ ಅಂತಹ ಕಾರ್ಮಿಕರಿಗೆ ಸೇರಬೇಕಾದ ಸೌಲಭ್ಯಗಳಲ್ಲಿ ಭ್ರಷ್ಟಾಚಾರ ನಡೆಸಲು ಕಾರ್ಮಿಕ ಮಂಡಳಿಯ ಅವ್ಯವಹಾರಕ್ಕೆ ಕಾರಣವಾಗಿರುವ ಕಾರ್ಮಿಕ ಸಚಿವ ಶಿವರಾಮ ಹೆಬ್ಬಾರ್ ವಜಾ ಮಾಡಬೇಕು, ಹಾಗೂ ಆಯುಕ್ತ ಅಕ್ರಂ ಪಾಷಾ ಅವರನ್ನು ವರ್ಗಾಯಿಸಬೇಕು ಎಂದು ಆಗ್ರಹಪಡಿಸಿದರು.



ಸಭೆಯ ಅಧ್ಯಕ್ಷತೆ ವಹಿಸಿದ್ದ ಜಿಲ್ಲಾ ಅಧ್ಯಕ್ಷ ಗಾಂಧಿನಗರ ನಾರಯಣಸ್ವಾಮಿ ಮಾತನಾಡಿ ಮಂಡಳಿಯ ಎಲ್ಲ ಘೋಷಿತ ಸೌಲಭ್ಯಗಳನ್ನು ಫಲಾನುಭವಿ ಕಾರ್ಮಿಕರ ಖಾತೆಗೆ ನೇರಹಣ ವರ್ಗಾವಣೆ ಮೂಲಕವೇ ನೀಡಬೇಕೆಂಬ ನಿಯಮವನ್ನು ಗಾಳಿಗೆ ತೂರಲಾಗಿದೆ. ಕಾರ್ಮಿಕರ ಶ್ರಮದಿಂದ ಸಂಗ್ರಹವಾಗಿರುವ ಹಣವನ್ನು ಭ್ರಷ್ಟಾಚಾರ ಮೂಲಕ ಕಬಳಿಸುತ್ತಿರುವುದು ಅತ್ಯಂತ ಖಂಡನೀಯ. ಈ ಬಗ್ಗೆ ಹೋರಾಟವನ್ನು ನಡೆಸಲಾಗುವುದು ಎಂದು ತಿಳಿಸಿದರು.

ಸಮ್ಮೇಳನದಲ್ಲಿ ಸಂಘದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಭೀಮರಾಜ್ ಕಳೆದ ಸಮ್ಮೇಳನದಿಂದ ಇಲ್ಲಿಯವರೆಗೆ ಜಿಲ್ಲೆಯಲ್ಲಿ ನಡೆಸಲಾದ ಹೋರಾಟ ಹಾಗೂ ಚಟುವಟಿಕೆಗಳು ಹಾಗೂ ಸಂಘಟನಾ ಮತ್ತು ಲೆಕ್ಕಪತ್ರ ವರದಿ ಮಂಡಿಸಿದರು. ಅದರ ಮೇಲೆ ವಿವಿಧ ಜಿಲ್ಲೆಗಳ ಪ್ರತಿನಿಧಿಗಳು ಚರ್ಚೆ ನಡೆಸಿದರು ನಂತರ ಪುಟ 7 ಕ್ಕೆ

ಕಾಂಗ್ರೆಸ್ ಹಾಗೂ ಜೆಡಿಎಸ್ ಗಳ ಹೊಣೆಗೇಡಿತನದ ಸಂಕುಚಿತ ರಾಜಕಾರಣವೇ ಬಿಜೆಪಿ ಗೆಲುವಿಗೆ ಕಾರಣ

ನೆನ್ನೆ ನಡೆದ ರಾಜ್ಯಸಭಾ ಚುನಾವಣೆಯಲ್ಲಿ ರಾಜ್ಯದ ಅಭಿವೃದ್ಧಿ ಹಾಗೂ ಸೌಹಾರ್ಧತೆಯ ಕುರಿತು, ಕಾಂಗ್ರೆಸ್ ಮತ್ತು ಜೆಡಿಎಸ್ ಗಳು ತಮಗೆ ಯಾವುದೇ ರೀತಿಯ ಹೊಣೆಗಾರಿಕೆಯಿಲ್ಲವೆಂದು, ಜವಾಬ್ದಾರಿ ಹೀನ ಸಂಕುಚಿತ ಅಧಿಕಾರದಾಹಿ ರಾಜಕಾರಣಕ್ಕೆ ಅಂಟಿಕೊಂಡುದುದೇ, ಮೂರು ರಾಜ್ಯ ಸಭಾ ಸ್ಥಾನಗಳಲ್ಲಿ ಬಿಜೆಪಿ ಗೆಲ್ಲಲು ಕಾರಣವಾಗಿದೆ.

ಬಿಜೆಪಿ ಗೆಲುವಿನಿಂದ ಮತ್ತು ಕಾಂಗ್ರೆಸ್ ಹಾಗೂ ಜೆಡಿಎಸ್ ನ ಹೊಣೆಗೇಡಿ ರಾಜಕಾರಣದಿಂದ ರಾಜ್ಯದ ಜನತೆ ಆತಂಕಕ್ಕೀಡಾಗುವಂತಾಗಿದೆ.

ರಾಜ್ಯ ಹಾಗೂ ಒಕ್ಕೂಟ ಸರಕಾರಗಳ ಮತ್ತು ಬಿಜೆಪಿ ಹಾಗೂ ಆರ್‌ಎಸ್‌ಎಸ್ ಗಳ ಸರ್ವಾಧಿಕಾರ, ಜನ ವಿರೋಧಿ ನೀತಿಗಳು ಮತ್ತು ಕೋಮುವಾದವು ರಾಜ್ಯದ ಜನತೆಯಲ್ಲಿ ತೀವ್ರ ಅಸಮಾಧಾನ ಉಂಟು ಮಾಡಿರುವಾಗ, ಜಾತ್ಯಾತೀತ ಶಕ್ತಿಗಳು ಜವಾಬ್ದಾರಿಯುತವಾಗಿ, ಜನತೆಯ ಆತಂಕ ನಿವಾರಣೆಗೆ ಪೂರಕವಾಗಿ ಕಾರ್ಯ ನಿರ್ವಹಿಸ ಬೇಕಾಗುತ್ತದೆ ಎಂದು ಸಿಪಿಐ(ಎಂ) ಎಚ್ಚರಿಸುತ್ತದೆ.

ಕಾಂಗ್ರೆಸ್– ಜೆ.ಡಿ.ಎಸ್ ಪಕ್ಷಗಳ ಅಕ್ಷಮ್ಯ ಹೊಣೆಗೇಡಿತನ...

ಪುಟ 3 ರಿಂದ

ದೇಶದಲ್ಲಿ ಮತ್ತು ರಾಜ್ಯದಲ್ಲಿ ಬಿಜೆಪಿ ಪಕ್ಷದ ತೀವ್ರ ದುರಾಡಳಿತ ಮತ್ತು ಆರ್.ಎಸ್.ಎಸ್. ಪರಿವಾರದ ಕೋಮುದ್ವೇಷದ ಬಹುಮುಖಿ ಅಪಾಯಕಾರಿ ದಾಳಿಗಳಿಂದ ಜನತೆ ಬೇಸತ್ತಿದ್ದಾರೆ ಮತ್ತು ಆತಂಕಿತರಾಗಿದ್ದಾರೆ. ವಿದೇಶಿ ಮತ್ತು ಸ್ವದೇಶಿ ಕಾರ್ಪೊರೇಟ್ ಹಿತಾಸಕ್ತಿಗಳಿಗಾಗಿ ಭಾರತ ದೇಶದ ಐಕ್ಯತೆ, ಸಮಗ್ರತೆ, ಪ್ರಗತಿಗೆ ಮಾರಕವಾದ ಫ್ಯಾಸಿಸ್ಟ್ ಸ್ವರೂಪದ ದಾಳಿಗಳನ್ನು ನಡೆಸಲಾಗುತ್ತಿದೆ. ಭಾರತ ದೇಶವನ್ನು ಗಂಡಾಂತರಕ್ಕೆ ದೂಡಲ್ಪಡುವ ನೀತಿಗಳ ವಿರುದ್ಧವಾಗಿ ಎಲ್ಲಾ ದೇಶಪ್ರೇಮಿ, ಜಾತ್ಯಾತೀತ ಶಕ್ತಿಗಳು ಒಂದಾಗಿ ಹೋರಾಡಬೇಕಾಗಿದೆ. ಬಿಜೆಪಿಯ

ಮಂಜರಾಬಾದ್ ಕೋಟೆಯ ಮೇಲೆ "ಕೇಸರಿ ಕಣ್ಣು"

ಗುರುರಾಜ ದೇಸಾಯಿ

ಇಂತಹ ಕೋಟೆಗಳು ಕರ್ನಾಟಕದಲ್ಲಿ ಬಹಳಷ್ಟು ಇವೆ. ಅದರಲ್ಲಿ ಹಾಸನ ಜಿಲ್ಲೆಯ ಸಕಲೇಶಪುರದ ಮಂಜರಾಬಾದ್ ಕೋಟೆ ಹಲವು ವೈಶಿಷ್ಟ್ಯಗಳನ್ನು ಹೊಂದಿದೆ. ಈ ಕೋಟೆಯನ್ನು ಟಿಪ್ಪು ಸುಲ್ತಾನ್ ನಿರ್ಮಿಸಿದ್ದು. ಈ ವಿಶೇಷ ಕೋಟೆಯು ಭಾರತದಲ್ಲಿ ಇಸ್ಲಾಮಿಕ್ ವಾಸ್ತುಶಿಲ್ಪದ ಅದ್ಭುತತೆಯನ್ನು ತೋರಿಸುತ್ತದೆ. ಇದು ಎಂಟು ಗೋಡೆಗಳನ್ನು ಹೊಂದಿರುವ ಆಸಕ್ತಿದಾಯಕ ಅಷ್ಟಭುಜಾಕೃತಿಯ ವಿನ್ಯಾಸವನ್ನು ಹೊಂದಿದೆ. ಸಾಕಷ್ಟು ಪ್ರವಾಸಿಗರು ಈ ಕೋಟೆಯನ್ನು ಭೇಟಿ ನೀಡುತ್ತಾರೆ. ಆದರೆ ಈ ಕೋಟೆಗೆ ಈಗ ಕೇಸರಿ ಕಣ್ಣು ಬಿದ್ದಿದೆ ಸೌಹಾರ್ದತೆಯ ತಾಣಕ್ಕೆ ಕೋಮು ಬಣ್ಣ ಬಳಿಯಲು ಹೊರಟಿದ್ದಾರೆ. ಅವರು ಕೋಮ ಬಣ್ಣ ಯಾಕೆ ಬಳೆಯುತ್ತಿದ್ದಿರೆ? ಇದಕ್ಕೇನು ಕಾರಣ ಎನ್ನುವುದನ್ನು ನಂತರದಲ್ಲಿ ನೋಡೋಣ. ಮೊದಲಿಗೆ ಈ ಕೋಟೆಯ ಮಹತ್ವದತ್ತ ಕಣ್ಣು ಹಾಯಿಸೋಣ.

ನಕ್ಷತ್ರಾಕಾರದ ಕೋಟೆ:

ಕೋಟೆಯ ಕಾಮಗಾರಿಯನ್ನು ಟಿಪ್ಪು1785 ರಲ್ಲಿ ಪ್ರಾರಂಭಿಸಿ, 1792 ರಲ್ಲಿ ಅಂತಿಮಗೊಳಿಸಿದರಂತೆ. ಈ ಕೋಟೆ ಎಂಟು-ಬಿಂದುಗಳ ನಕ್ಷತ್ರವಾಗಿದೆ. ಕೋಟೆಯ ಬಾಹ್ಯ ಗೋಡೆಗಳನ್ನು ಗ್ರಾನೈಟ್ ಕಲ್ಲುಗಳು ಮತ್ತು ಸುಣ್ಣದ ಗಾರೆಗಳಿಂದ ನಿರ್ಮಿಸಲಾಗಿದ್ದು, ಸೈನ್ಯದ ಬ್ಯಾರಕ್‌ಗಳು, ಶಸ್ತ್ರಾಸ್ತ್ರ ಸಂಗ್ರಹಾಲಯಗಳು, ಮಳಿಗೆಗಳು ಮತ್ತು ಇತರರಿಗೆ ಸ್ಥಳಾವಕಾಶವಿರುವ ಒಳಾಂಗಣ ಕಟ್ಟಡಗಳನ್ನು ಇಟ್ಟಿಗೆಗಳಿಂದ ನಿರ್ಮಿಸಲಾಗಿದೆ. ಅನೇಕ ಹಂತಗಳನ್ನು ಆಧರಿಸಿದ ಸಾಮಾನ್ಯ ಕೋಟೆಗಳಿಗೆ ವ್ಯತಿರಿಕ್ತವಾಗಿ ಏಕೈಕ ಮಟ್ಟವನ್ನು ಹೊಂದಿದೆ. ಈ ಕೋಟೆಯ ವೈಮಾನಿಕ ನೋಟವು ಅದ್ಭುತವಾದ ನಕ್ಷತ್ರಾಕಾರದ ನೋಟವನ್ನು ನೀಡುತ್ತದೆ. ಈ ಕೋಟೆ "ಭಾರತದ ಅತ್ಯಂತ ಸಂಪೂರ್ಣವಾದ ನಕ್ಷತ್ರಾಕಾರದ ಕೋಟೆ" ಎಂದು ಹೇಳಲಾಗುತ್ತದೆ.

ಕೋಟೆ ಎಂದಾಕ್ಷಣ ಎಲ್ಲರೂ ಕಣ್ಣರಳಿಸಿ. ಕಿವಿ ನಿಮಿರಿಸಿ, ವಾವ್ ಎಂದು ಉದ್ಘಾರ ತೆಗೆಯುತ್ತೇವೆ. ಅದು ಕೋಟೆಗಿರುವ ಶಕ್ತಿ. ಹಿಂದೆ ರಾಜರುಗಳ ಕಾಲದಲ್ಲಿ ಸಾಮ್ರಾಜ್ಯವನ್ನು ಶತ್ರುಗಳಿಂದ ರಕ್ಷಿಸಲು ತಂತ್ರಗಾರಿಕೆಯ ರಚನೆಗಳಾಗಿ ಕಾರ್ಯ ನಿರ್ವಹಿಸುತ್ತಿದ್ದವು. ಗಟ್ಟಿ ಮುಟ್ಟಾದ ಗೋಡೆಗಳು, ಅಗಾಧವಾದ ಎತ್ತರ, ರಹಸ್ಯಮಯ ದಾರಿಗಳು, ಚಾಣಾಕ್ಷತನದಿಂದ ನಿರ್ಮಿಸಲಾದ ಆಯಕಟ್ಟಿನ ಸ್ಥಳಗಳು, ಶಸ್ತ್ರಾಗಾರ ಹೀಗೆ ಮುಂತಾದವುಗಳು ಕೋಟೆಗಳ ಪ್ರಮುಖ ಲಕ್ಷಣಗಳಾಗಿವೆ.



ಭೂಗತ ರಚನೆ:

ಈ ಕೋಟೆ ಭೂಗತ ರಚನೆಯನ್ನು ಹೊಂದಿದೆ. ಆಳವಾದ ಬಾವಿಯ ಪಕ್ಕದಲ್ಲಿ ಎರಡು ನೆಲಮಾಳಿಗೆಗಳನ್ನು ನಿರ್ಮಿಸಲಾಗಿದೆ, ಅವು ಗನ್‌ಪೌಡರ್ ಸಂಗ್ರಹಿಸಲು ಬಳಸಲಾಗುವ ಭೂಗತ ರಚನೆಗಳಾಗಿವೆ,ಮತ್ತು ಬೇಸಿಗೆಯ ತಿಂಗಳುಗಳಲ್ಲಿಯೂ ಈ ಕೊಠಡಿಗಳು ತಂಪಾಗಿರುತ್ತವೆ. ಕೋಟೆಯಲ್ಲಿ ಇಳಿಜಾರಿನ ಗೋಡೆಗಳಿವೆ. ಮದ್ದುಗುಂಡುಗಳನ್ನು ಸಂಗ್ರಹಿಸಲು ಗಡಿಯಾಗಿ ನಿರ್ಮಿಸಲಾಗಿರುವ ಮಂಜರಾಬಾದ್ ಕೋಟೆಯನ್ನು ಬ್ರಿಟಿಷರ ವಿರುದ್ಧ ಟಿಪ್ಪು ಸುಲ್ತಾನ್ ಸೈನ್ಯಕ್ಕೆ ರಕ್ಷಣೆಯಾಗಿ ಬಳಸುತ್ತಿದ್ದರು. ಆಂಗ್ಲ-ಮೈಸೂರು ಯುದ್ಧದಲ್ಲಿ ಈ ಕೋಟೆಯನ್ನು ಬಳಸಲಾಯಿತು. ಶ್ರೀರಂಗಪಟ್ಟಣದ ಪತನದ ನಂತರ ಬ್ರಿಟೀಷರು ಈ ಕೋಟೆಯನ್ನು ತಮ್ಮ ವಶಕ್ಕೆ ತೆಗೆದುಕೊಂಡ ನಂತರ ಅದರ ಕೆಲವು ಭಾಗಗಳನ್ನು ನಾಶಮಾಡಿದರೆನ್ನಲಾಗಿದೆ.

ಯುರೋಪಿಯನ್ ಶೈಲಿ:

ಟಿಪ್ಪು ತನ್ನ ವಿಸ್ತರಣಾ ಕಾರ್ಯಕ್ರಮಗಳಿಗಾಗಿ ಮಂಗಳೂರು ಮತ್ತು ಕೂರ್ಗ್ ನಡುವಿನ ಹೆದ್ದಾರಿಯನ್ನು ಸುರಕ್ಷಿತವಾಗಿಸಲು ಬಯಸಿದ್ದರು. ಆ ಸಮಯದಲ್ಲಿ ಅವರು ಬ್ರಿಟಿಷರ ವಿರುದ್ಧ ಫ್ರೆಂಚ್ ಜೊತೆ ಮೈತ್ರಿ ಮಾಡಿಕೊಂಡಿದ್ದರಿಂದ, ಅವರು ಯುರೋಪಿಯನ್ ಶೈಲಿಯ ನಕ್ಷತ್ರ ಕೋಟೆಯನ್ನು ನಿರ್ಮಿಸಲು ಫ್ರೆಂಚ್ ಎಂಜಿನಿಯರ್‌ಗಳ ಸಹಾಯವನ್ನು ಪಡೆದರು ಎಂದು ಉಲ್ಲೇಖಿಸಲಾಗಿದೆ.

ಇದು ಗಿರಿದುರ್ಗ ಕೋಟೆ:

ಕೋಟೆಗಳ ರಚನಾ ಶಾಸ್ತ್ರದಲ್ಲಿ ಮುಖ್ಯವಾಗಿ ನಾಲ್ಕು ವಿಭಾಗಗಳನ್ನು ಮಾಡಲಾಗಿದ್ದು ಭೂದುರ್ಗ, ಜಲದುರ್ಗ, ವನದುರ್ಗ, ಗಿರಿದುರ್ಗಗಳೆಂದು ಕರೆಯಲಾಗುತ್ತಿದೆ. ಭೂವಲಯ ದಲ್ಲಿ ಜಲಸಂಪನ್ಮೂಲಗಳ ನಡುವೆ ಕಟ್ಟಲ್ಪಟ್ಟ ಕೋಟೆಗಳನ್ನು ಜಲ ದುರ್ಗಗಳೆಂದು ಕರೆದರೆ, ಬೆಟ್ಟ ಅಥವಾ ಗುಡ್ಡಗಳ ಮೇಲೆ ಕಟ್ಟಲ್ಪಟ್ಟ ಕೋಟೆಗಳಿಗೆ ಗಿರಿದುರ್ಗವೆಂದು ಕರೆಯಲಾಗುತ್ತದೆ. ದುರ್ಗವೆಂದರೆ ಇಲ್ಲಿ ಕೋಟೆ ಎಂದರ್ಥ. ಮಂಜ್ರಾಬಾದ್ ಕೋಟೆಯೂ ಸಹ ಗಿರಿಯೊಂದರ (ಗುಡ್ಡದ) ಮೇಲೆ ಕಟ್ಟಿದ (ನಿರ್ಮಿಸಿದ) ದುರ್ಗವಾಗಿದೆ. ಶ್ರೀರಂಗಪಟ್ಟಣದ ಕೋಟೆಯು ಜಲದುರ್ಗವಾದರೆ ಐಗೂರಿನ ಕೋಟೆಯು ವನದುರ್ಗವಾಗಿದೆ.

ಸಮುದ್ರಮಟ್ಟದಿಂದ ಈ ಕೋಟೆಯು 988 ಮೀಟರ್ ಎತ್ತರದಲ್ಲಿದೆ. ಅಂದರೆ 3393 ಅಡಿಗಳು 261 ಮೆಟ್ಟಿಲುಗಳು ಇವೆ. ಈ ಕೋಟೆಯಲ್ಲಿ ಹಲವಾರು ಸುರಂಗ ಮಾರ್ಗಗಳು ಇವೆಯೆಂದು ಹೇಳಲಾಗುತ್ತದೆ. ಅವು ಶ್ರೀರಂಗಪಟ್ಟಣದವರೆಗೂ ತಲುಪಿಸುತ್ತದೆ ಎಂದು ಹೇಳಲಾಗುತ್ತದೆ, ಆದರೆ ಈವರೆಗೆ ಯಾರೂ ಅದರಲ್ಲಿ ಸಂಚರಿಸಿದ ಮಾಹಿತಿಯಿಲ್ಲ.

ಈ ಕೋಟೆಗೆ ಸೂಕ್ತ ರಕ್ಷಣೆ ನೀಡಿ, ಪರಿಣಿತ ಮಾರ್ಗದರ್ಶಿಗಳ ನೇಮಕಾತಿ ಮಾಡಿದ್ದರೆ ಇಡೀ ಜಿಲ್ಲೆಯಲ್ಲಿಯೇ ಶ್ರೇಷ್ಠವಾದ ಸ್ಮಾರಕಗಳಲ್ಲೊಂದಾಗುತಿತ್ತು. ಈ ಕೋಟೆಯು ಶೇಕಡ 60 ಭಾಗ ಮಾತ್ರ ಭದ್ರವಾಗಿ ಉಳಿದಿದೆ. 40% ನಿರ್ಲಕ್ಷ್ಯಕ್ಕೆ ಒಳಗಾಗಿದೆ. ಈ ಕೋಟೆಯನ್ನು ಉಳಿಸಲು ತಾಲ್ಲೂಕಾಡಳಿತ ಮತ್ತು ಜಿಲ್ಲಾಡಳಿತ ಮುಂದಾಗಬೇಕು ಎಂದು ಸಕಲೇಶಪುರದ ಸಿಐಟಿಯು ತಾಲ್ಲೂಕ ಕಾರ್ಯದರ್ಶಿ ಬಿಎಂ ಸೌಮ್ಯ ಆಗ್ರಹಿಸಿದ್ದಾರೆ.

ಭಿತ್ತಿಪತ್ರ, ಕರಪತ್ರ, ಭಾವಚಿತ್ರಗಳು ಭಾರತೀಯ ಎಲ್ಲಾ ಭಾಷೆಗಳಲ್ಲಿದ್ದರೆ ಉಪಕಾರ ಮಾಡಿದಂತಾಗುತ್ತದೆ. ಇದಕ್ಕೆಲ್ಲಾ ಸಂಪರ್ಕ ಕಲ್ಪಿಸಬೇಕಾದರೆ ಸಕಲೇಶಪುರ ಕೇಂದ್ರ ಸ್ಥಳದಿಂದ ಕೋಟೆಯ ದರ್ಶನಕ್ಕೆಂದೇ ವಿಶೇಷವಾಗಿ ವಾಹನಗಳನ್ನು ಕಲ್ಪಿಸಬೇಕಿದೆ. ಸಮಗ್ರ ಮಾಹಿತಿಯಯುಳ್ಳ ಫಲಕಗಳನ್ನು ಅಲ್ಲಿ ಅಳವಡಿಸಬೇಕಿದೆ ಎಂದು ಹಿರಿಯ ಪತ್ರಕರ್ತ ಮಲ್ನಾಡ್ ಮೆಹಬೂಬ್ ಹೇಳುತ್ತಾರೆ.


ಕೇಸರಿ ಕಣ್ಣು:

ಐತಿಹಾಸಿಕ, ಸೌಹಾರ್ದತೆಯ ಈ ಕೋಟೆಗೆ ಈಗ ಕೇಸರಿ ಕಣ್ಣು ಬಿದ್ದಿದೆ. ಬಜರಂಗದಳ ಕಾರ್ಯಕರ್ತರು ಕೋಮು ಬಣ್ಣ ಬಳಿಯುವ ಪ್ರಯತ್ನ ನಡೆಸಿದ್ದಾರೆ. ಇದಕ್ಕೆ ಸ್ಥಳೀಯರು ಆಕ್ರೋಶ ವ್ಯಕ್ತಪಡಿಸಿ, ಕೋಮು ಬಣ್ಣ ಬಳಿಯಬೇಡಿ ಎಂದು ಜಾಡಿಸಿದ್ದರಿಂದ ಬಜರಂಗದಳದವರು ತೆಪ್ಪಗಾಗಿದ್ದಾರೆ. ಆದರೆ ಇದು ಬೂದಿ ಮುಚ್ಚಿದ ಕೆಂಡದಂತಿದೆ.

ಈ ಕೋಟೆ ಮಂಜಿರಾಬಾದ್ ಕೋಟೆ ಅಲ್ಲ, ಇದು ಮಂಜಿನ ಕೋಟೆ. ಈ ಕೋಟೆಯನ್ನು ಪಾಳೆಗಾರ ಕಟ್ಟಿಸಿದ್ದು, ನಂತರ ಇದನ್ನು ಟಿಪ್ಪು ಆಕ್ರಮಿಸಿಕೊಂಡಿದ್ದಾನೆ ಎಂಬುದು ಬಜರಂಗದಳದವರ ವಾದ. ಆದರೆ ವಾಸ್ತವವಾಗಿ ಪುರಾತ್ವ ಇಲಾಖೆ, ಜಿಲ್ಲಾಡಳಿತ ಮತ್ತು ಇತಿಹಾಸದಲ್ಲಿ ಇದು ಟಿಪ್ಪು ಕಟ್ಟಿಸಿದ ಕೋಟೆ ಎಂದು ದಾಖಲಿರುವುದನ್ನು ನಾವು ಕಾಣುತ್ತೇವೆ.

ರಾಜ್ಯದಲ್ಲಿ ಇತ್ತೀಚಿಗೆ ಕೆಲ ದಿನಗಳಿಂದ ಧರ್ಮ ದಂಗಲ್ ಶುರುವಾಗಿದೆ. ಹಿಜಾಬ್ ನಿಂದ ಆರಂಭಗೊಂಡ ಹಿಂದೂ ಮುಸ್ಲಿಂ ನಡುವಿನ ವಿವಾದ ಹಲಾಲ್ ಕಟ್, ಜಟ್ಕಾ ಕಟ್. ಅಜಾನ್ ವಿವಾದ, ಮಸೀದಿ ವಿವಾದ ಹೀಗೆ ಹಲವು ಆಯಾಮಗಳಲ್ಲಿ ಚರ್ಚೆಯಾಗಿ ಇನ್ನೂ ಈ ವಿವಾದಗಳು ಹೊಸ ರೂಪದಲ್ಲಿ ಚರ್ಚೆ ನಡೆಯುತ್ತಲೇ ಇರುವಾಗ ಹಾಸನದಲ್ಲಿ ಹಿಂದೂ ದೇವರ ವಿಗ್ರಹಗಳನ್ನ ಕಿಡಿಗೇಡಿಗಳು ಹಾನಿಮಾಡಿರೋದು ಭಾರೀ ವಿವಾದಕ್ಕೆ ಕಾರಣವಾಗಿತ್ತು. ಹಾಗಾಗಿ ಬಜರಂಗದಳದವರು ಸೌಹಾರ್ದತೆಯನ್ನು ಹಾಳು ಮಾಡಲು ಈ ರೀತಿಯ ದುಷ್ಕೃತ್ಯ, ಹಸಿ ಸುಳ್ಳುಗಳನ್ನು ಹೇಳುತ್ತಲೇ ಇರುತ್ತಾರೆ. ಇಂತಹ ಸುಳ್ಳು ಹೇಳುವವರ ವಿರುದ್ಧ ಕಠಿಣ ಕ್ರಮ ಜರುಗಿಸಬೇಕಿದೆ. ಕರ್ನಾಟಕದ ಸೌಹಾರ್ದ ಪರಂಪರೆಯನ್ನು ಉಳಿಸಿ, ರಕ್ಷಿಸಬೇಕಿದೆ. ●





ದುಷ್ಟ ಆಟಗಳಿಗೆ ಸರಿಯಾದ ರೀತಿಯಲ್ಲಿ ಉತ್ತರ ನೀಡುವ ಒಂದು ಅವಕಾಶಕ್ಕಾಗಿ ಮತ್ತು ಅಂತಹ ರಾಜಕೀಯ ಬದಲಾವಣೆಯನ್ನು ಬಯಸಿದ ಜನರಿರುವಾಗ ಕಾಂಗ್ರೆಸ್ ಪಕ್ಷ ಮತ್ತು ಜೆ.ಡಿ.ಎಸ್ ಪಕ್ಷಗಳ ಮೇಲೆ ಹೆಚ್ಚಿನ ಹೊಣೆಗಾರಿಕೆ ಇದೆ. ಆದರೀಗ ಅವು ತೆಗೆದುಕೊಂಡ ನಿಲುವು ಅತ್ಯಂತ ಹೊಣೆಗೇಡಿತನ ಮತ್ತು ಸಂದರ್ಭ ಸಾಧಕತೆಯಿಂದ ಕೂಡಿದೆ. ಇದು ಜಾತ್ಯತೀತ ಶಕ್ತಿಗಳಲ್ಲಿ ತೀವ್ರವಾದ ಹತಾಶೆಯನ್ನು ಉಂಟು ಮಾಡಬಲ್ಲದು. ಪರಿಣಾಮವಾಗಿ, ಬಿಜೆಪಿ ಸೋಲಿಸುವ ಕೇಂದ್ರ ಗುರಿಯನ್ನು ಪ್ರಧಾನವಾಗಿಸಿ, ಒಂದು ಸಮರ್ಥ ಪರ್ಯಾಯವನ್ನು ಕಟ್ಟುವ ಜನ ಮಾನಸದೊಳಗಿನ ಪ್ರಕ್ರಿಯೆ ಗೊಂದಲಕ್ಕೂ ಈಡಾಗಬಹುದು. ಹೀಗಾದಲ್ಲಿ ಪ್ರತಿರೋಧವೂ ಹಂಚಿ ಹೋಗಬಹುದು. ಇದರ ಅರ್ಥ ಕೋಮುವಾದಿ ಶಕ್ತಿಗಳನ್ನು ಎದುರಿಸುವ ಎಲ್ಲ ಶಕ್ತಿಗಳ ನಡುವೆ ರಾಜಕೀಯ ಮೈತ್ರಿ ಏರ್ಪಡಬೇಕು ಎಂಬುದಲ್ಲ. ಬದಲಾಗಿ ತಮ್ಮ ಸ್ವಂತ ಅಸ್ತಿತ್ವವನ್ನು ಉಳಿಸಿಕೊಳ್ಳುತ್ತಲೇ ಒದಗಿ ಬರುವ ನಿರ್ಣಾಯಕ ಸಂದರ್ಭದಲ್ಲಿ ರಾಜಕೀಯ ಗುರಿ ತಲುಪುವ ಹೋರಾಟವನ್ನು ಹೇಗೆ ತಂತ್ರಬದ್ಧ ಆದ್ಯತೆಯಾಗಿ ನಿರ್ವಹಿಸಬೇಕು ಎನ್ನುವ ಸೂಕ್ಷ್ಮ ಚಿಂತನೆ ಮತ್ತು ಕ್ರಿಯಾಶೀಲತೆಯೇ ಪ್ರಮುಖ ಕರ್ತವ್ಯ ಆಗಿದೆ.

ಹಿಂದಿನ ಚುನಾವಣೆಗಳ ಫಲಿತಾಂಶಗಳನ್ನು ವಿಶ್ಲೇಷಿಸಿದರೆ ಬಿಜೆಪಿಯನ್ನೂ ಒಳಗೊಂಡು ಯಾವುದೇ ಒಂದು ಪಕ್ಷ ಸರಳ ಬಹುಮತದಿಂದಲಾದರೂ ರಾಜ್ಯದಲ್ಲಿ ಅಧಿಕಾರಕ್ಕೆ ಬರುವ ಪರಿಸ್ಥಿತಿ ಇದೆಯೇ ಎನ್ನುವುದನ್ನೂ ವಾಸ್ತವಿಕ ನೆಲೆಯಲ್ಲಿ ಯೋಚಿಸಬೇಕು.

ಕರ್ನಾಟಕದ ಇಂದಿನ ರಾಜಕೀಯ ಸಂದರ್ಭದಲ್ಲಿ ಬಿಜೆಪಿ ಪಕ್ಷವನ್ನು ಅಧಿಕಾರದಿಂದ ಕಿತ್ತೊಗೆಯ ಬೇಕಾದದ್ದು ಅತ್ಯಂತ ತುರ್ತಿನ ರಾಜಕೀಯ ಅವಶ್ಯಕತೆಯಾಗಿದೆ. ಇದರಿಂದ ರಾಜ್ಯದ ಜನತೆ ಮತ್ತು ವಿಶೇಷವಾಗಿ ಜಾತ್ಯಾತೀತ ರಾಜಕೀಯ ಶಕ್ತಿಗಳು ಈಗಿನ ಬೆಳವಣಿಗೆಗಳಿಂದ ವಿಚಲಿತರಾಗಬಾರದು.

ದೇಶದ ಜನತೆ ಮೋದಿ ಸರ್ಕಾರದ ಬಗ್ಗೆ ಭ್ರಮನಿರಸನ ಗೊಳ್ಳುತ್ತಿರುವಾಗ ಅತ್ಯಂತ ಸೀಮಿತವಾಗಿಯಾದರೂ ದೇಶದಲ್ಲಿ ಇತ್ತೀಚೆಗೆ ನಡೆದ ರಾಜ್ಯಸಭೆಯ ಚುನಾವಣೆಯ ಫಲಿತಾಂಶದಿಂದ ಬಿಜೆಪಿ ಒಂದಿಷ್ಟು ಹುಮ್ಮಸ್ಸು ಪಡೆದಿದೆ. ಇದರ ಪರಿಣಾಮ ಜನತೆಯ ಮೇಲೆ ಮತ್ತಷ್ಟು ಧಾಳಿಗಳು ಹೆಚ್ಚಾಗಲೂಬಹುದು. ಇಂತಹ ಸನ್ನಿವೇಶವನ್ನು ಅತ್ಯಂತ ದೃಢತೆ ಮತ್ತು ವಿಶಾಲವಾದ ಒಗ್ಗಟ್ಟಿನ ನೆಲೆಯಲ್ಲಿ ಎದುರಿಸಲೇಬೇಕು ಬಿಜೆಪಿ ಮತ್ತು ಆರೆಸ್ಸೆಸ್ ನಂತಹ ಪ್ರಬಲ ಶಕ್ತಿಗಳನ್ನು ಎದುರಿಸುವಲ್ಲಿ ಸ್ವಾರ್ಥದ ವ್ಯಕ್ತಿನಿಷ್ಠ ಸಂಕುಚಿತ ರಾಜಕೀಯ ನಿಲುವುಗಳಿಗೆ ಯಾರೂ ಇಳಿಯಬಾರದು. ಈಗಿನ ಆತಂಕವನ್ನು ನಿವಾರಿಸಿ ಫ್ಯಾಸಿಸ್ಟ್ ಮನೋಭಾವದ ಬಿಜೆಪಿಯ ವಿರುದ್ಧ ಹೋರಾಟವನ್ನು ವಿಸ್ತೃತಗೊಳಿಸಲು ಮತ್ತು ಜಾತ್ಯಾತೀತ ಶಕ್ತಿಗಳಲ್ಲಿ ಆತಂಕವನ್ನು ನಿವಾರಿಸಲು ಎಲ್ಲರೂ ಒಗ್ಗಟ್ಟಾಗಿ ಶ್ರಮಿಸಬೇಕಿದೆ. ●



ನಾ ದಿವಾಕರ



ಪ್ರಜ್ಞೆಯ ಕೊರತೆಯ ನಡುವೆಯೇ ಮತ್ತೊಂದು ಪರಿಸರ ದಿನ

ಮಾನವ ಸಮಾಜಕ್ಕೆ ಸಂಬಂಧಪಟ್ಟ ಎಲ್ಲ ಚಟುವಟಿಕೆಗಳಿಗೂ ಒಂದು ದಿನಾಚರಣೆ ಇರುವುದು ಆಧುನಿಕ ಜಗತ್ತಿನ ವೈಶಿಷ್ಟ್ಯ. ಮನುಜ ಸಂಬಂಧಗಳು, ಸಾಮಾಜಿಕ ವಿದ್ಯಮಾನಗಳು, ಚಾರಿತ್ರಿಕ ದಿನಗಳು ವಾರ್ಷಿಕ ದಿನಾಚರಣೆಗಳ ರೂಪದಲ್ಲಿ ಸಾರ್ವಜನಿಕ ಜನಸಾಮಾನ್ಯರ ನಡುವೆ ಇತಿಹಾಸದ ಪ್ರಜ್ಞೆಯನ್ನು ಜಾಗೃತಗೊಳಿಸಿ, ವರ್ತಮಾನದ ಅರಿವನ್ನು ವಿಸ್ತರಿಸಲು ನೆರವಾಗುತ್ತವೆ. ಮೂಲತಃ ಪಾಶ್ಚಿಮಾತ್ಯ ರಾಷ್ಟ್ರಗಳಿಂದಲೇ ಮೂಡಿಬಂದ ಈ ಆಚರಣೆಗಳು ಆಧುನಿಕ ಯುಗದಲ್ಲಿ, ಜಾಗತೀಕರಣಗೊಂಡ ಅರ್ಥವ್ಯವಸ್ಥೆಯಲ್ಲಿ ಮಾರುಕಟ್ಟೆ ಸಂಬಂಧಿತವಾಗಿಯೇ ಉಳಿದುಬಿಡುತ್ತವೆ. ಒಂದು ವಿಶಿಷ್ಟ, ನಿರ್ದಿಷ್ಟ ದಿನವನ್ನು ಏತಕ್ಕಾಗಿ ಆಚರಿಸಲಾಗುತ್ತದೆ, ಈ ಆಚರಣೆಯ ಮೂಲಕ ಏನನ್ನು ಸಾಧಿಸಲು ಹೊರಟಿದ್ದೇವೆ ಎಂಬ ಸಾಮಾನ್ಯ ಅರಿವೂ ಇಲ್ಲದೆ ಯಾಂತ್ರಿಕವಾಗಿ ಆಚರಿಸಲಾಗುವ ಹಲವು ದಿನಗಳನ್ನು ಕಾಣುತ್ತಲೇ ಬಂದಿದ್ದೇವೆ. ನಾಗರಿಕ ಪ್ರಜ್ಞೆ, ಸಾಮಾಜಿಕ ಕಳಕಳಿ ಮತ್ತು ಮಾನವ ಸಮಾಜದ ಉನ್ನತಿಗಾಗಿ ಸಾಮಾನ್ಯ ಜನರ ನಡುವೆ ಜಾಗೃತ ಪ್ರಜ್ಞೆಯನ್ನು ಮೂಡಿಸುವ ನಿಟ್ಟಿನಲ್ಲಿ ಈ ದಿನಾಚರಣೆಗಳು ಸಾಗಬೇಕಾಗುತ್ತವೆ. ಇಂತಹ ಆಚರಣೆಗಳಲ್ಲೊಂದು ಇಂದು ಆಚರಿಸಲಾಗುತ್ತಿರುವ ವಿಶ್ವ ಪರಿಸರ ದಿನ.

ಅರಣ್ಯ ವ್ಯಾಪ್ತಿ ಹೆಚ್ಚಾಗಿದೆಯೇ, ಕಡಿಮೆಯಾಗಿದೆಯೇ?

ಭಾರತದ ಸಂದರ್ಭದಲ್ಲಿ ನೋಡಿದಾಗ ಸಾಮಾನ್ಯ ಪರಿಸರ ಪ್ರಜ್ಞೆಯೇ ಇಲ್ಲದಂತಹ ಒಂದು ಬೃಹತ್ ಜನಸಮೂಹ ನಮ್ಮ ನಡುವೆ ಇದೆ. ಪರಿಸರ ಎಂದ ಕೂಡಲೇ ಸಾಮಾನ್ಯ ಗ್ರಹಿಕೆಯು ಕಾಡು ಮೇಡು, ಬೆಟ್ಟ ಗುಡ್ಡ, ಜಲಮೂಲಗಳು ಮತ್ತು ನೈಸರ್ಗಿಕ ಸಂಪನ್ಮೂಲಗಳತ್ತ ಹೊರಳುತ್ತದೆ. ಜೀವ ವೈವಿಧ್ಯತೆಯನ್ನು ಕಾಪಾಡಲು ಬೇಕಾದ ಹಸಿರು ವಲಯ ಇದರಲ್ಲಿ ಪ್ರಧಾನವಾಗಿ ಬಿಂಬಿತವಾಗುತ್ತದೆ. ಭಾರತದ ಅರಣ್ಯ ಇಲಾಖೆ ತನ್ನ 2021ರ ವರದಿಯನ್ನು ಬಿಡುಗಡೆ ಮಾಡಿದ್ದು 2019 ರಿಂದ 21ರ ಅವಧಿಯಲ್ಲಿ ಭಾರತದ ಒಟ್ಟು ಅರಣ್ಯ ಪ್ರದೇಶದಲ್ಲಿ 1540 ಚದರ ಕಿಲೋಮೀಟರ್ ಹೆಚ್ಚಳ ಕಂಡುಬಂದಿದೆ. 2021ರ ಭಾರತೀಯ ಅರಣ್ಯ ವರದಿಯ ಅನುಸಾರ ದೇಶದ ಒಟ್ಟು ಅರಣ್ಯ ಪ್ರದೇಶದ ವ್ಯಾಪ್ತಿ 7,13,789 ಚದರ ಕಿಲೋಮೀಟರ್ ಇದ್ದು, ಒಟ್ಟು ಭೌಗೋಳಿಕ ಪ್ರದೇಶದ ಶೇ 21.71ರಷ್ಟಿದೆ. 2019ರಲ್ಲಿ ಇದು ಶೇ 21.67ರಷ್ಟಿತ್ತು.

ಈ ವರದಿಯ ಅನುಸಾರ ಭಾರತದಲ್ಲಿ ಕಳೆದ ನಾಲ್ಕು ವರ್ಷಗಳಲ್ಲಿ ಒಟ್ಟು ಅರಣ್ಯಪ್ರದೇಶದ ವ್ಯಾಪ್ತಿ ಹೆಚ್ಚಾಗಿರುವುದು ಕಂಡುಬರುತ್ತದೆ. ಆದರೆ ಸೂಕ್ಷ್ಮವಾಗಿ ಗಮನಿಸಿದಾಗ ಈ ದತ್ತಾಂಶಗಳಲ್ಲಿ ಕೆಲವು ತಾಂತ್ರಿಕ ತಕರಾರುಗಳನ್ನೂ ಗುರುತಿಸಲು ಸಾಧ್ಯ. ಹೆಚ್ಚಳವಾಗಿರುವ ಅರಣ್ಯ ಪ್ರದೇಶದ ವ್ಯಾಪ್ತಿಗೆ ಮೂಲಕ ಕಾರಣ, ರಿಮೋಟ್ ಸೆನ್ಸಿಂಗ್ ಮೂಲಕ ಮಾಡಲಾಗುವ ಈ ಸಮೀಕ್ಷೆಯಲ್ಲಿ ಮುಕ್ತ ಅರಣ್ಯಗಳನ್ನೂ ಒಳಗೊಳ್ಳಲಾಗಿದೆ. ಮುಕ್ತ ಅರಣ್ಯಗಳೆಂದರೆ ವಾಣಿಜ್ಯ ಪ್ಲಾಂಟೇಷನ್‌ಗಳನ್ನೂ ಸೇರಿಸಿಕೊಳ್ಳಲಾಗುತ್ತದೆ. ದಟ್ಟಾರಣ್ಯ ಪ್ರದೇಶಗಳನ್ನಷ್ಟೇ ಪರಿಗಣಿಸಿದಾಗ 2019–21ರ ಅವಧಿಯಲ್ಲಿ ಅರಣ್ಯ ಪ್ರದೇಶದ ವ್ಯಾಪ್ತಿ ಕಡಿಮೆಯಾಗಿರುವುದು ಕಂಡುಬರುತ್ತದೆ. ಈ ವರದಿಯೊಂದಿಗೇ ಬಿಡುಗಡೆಯಾಗಿರುವ ಮಾಂಗಬೇ–ಇಂಡಿಯಾ ಸಮೀಕ್ಷೆಯ ಅನುಸಾರ 2009–19ರ ಒಂದು ದಶಕದ ಅವಧಿಯಲ್ಲಿ ಭಾರತದ ಈಶಾನ್ಯ ಪ್ರದೇಶದಲ್ಲಿ 3199 ಚದರ ಕಿಲೋಮೀಟರ್ ಅರಣ್ಯಪ್ರದೇಶ ಮರೆಯಾಗಿದೆ. ಇದು ಅತಂಕಕಾರಿ ವಿಚಾರವಾಗಿದೆ. ಏಕೆಂದರೆ ಅರುಣಾಚಲ ಪ್ರದೇಶ, ಅಸ್ಸಾಂ, ಮಣಿಪುರ, ಮೇಘಾಲಯ, ಮಿಜೋರಾಂ, ನಾಗಾಲ್ಯಾಂಡ್, ಸಿಕ್ಕಿಂ ಮತ್ತು ತ್ರಿಪುರಾ ಈ ರಾಜ್ಯಗಳನ್ನೊಳಗೊಳ್ಳುವ ಈಶಾನ್ಯ ಭಾರತ, ಜಗತ್ತಿನ 17 ಅತಿದೊಡ್ಡ ಜೀವವೈವಿಧ್ಯ ಉಷ್ಣ ಪ್ರದೇಶವಾಗಿದೆ. ಭಾರತದ ಒಟ್ಟು ಶೇ 7.98 ಭೌಗೋಳಿಕ ಪ್ರದೇಶವನ್ನು ಹೊಂದಿರುವ ಈಶಾನ್ಯ ಭಾರತ ಒಟ್ಟು ಶೇ 25ರಷ್ಟು ಅರಣ್ಯಪ್ರದೇಶವನ್ನು ಹೊಂದಿದೆ.

ಈ ಪ್ರದೇಶದಲ್ಲೇ ಅರಣ್ಯ ವಲಯ ಕ್ಷೀಣಿಸುತ್ತಿರುವುದು ಚಿಂತೆಗೀಡುಮಾಡುವ ವಿಚಾರವಾಗಿದ್ದು ಇದಕ್ಕೆ ಮೂಲ ಕಾರಣ ಅಭಿವೃದ್ಧಿ ಯೋಜನೆಗಳೇ ಆಗಿವೆ. ಬಂಡವಾಳಶಾಹಿ ಆರ್ಥಿಕತೆಯಲ್ಲಿ ಅರಣ್ಯ ಮತ್ತು ಜಲಸಂಪನ್ಮೂಲಗಳನ್ನೂ ಸೇರಿದಂತೆ ಎಲ್ಲ ನೈಸರ್ಗಿಕ ಸಂಪನ್ಮೂಲಗಳನ್ನೂ ಮಾರುಕಟ್ಟೆಯ ಉತ್ಪಾದನೆಯ ಮೂಲಗಳೆಂದೇ ಪರಿಗಣಿಸುವುದರಿಂದ, ನಿಸರ್ಗ ಶೋಷಣೆ ಅವ್ಯಾಹತವಾಗಿ ನಡೆಯುತ್ತಲೇ ಇರುತ್ತದೆ. ಕಳೆದ ಮೂರು ದಶಕಗಳಲ್ಲಿ ಭಾರತದಲ್ಲಿ 29 ಸಾವಿರ ಚದರ ಕಿಲೋಮೀಟರ್ ಅರಣ್ಯ ಪ್ರದೇಶಗಳು ಅಭಿವೃದ್ಧಿ ಯೋಜನೆಗಳಿಗೆ ಬಲಿಯಾಗಿವೆ. ಇದರ ಪೈಕಿ 23 ಸಾವಿರ ಚದರ ಕಿಲೋಮೀಟರ್ ಕೈಗಾರಿಕಾ ಯೋಜನೆಗಳಿಗೇ ಬಲಿಯಾಗಿದೆ. ಮಧ್ಯಪ್ರದೇಶವೊಂದರಲ್ಲೇ ಈ ಅವಧಿಯಲ್ಲಿ 14 ಸಾವಿರ ಚದರ ಕಿಲೋಮೀಟರ್ ಅರಣ್ಯ ಪ್ರದೇಶವನ್ನು ಗಣಿಗಾರಿಕೆ, ರಕ್ಷಣಾ ಯೋಜನೆಗಳು ಮತ್ತು ಜಲವಿದ್ಯುತ್ ಉತ್ಪಾದನೆಗಾಗಿ ನೀಡಲಾಗಿದೆ. ಸ್ವತಂತ್ರ ಅಧ್ಯಯನಗಳ ಪ್ರಕಾರ ಪಶ್ಚಿಮ ಘಟ್ಟಗಳ ನಾಲ್ಕೂ ವಲಯಗಳಲ್ಲಿ ಅರಣ್ಯ ಸಂಪತ್ತು ಕ್ಷೀಣಿಸುತ್ತಿದ್ದು ಉತ್ತರದಲ್ಲಿ ಶೇ 2.84, ಕೇಂದ್ರದಲ್ಲಿ ಶೇ 4.38 ಮತ್ತು ದಕ್ಷಿಣದಲ್ಲಿ ಶೇ 5.77ರಷ್ಟು ಅರಣ್ಯ ವಲಯ ಅಭಿವೃದ್ಧಿ ಯೋಜನೆಗಳ ಪಾಲಾಗಿದೆ. ಕೇಂದ್ರ ಸರ್ಕಾರದ ಬದಲಾದ ನೀತಿಗಳ ಹಿನ್ನೆಲೆಯಲ್ಲಿ ಪ್ರತಿ ವರ್ಷವೂ 25 ಸಾವಿರ ಹೆಕ್ಟೇರ್ ಅಂದರೆ 250 ಚದರ ಕಿಲೋಮೀಟರ್ ಅರಣ್ಯ ಪ್ರದೇಶವನ್ನು ಅರಣ್ಯೇತರ ಚಟುವಟಿಕೆಗಳಿಗಾಗಿ ಒದಗಿಸಲಾಗುತ್ತದೆ. ಇವುಗಳಲ್ಲಿ ಮುಖ್ಯವಾಗಿ ಗಣಿಗಾರಿಕೆ, ರಕ್ಷಣಾ ಯೋಜನೆಗಳು, ಅಣೆಕಟ್ಟುಗಳು, ವಿದ್ಯುತ್ ಉತ್ಪಾದನೆ, ಕೈಗಾರಿಕೆ ಮತ್ತು ರಸ್ತೆ ಅಭಿವೃದ್ಧಿಯನ್ನು ಗುರುತಿಸಬಹುದು.

2019ರಲ್ಲಿ ಅಧಿಕಾರಕ್ಕೆ ಬಂದ ಕೂಡಲೇ ಕೇಂದ್ರ ಪರಿಸರ ಸಚಿವಾಲಯವು ಛತ್ತೀಸ್‌ಘಡದ ದಟ್ಟ ಹಸದೇವ್ ಅರಂಡ್ ಅರಣ್ಯ ಪ್ರದೇಶದಲ್ಲಿ ಕಲ್ಲಿದ್ದಲು ಗಣಿಗಾರಿಕೆಗೆ ಅನುಮತಿ ನೀಡಿ ಪರಿಸರ ನಿರಪೇಕ್ಷಣೆಯನ್ನು ನೀಡಿತ್ತು. ಈ ಪ್ರದೇಶದ 1 ಲಕ್ಷ 70 ಸಾವಿರ ಹೆಕ್ಟೇರ್ ದಟ್ಟಾರಣ್ಯವನ್ನು ಕಲ್ಲಿದ್ದಲು ಗಣಿಗಾರಿಕೆಗಾಗಿ ನೀಡಲಾಗಿತ್ತು. 30 ಕಲ್ಲಿದ್ದಲು ನಿಕ್ಷೇಪಗಳಿರುವ ಈ ಪ್ರದೇಶದಲ್ಲಿ ರಾಜಸ್ಥಾನ ವಿದ್ಯುತ್ ಉತ್ಪಾದನ್ ನಿಗಮ್ ನಿಗಮವು ವಿದ್ಯುತ್ ಉತ್ಪಾದನೆ ಮಾಡಲಿದ್ದು, ಇದರ ನಿರ್ವಹಣೆಯನ್ನು ಅದಾನಿ ಒಡೆತನದ ರಾಜಸ್ಥಾನ ಕೊಲೀರೀಸ್ ಲಿಮಿಟೆಡ್‌ಗೆ ನೀಡಲಾಗಿದೆ. ಈಗಾಗಲೇ 841 ಹೆಕ್ಟೇರ್ ದಟ್ಟಾರಣ್ಯ ಪ್ರದೇಶವನ್ನು ಈ ಕಂಪನಿಗೆ ಗುತ್ತಿಗೆಯ ಆಧಾರದಲ್ಲಿ ನೀಡಲಾಗಿದೆ. ಕಳೆದ ಅಕ್ಟೋಬರ್ ಮಾಹೆಯಲ್ಲಿ ಛತ್ತೀಸ್ಘಡದ ಹಲವು ಸಂಘಟನೆಗಳು ಈ ಯೋಜನೆಗಳನ್ನು ವಿರೋಧಿ, ಅರಣ್ಯ ಒತ್ತುವರಿಯನ್ನು ತಡೆಗಟ್ಟುವ ಆಗ್ರಹದೊಂದಿಗೆ 300 ಕಿಲೋಮೀಟರ್ ಪಾದಯಾತ್ರೆಯನ್ನು ಹಮ್ಮಿಕೊಂಡಿದ್ದವು. ರಾಯ್‌ಪುರ ವಲಯದ 350ಕ್ಕೂ ಹೆಚ್ಚು ಆದಿವಾಸಿ ಕುಟುಂಬಗಳು ಅಕ್ರಮ ಭೂ ಒತ್ತುವರಿಯ ವಿರುದ್ಧ ಈ ಹೋರಾಟದಲ್ಲಿ ಭಾಗವಹಿಸಿದ್ದವು. ಆದಾಗ್ಯೂ ಈ ವರ್ಷದ ಮಾರ್ಚ್ ಮಾಹೆಯಲ್ಲಿ ರಾಜ್ಯ ಸರ್ಕಾರವು ಪಾರ್ಸಾ ಕಲ್ಲಿದ್ದಲು ನಿಕ್ಷೇಪದ ಕಾರ್ಯಾಚರಣೆಗಾಗಿ 1136 ಹೆಕ್ಟೇರ್ ಭೂಮಿಯನ್ನು ಗಣಿಗಾರಿಕೆಗೆ ಬಳಸಿಕೊಳ್ಳಲು ನಿರಪೇಕ್ಷಣ ಪತ್ರವನ್ನು ನೀಡಿದೆ.

ಆಳುವ ವರ್ಗಗಳ ಈ ದ್ವಂದ್ವ ನೀತಿಗಳ ನಡುವೆಯೇ ಭಾರತ ಇಂದು ಹೆಚ್ಚಿನ ಉಷ್ಣಾಂಶದ ಅಪಾಯವನ್ನು ಎದುರಿಸುತ್ತಿದೆ. 2030ರ ವೇಳೆಗೆ ದೇಶದ ಒಟ್ಟು ಭೂ ಪ್ರದೇಶದ ಶೇ 30ರಷ್ಟನ್ನು ಅರಣ್ಯವಲಯವನ್ನಾಗಿ ಮಾಡುವ ಸರ್ಕಾರದ ಧ್ಯೇಯ ಸಾಕಾರಗೊಳ್ಳುವುದು ಬಹುಶಃ ಅಂಕಿಅಂಶಗಳಲ್ಲಿ ಮಾತ್ರವೇ ಸಾಧ್ಯ ಎನಿಸುತ್ತದೆ. ಅಥವಾ ಕಾಫಿ, ಚಹಾ, ತೆಂಗು ಮುಂತಾದ ಅರಣ್ಯೇತರ ಉತ್ಪನ್ನಗಳ ಪ್ಲಾಂಟೇಷನ್‌ಗಳನ್ನು ಒಳಗೊಳ್ಳುವ ಮೂಲಕ ಒಟ್ಟಾರೆ ಅರಣ್ಯ ಪ್ರದೇಶದ ಹೆಚ್ಚಳವನ್ನು ಬಿಂಬಿಸಬಹುದು. ಆದರೆ ಅರಣ್ಯವನ್ನೇ ನಂಬಿ ಬದುಕುವ ಸಾವಿರಾರು ಜೀವ ಪ್ರಬೇಧಗಳು ಮತ್ತು ಅರಣ್ಯ ಬದುಕನ್ನೇ ಆಶ್ರಯಿಸುವ ಲಕ್ಷಾಂತರ ಆದಿವಾಸಿ ಕುಟುಂಬಗಳ ಜೀವನೋಪಾಯಕ್ಕೆ ಅಂಕಿಅಂಶಗಳು ನೆರವಾಗುವುದಿಲ್ಲ. ದಿನದಿಂದ ದಿನಕ್ಕೆ ತಮ್ಮ ಮೂಲ ನೆಲೆಯನ್ನು ಕಳೆದುಕೊಳ್ಳುತ್ತಿರುವ ಆದಿವಾಸಿಗಳ ಸಂಖ್ಯೆ ಹೆಚ್ಚಾಗುತ್ತಿದೆ.

ಭಾರತದ ಅರಣ್ಯ ಇಲಾಖೆ ತನ್ನ 2021ರ ವರದಿಯನ್ನು ಬಿಡುಗಡೆ ಮಾಡಿದ್ದು 2019 ರಿಂದ 21ರ ಅವಧಿಯಲ್ಲಿ ಭಾರತದ ಒಟ್ಟು ಅರಣ್ಯ ಪ್ರದೇಶದಲ್ಲಿ 1540 ಚದರ ಕಿಲೋಮೀಟರ್ ಹೆಚ್ಚಳ ಕಂಡುಬಂದಿದೆ. ಆದರೆ ಸೂಕ್ಷ್ಮವಾಗಿ ಗಮನಿಸಿದಾಗ, ಹೆಚ್ಚಳವಾಗಿರುವ ಅರಣ್ಯ ಪ್ರದೇಶದ ವ್ಯಾಪ್ತಿಗೆ ಮೂಲಕ ಕಾರಣ, ರಿಮೋಟ್ ಸೆನ್ಸಿಂಗ್ ಮೂಲಕ ಮಾಡಲಾಗುವ ಈ ಸಮೀಕ್ಷೆಯಲ್ಲಿ ಮುಕ್ತ ಅರಣ್ಯಗಳನ್ನೂ ಒಳಗೊಳ್ಳಲಾಗಿದೆ. ಮುಕ್ತ ಅರಣ್ಯಗಳೆಂದರೆ ವಾಣಿಜ್ಯ ಪ್ಲಾಂಟೇಷನ್‌ಗಳನ್ನೂ ಸೇರಿಸಿಕೊಳ್ಳಲಾಗುತ್ತದೆ. ದಟ್ಟಾರಣ್ಯ ಪ್ರದೇಶಗಳನ್ನಷ್ಟೇ ಪರಿಗಣಿಸಿದಾಗ 2019–21ರ ಅವಧಿಯಲ್ಲಿ ಅರಣ್ಯ ಪ್ರದೇಶದ ವ್ಯಾಪ್ತಿ ಕಡಿಮೆಯಾಗಿರುವುದು ಕಂಡುಬರುತ್ತದೆ. ಈ ವರದಿಯೊಂದಿಗೇ ಬಿಡುಗಡೆಯಾಗಿರುವ ಮಾಂಗಬೇ–ಇಂಡಿಯಾ ಸಮೀಕ್ಷೆಯ ಅನುಸಾರ 2009–19ರ ಒಂದು ದಶಕದ ಅವಧಿಯಲ್ಲಿ ಭಾರತದ ಈಶಾನ್ಯ ಪ್ರದೇಶದಲ್ಲಿ 3199 ಚದರ ಕಿಲೋಮೀಟರ್ ಅರಣ್ಯಪ್ರದೇಶ ಮರೆಯಾಗಿದೆ.

ನೀರು ಮಾರುಕಟ್ಟೆ ಸರಕು

ಈ ಆತಂಕಗಳ ನಡುವೆಯೇ ನಾವು ಮತ್ತೊಂದು ಪರಿಸರ ದಿನವನ್ನು ಆಚರಿಸುತ್ತಿದ್ದೇವೆ. ಪರಿಸರ ಮಾಲಿನ್ಯ ಎಂದರೆ ಕೇವಲ ಕಾರ್ಖಾನೆಯಿಂದ ಹೊರಸೂಸಲಾಗುವ ಇಂಗಾಲ ಅಥವಾ ಕೈಗಾರಿಕಾ ತ್ಯಾಜ್ಯಗಳು ಮಾತ್ರವೇ ಅಲ್ಲ. ಅಥವಾ ಇತ್ತೀಚಿನ ದಿನಗಳಲ್ಲಿ ಧಾರ್ಮಿಕ ಸಮೀಕರಣಕ್ಕೊಳಗಾಗಿರುವ ಶಬ್ದಮಾಲಿನ್ಯದ ಮಾದರಿಗಳೂ ಅಲ್ಲ. ನಾವು ಬದುಕುತ್ತಿರುವ ಸಮಾಜದಲ್ಲಿ ನಿತ್ಯ ಕಾಣುತ್ತಿರುವ ಪರಿಸರ ಮಾಲಿನ್ಯ ಮತ್ತು ಜಲಮಾಲಿನ್ಯದ ಕಾರಣಗಳನ್ನು ಶೋಧಿಸುವುದರಲಿ, ಗುರುತಿಸಲೂ ಆಧುನಿಕ ನಾಗರಿಕತೆ ವಿಫಲವಾಗುತ್ತಿದೆ. ಬೃಹತ್ ಬೆಟ್ಟಗಳು, ಬೃಹದಾಕಾರದ ಬಂಡೆಗಳು ನಗರ ಸಂಸ್ಕೃತಿಯ ಗ್ರಾನೈಟ್ ಸಂಸ್ಕೃತಿಯ ಬಲಿಪಶುಗಳಾಗುತ್ತಿವೆ. ಕರಗುತ್ತಿರುವ ಈ ಬೆಟ್ಟಗಳು ಭವಿಷ್ಯದಲ್ಲಿ ಭೌಗೋಳಿಕ ಅಸಮತೋಲನ ಉಂಟುಮಾಡುವ ಅಪಾಯ ಒಂದೆಡೆಯಾದರೆ, ವರ್ತಮಾನದಲ್ಲೇ ಕಲ್ಲಿದ್ದಲು ಗಣಿಗಳ ಕುಸಿತ, ಕಲ್ಲುಗಣಿಗಳ ಸ್ಫೋಟ ಮತ್ತು ಬಂಡೆಗಳ ಕುಸಿತದಿಂದ ಸಾವಿರಾರು ಶ್ರಮಜೀವಿಗಳ ಜೀವ ಹರಣವಾಗುತ್ತಿದೆ.

ಜಲಸಂಪನ್ಮೂಲಗಳನ್ನು ರಕ್ಷಿಸುವ ಯಾವುದೇ ವೈಜ್ಞಾನಿಕ ಆಡಳಿತ ನೀತಿಯನ್ನು ಜಾರಿಗೊಳಿಸದ ಸರ್ಕಾರಗಳು ನದಿಗಳು ತುಂಬಿ ಹರಿದಾಗ ಬಾಗಿನ ಅರ್ಪಿಸಲು ತೋರುವಷ್ಟು ಆಸ್ಥೆ ಆ ನದಿ ನೀರಿನ ರಕ್ಷಣೆಯ ಬಗ್ಗೆ ತೋರುವುದಿಲ್ಲ. ಪೂಜನೀಯವಾಗಿ ಕಾಣಲಾಗುವ ಜಲಮೂಲಗಳನ್ನು, ನದಿಗಳನ್ನು

ಪುಟ 14 ಕ್ಕೆ



ಪರಧರ್ಮ ನಿಂದನೆಗೆ ತೆತ್ತ ಬೆಲೆ ತಿರುಗುಬಾಣವಾದ ಮುಸ್ಲಿಂ-ವಿರೋಧಿ ಧೋರಣೆ



ಧಾರ್ಮಿಕ ಭಾವನೆಗಳಿಗೆ ಘಾಸಿ ಮಾಡುವ ಪೋಸ್ಟ್‌ಗಳನ್ನು ಸಾಮಾಜಿಕ ಮಾಧ್ಯಮಗಳಲ್ಲಿ ಹಾಕಿದ ಅಥವಾ ಕೋಮು ಸೌಹಾರ್ದತೆ ಕೆಡಿಸಿದ ಆರೋಪದ ಮೇಲೆ ಈ ಹಿಂದೆ ಅನೇಕ ಮುಸ್ಲಿಮರನ್ನು ಬಂಧಿಸಲಾಗಿತ್ತು. ಆದರೆ, ನೂಪುರ್ ಶರ್ಮಾ ಅಥವಾ ನವೀನ್ ಜಿಂದಾಲ್ ವಿರುದ್ಧ ಆ ರೀತಿಯ ಯಾವುದೇ ಕ್ರಮವನ್ನು ಕೈಗೊಳ್ಳಲಾಗಿಲ್ಲ. ಅದರ ಬದಲು, ಜೀವ ಬೆದರಿಕೆ ಇದೆ ಎಂಬ ಹಿನ್ನೆಲೆಯಲ್ಲಿ ಕೇಂದ್ರ ಗೃಹ ಸಚಿವಾಲಯದ ಅಧೀನದಲ್ಲಿರುವ ದೆಹಲಿ ಪೊಲೀಸರು ನೂಪುರ್‌ಗೆ ರಕ್ಷಣೆ ಒದಗಿಸಿದ್ದಾರೆ.

ಪ್ರಕಾಶ್ ಕಾರಟ್

ಬಿಜೆಪಿ ಮತ್ತು ಮೋದಿ ಸರ್ಕಾರ ತಮ್ಮ ಆಟಾಟೋಪಕ್ಕೆ ತೆತ್ತ ಬೆಲೆ ತೆರುತ್ತಿವೆ. ಅವುಗಳ ಮುಸ್ಲಿಂ-ವಿರೋಧಿ ಧೋರಣೆ ಅವುಗಳಿಗೆ ತಿರುಗುಬಾಣ ಆಗುತ್ತಿದೆ. ವ್ಯವಸ್ಥಿತವಾದ ಮುಸ್ಲಿಂ-ವಿರೋಧಿ ಪ್ರಚಾರ ಹಾಗೂ ಇಸ್ಲಾಂಫೋಬಿಯಾವನ್ನು ಪ್ರಚೋದಿಸಿದ ನಂತರ ಸರ್ಕಾರ ಮತ್ತು ಆಳುವ ಪಕ್ಷ ಬಹುತೇಕ ಮುಸ್ಲಿಂ ದೇಶಗಳಿಂದ ಬಲವಾದ ರಾಜತಾಂತ್ರಿಕ ಹಿನ್ನಡೆ ಅನುಭವಿಸಿವೆ. ಅರಬ್ ಸಂಯುಕ್ತ ಸಂಸ್ಥಾನ (ಯುಎಇ), ಕತಾರ್, ಕುವೇಟ್, ಸೌದಿ ಅರೇಬಿಯಾ, ಇರಾನ್, ಇರಾಕ್, ಇಂಡೋನೇಷ್ಯಾ, ಮಲೇಷ್ಯಾ ಮತ್ತು ಟರ್ಕಿ ಆ ಪೈಕಿ ಪ್ರಮುಖ ದೇಶಗಳಾಗಿವೆ.

ಬಿಜೆಪಿಯ ರಾಷ್ಟ್ರೀಯ ವಕ್ತಾರೆ ನೂಪುರ್ ಶರ್ಮಾ ಹಾಗೂ ದೆಹಲಿ ಬಿಜೆಪಿ ವಕ್ತಾರ ನವೀನ್ ಜಿಂದಾಲ್ ಕ್ರಮವಾಗಿ ರಾಷ್ಟ್ರೀಯ ದೂರದರ್ಶನ ಹಾಗೂ ಸಾಮಾಜಿಕ ಮಾಧ್ಯಮದಲ್ಲಿ ಪ್ರವಾದಿ ಮಹಮದ್ ವಿರುದ್ಧ ಅವಹೇಳನಕಾರಿ ಟಿಪ್ಪಣಿಗಳನ್ನು ಮಾಡಿದ್ದರು. ನೂಪುರ್ ಶರ್ಮಾ ಮೇ 27ರಂದು ನೀಡಿದ್ದ ಖಂಡನೀಯ ಹೇಳಿಕೆಗೆ ದೇಶದಾದ್ಯಂತ ವ್ಯಾಪಕ ಪ್ರತಿರೋಧ ವ್ಯಕ್ತವಾಗಿತ್ತು. ಮುಸ್ಲಿಮರು ಮತ್ತು ಜಾತ್ಯತೀತ ಸಂಘಟನೆಗಳ ಈ ಪ್ರತಿಭಟನೆಗಳನ್ನು ಬಿಜೆಪಿ ಕಡೆಗಣಿಸಿತ್ತು. ಕಾನ್ಪುರದಲ್ಲಿ ಪ್ರತಿಭಟನೆಕಾರರನ್ನು ಅಧಿಕಾರಿಗಳು ಬರ್ಬರವಾಗಿ ನಡೆಸಿಕೊಂಡಿದ್ದರು. ಅನೇಕ ಮುಸ್ಲಿಮರನ್ನು ರಾಷ್ಟ್ರೀಯ ಭದ್ರತಾ ಕಾನೂನು (ಎನ್‌ಎಸ್‌ಎ) ಅಡಿ ಬಂಧಿಸಲಾಗಿದೆ.

ಆದರೆ, ಜೂನ್ 5 ರಂದು ಕತಾರ್ ಸರ್ಕಾರ, ಭಾರತೀಯ ರಾಯಭಾರಿಯನ್ನು ಕರೆಸಿಕೊಂಡು ಪ್ರತಿಭಟನೆಯನ್ನು ದಾಖಲಿಸಿತು. ನಂತರ ಕುವೇಟ್ ಮತ್ತು ಇತರ ಕೊಲ್ಲಿ ರಾಷ್ಟ್ರಗಳು ಕೂಡ ಪ್ರತಿಭಟನೆ ದಾಖಲಿಸಿದವು. ಈ ಹಿನ್ನೆಲೆಯಲ್ಲಿ, ನೂಪುರ್ ಮತ್ತು ನವೀನ್‌ರನ್ನು ಬಿಜೆಪಿ ಪಕ್ಷದಿಂದ ಉಚ್ಚಾಟಿಸಿತು.

ಅವಹೇಳನಕಾರಿ ಟಿಪ್ಪಣಿಗಳು ಸರ್ಕಾರದ ಅಭಿಪ್ರಾಯಗಳನ್ನು ಪ್ರತಿಬಿಂಬಿಸುವುದಿಲ್ಲ ಎಂದು ಕತಾರ್‌ನ ರಾಯಭಾರಿ ಮೂಲಕ ಭಾರತ ಹೇಳಿತು. ಅವುಗಳು ಕೆಲವು 'ಕ್ಷುಲ್ಲಕ ಶಕ್ತಿಗಳ' ಕೆಲಸವಾಗಿದೆ ಎಂದು ಸರ್ಕಾರ ಸಮಜಾಯಿಷಿ ನೀಡಿತು. ಈ ಹೇಳಿಕೆಯ ಬೂಟಾಟಿಕೆ ಎದ್ದು ಕಾಣುವಂತಿದೆ. ಪಕ್ಷದ ಅಧಿಕೃತ ವಕ್ತಾರರನ್ನೇ 'ಕ್ಷುಲ್ಲಕ ಶಕ್ತಿ'ಗಳು ಎನ್ನುವ ಮೂಲಕ ಬಿಜೆಪಿ ಪಕ್ಷ ಸ್ವಯಂ ತನ್ನನ್ನೇ ಖಂಡಿಸಿಕೊಂಡಂತಾಗಿದೆ. 'ಕ್ಷುಲ್ಲಕ ಶಕ್ತಿಗಳೇ' ಪಕ್ಷದ ಮುಖ್ಯ ವಾಹಿನಿ ಎಂದು ಅದು ದೃಢಪಡಿಸಿದೆ. ವಾಸ್ತವಾಗಿ, ಇಸ್ಲಾಂಫೋಬಿಯಾ ಬಿಜೆಪಿಯ ಘೋಷಿತ ಹಿಂದುತ್ವ ಸಿದ್ಧಾಂತದಲ್ಲೇ ಅಡಕವಾಗಿದೆ.

ಮುಸ್ಲಿಂ-ವಿರೋಧಿ ವಾಗ್ದಾಳಿಗಳು ಬಿಜೆಪಿಯ ಅಧಿಕೃತ ನಿಲುವಾಗಿದೆ. ಇತ್ತ ನೂಪುರ್ ಶರ್ಮಾರ ಟಿಪ್ಪಣಿಗಳು ಟಿವಿಯಲ್ಲಿ ಪ್ರಸಾರವಾಗುತ್ತಿದ್ದಾಗ ಅತ್ತ ಆಸ್ಟ್ರೇಲಿಯಾದಲ್ಲಿ ಬಿಜೆಪಿ ಸಂಸದ ಹಾಗೂ ಬಿಜೆಪಿ ಯುವ ಮೋರ್ಚಾ ಅಧ್ಯಕ್ಷ ತೇಜಸ್ವಿ ಸೂರ್ಯ, ಭಾರತದ ಮೇಲೆ ಮುಸ್ಲಿಮರ ಆಕ್ರಮಣವು "ಜಗತ್ತಿನ ಇತಿಹಾಸದಲ್ಲೇ ಅತ್ಯಂತ ರಕ್ತಸಿಕ್ತ ಅಧ್ಯಾಯ' ಎಂದು ಹೇಳುತ್ತಿದ್ದರು. 'ಇಸ್ಲಾಂ ಇತಿಹಾಸವೇ ರಕ್ತಪಾತ ಹಾಗೂ ಹಿಂಸೆಯಿಂದ ಕೂಡಿದ್ದಾಗಿದೆ' ಎಂದೂ ಅವರು ಹೇಳಿದರು. ಮುಸ್ಲಿಂ ವಿದ್ಯಾರ್ಥಿ ಸಂಘಟನೆಗಳು ಮತ್ತು ನಾಗರಿಕ ಹಕ್ಕುಗಳ ಗುಂಪುಗಳ ಪ್ರತಿಭಟನೆಯಿಂದಾಗಿ ಅಧಿಕೃತ 'ಆಸ್ಟ್ರೇಲಿಯಾ-ಭಾರತ ಯುವ ಸಂವಾದ' ಕಾರ್ಯಕ್ರಮದಲ್ಲಿ ಸೂರ್ಯ ಭಾಗವಹಿಸುವುದನ್ನು ರದ್ದುಪಡಿಸಲಾಯಿತು.

57 ಸದಸ್ಯ ದೇಶಗಳಿರುವ ಇಸ್ಲಾಮಿಕ್ ಸಹಕಾರ ಸಂಸ್ಥೆಯ (ಒಐಸಿ) ಕಾರ್ಯದರ್ಶಿ ಮಂಡಲಿಯ ಹೇಳಿಕೆಯನ್ನು ಭಾರತದ ವಿದೇಶಾಂಗ ಸಚಿವಾಲಯದ ವಕ್ತಾರರು ಬಲವಾಗಿ ಖಂಡಿಸಿದರು. ಒಐಸಿ ಹೇಳಿಕೆ ಕೋಮುವಾದಪ್ರೇರಿತ ಹೇಳಿಕೆಯಾಗಿದೆ ಎಂದವರು ವರ್ಣಿಸಿದರು. ಯಾವ ಸಂದರ್ಭದಲ್ಲಿ ಪ್ರವಾದಿ ವಿರುದ್ಧ ನಿಂದನಾತ್ಮಕ ಹೇಳಿಕೆ ನೀಡಲಾಗಿದೆ ಎಂಬುದನ್ನು ಒಐಸಿ ಹೇಳಿಕೆಯು ನಿಖರವಾಗಿ ತಿಳಿಸಿತ್ತು. ಹೀಗಾಗಿ ಸರ್ಕಾರ ಈ ರೀತಿಯ ಪ್ರತಿಕ್ರಿಯೆ ವ್ಯಕ್ತಪಡಿಸಿದೆ. 'ಇಸ್ಲಾಂ ವಿರುದ್ಧ ಹೆಚ್ಚುತ್ತಿರುವ ದ್ವೇಷ ಮತ್ತು ಮಾನಹಾನಿಕರ ಹೇಳಿಕೆಗಳ ಪ್ರವಾಹ' ಮತ್ತು ಭಾರತದ ಕೆಲವು ರಾಜ್ಯಗಳ ಶಿಕ್ಷಣ ಸಂಸ್ಥೆಗಳಲ್ಲಿ ಹಿಜಾಬ್ ಧರಿಸಲು ನಿರ್ಬಂಧಿಸಲು ನಿರ್ಧರಿಸಿರುವ ಹಿನ್ನೆಲೆಯಲ್ಲಿ ನೋಡಿದರೆ ಭಾರತೀಯ ಮುಸ್ಲಿಮರ ಆಚರಣೆಗಳ ವಿರುದ್ಧ ವ್ಯವಸ್ಥಿತ ಪ್ರಚಾರ ನಡೆಯುತ್ತಿದ್ದು ಆಳುವ ಪಕ್ಷದ ವಕ್ತಾರರ ಹೇಳಿಕೆ ಅದರ ಭಾಗವಾಗಿದೆ. ಮುಸ್ಲಿಮರ ಆಸ್ತಿಪಾಸ್ತಿ ನಾಶ ಹಾಗೂ ಅವರ ವಿರುದ್ಧ ಹೆಚ್ಚುತ್ತಿರುವ ಹಿಂಸಾಚಾರದ ಭಾಗವೂ ಆಗಿದೆ ಎಂದು ಒಐಸಿ ಹೇಳಿಕೆ ಟಿಪ್ಪಣಿ ಮಾಡಿತ್ತು. ವಾಸ್ತವವನ್ನು ಇದ್ದಂತೆ ಹೇಳಿದ್ದರಿಂದ ಮೋದಿ ಸರ್ಕಾರ ಈ ರೀತಿಯ ಸಿಟ್ಟಿನ ಪ್ರತಿಕ್ರಿಯೆ ನೀಡಿದೆ. 'ಇದ್ದಿದ್ದನ್ನು ಇದ್ದಂತೆ ಹೇಳಿದರೆ ಎದ್ದು ಬಂದು ಒದ್ದನಂತೆ' ಎನ್ನುವ ಆಡುಮಾತಿಗೆ ತಕ್ಕುದಾಗಿದೆ ಸರ್ಕಾರದ ಧೋರಣೆ.

ಮುಸ್ಲಿಂ-ವಿರೋಧಿ ಅಜೆಂಡಾವು ರಾಷ್ಟ್ರೀಯ ಏಕತೆ ಮೇಲೆ ಗಂಭೀರ ದುಷ್ಪರಿಣಾಮ ಬೀರುತ್ತಿದ್ದು ಎಲ್ಲ ಬಗೆಯ ಉಗ್ರಗಾಮಿ ಹಿಂಸಾಚಾರ ಆರಂಭವಾಗಿದೆ. ಜಮ್ಮು ಮತ್ತು ಕಾಶ್ಮೀರದಲ್ಲಿ ಅದರ ವಿನಾಶಕಾರಿ ರೂಪ ಕಾಣುತ್ತಿದೆ. ಜಮ್ಮು ಮತ್ತು ಕಾಶ್ಮೀರ ರಾಜ್ಯವನ್ನು ವಿಸರ್ಜಿಸಿ ಅದರ ವಿಶೇಷ ಸ್ಥಾನಮಾನ ತೆಗೆದು ಹಾಕಿದ್ದು ಕಾಶ್ಮೀರಿ ಮುಸ್ಲಿಮರನ್ನು ಮತ್ತು ಕಣಿವೆಯ ಮುಖ್ಯ ವಾಹಿನಿಯ ರಾಜಕೀಯ ಪಕ್ಷಗಳನ್ನು ಅಂಚಿಗೆ ತಳ್ಳಲು ಭೂಮಿಕೆಯನ್ನು ಸಿದ್ಧಪಡಿಸಲು ನೆರವಾಗಿದೆ. ಕಣಿವೆಯಲ್ಲಿ ಮೂಲಭೂತ ಹಕ್ಕುಗಳನ್ನು ಬರ್ಬರವಾಗಿ ದಮನಿಸಲಾಗುತ್ತಿದೆ. ಇದರಿಂದಾಗಿ ಮುಸ್ಲಿಂ ಉಗ್ರವಾದಿ ಚಟುವಟಿಕೆ ಹೆಚ್ಚಿ ಕಾಶ್ಮೀರಿ ಪಂಡಿತರು ಮತ್ತು ವಲಸೆ ಕಾರ್ಮಿಕರನ್ನು ಗುರಿಯಾಗಿಸಿ ಭಯೋತ್ಪಾದಕ ಗುಂಪುಗಳವರು ಕೊಲ್ಲುತ್ತಿದ್ದಾರೆ. ಇದರ ಫಲವಾಗಿ ಮೋದಿ ಸರ್ಕಾರದ ಜಮ್ಮು ಮತ್ತು ಕಾಶ್ಮೀರ ನೀತಿ ವಿಫಲವಾಗಿದೆ. ಪರಧರ್ಮ ನಿಂದನೆ, ಧರ್ಮಾಂಧತೆಗೆ ಈ ರೀತಿ ಬೆಲೆ ತೆರಲಾಗುತ್ತಿದೆ.

ಧಾರ್ಮಿಕ ಭಾವನೆಗಳಿಗೆ ಘಾಸಿ ಮಾಡುವ ಪೋಸ್ಟ್‌ಗಳನ್ನು ಸಾಮಾಜಿಕ ಮಾಧ್ಯಮಗಳಲ್ಲಿ ಹಾಕಿದ ಅಥವಾ ಕೋಮು ಸೌಹಾರ್ದತೆ ಕೆಡಿಸಿದ ಆರೋಪದ ಮೇಲೆ ಈ ಹಿಂದೆ ಅನೇಕ ಮುಸ್ಲಿಮರನ್ನು ಬಂಧಿಸಲಾಗಿತ್ತು. ಆದರೆ, ನೂಪುರ್ ಶರ್ಮಾ ಅಥವಾ ನವೀನ್ ಜಿಂದಾಲ್ ವಿರುದ್ಧ ಆ ರೀತಿಯ ಯಾವುದೇ ಕ್ರಮವನ್ನು ಕೈಗೊಳ್ಳಲಾಗಿಲ್ಲ. ಅದರ ಬದಲು, ಜೀವ ಬೆದರಿಕೆ ಇದೆ ಎಂಬ ಹಿನ್ನೆಲೆಯಲ್ಲಿ ಕೇಂದ್ರ ಗೃಹ ಸಚಿವಾಲಯದ ಅಧೀನದಲ್ಲಿರುವ ದೆಹಲಿ ಪೊಲೀಸರು ನೂಪುರ್‌ಗೆ ರಕ್ಷಣೆ ಒದಗಿಸಿದ್ದಾರೆ.

ಆಕೆಯ ಪಕ್ಷದ ಸದಸ್ಯತ್ವವನ್ನು ಅಮಾನತು ಮಾಡಿರುವುದು ಬಿಜೆಪಿ ಮತ್ತು ಆರ್‌ಎಸ್‌ಎಸ್ ಬೆಂಬಲಿಗರಿಗೆ ಪಥ್ಯವಾಗಿಲ್ಲ ಎನ್ನುವುದು ಸ್ಪಷ್ಟ. ಈ ಕ್ರಮ ಕೈಗೊಂಡಿದ್ದು ಕೂಡ ಬಾಹ್ಯ ಒತ್ತಡದ ಪರಿಣಾಮವಾಗಿ ಎನ್ನುವುದನ್ನು ಗಮನಿಸಬೇಕು. ಬಿಜೆಪಿ ನಾಯಕತ್ವ ನೀಡಿದ್ದ ಹೇಳಿಕೆಯು ನೂಪುರ್ ಹೇಳಿಕೆಯನ್ನು ಬಲವಾಗಿ ಖಂಡಿಸಿಯೂ ಇಲ್ಲ ತನಗೂ ಅವರಿಗೂ ಯಾವುದೇ ಸಂಬಂಧವಿಲ್ಲ ಎಂದು ಹೇಳಿಯೂ ಇಲ್ಲ ಎನ್ನುವುದೂ ಗಮನಾರ್ಹ.

ತನ್ನ ಸರ್ಕಾರ ಎಲ್ಲ ಧರ್ಮಗಳನ್ನು ಗೌರವಿಸುತ್ತದೆ ಎಂದು ಮೋದಿ ಸರ್ಕಾರ ಹೇಳಿದರೆ ಸಾಲದು. ಮುಸ್ಲಿಮರನ್ನು ಎಲ್ಲ ವಿಚಾರಗಳಲ್ಲಿ ಸಮಾನ ನಾಗರಿಕರಾಗಿ ನೋಡಿಕೊಳ್ಳಲಾಗುತ್ತದೆ ಹಾಗೂ ಮುಸ್ಲಿಂ-ವಿರೋಧಿ ಚಟುವಟಿಕೆಗಳನ್ನು ಕಾನೂನು ಮೂಲಕ ಹತ್ತಿಕ್ಕಲಾಗುತ್ತದೆ ಎಂದು ಅದು ಇಡೀ ದೇಶ ಮತ್ತು ಜಗತ್ತಿಗೆ ಖಾತರಿ ನೀಡಬೇಕು.

ಆ ರೀತಿ ಸ್ಪಷ್ಟವಾಗಿ ಹೇಳುವುದಿಲ್ಲವೆಂದರೆ, ರಾಜತಾಂತ್ರಿಕ ಆಕ್ರೋಶ ತಣಿಯುವವರೆಗೆ ಬಿಜೆಪಿ ಹಾಗೂ ಸರ್ಕಾರ ಸಮಯ ತೆಗೆದುಕೊಳ್ಳುತ್ತದೆ ಎಂದು ಅರ್ಥವಾಗುತ್ತದೆ. ಆಕ್ರೋಶ ತಣ್ಣಗಾದ ಮೇಲೆ ಮತ್ತೆ ಮುಸ್ಲಿಂ-ವಿರೋಧಿ ಆಟಾಟೋಪ ಶುರು ಮಾಡುತ್ತದೆ ಎಂದಾಗುತ್ತದೆ. ಬಿಜೆಪಿ ಮತ್ತು ಮೋದಿ ಸರ್ಕಾರದ ಹಿಂದುತ್ವ ಅಜೆಂಡಾವು ಹೆಚ್ಚೆಚ್ಚಾಗಿ ಅಂತಾರಾಷ್ಟ್ರೀಯ ಪರಿಶೀಲನೆಗೆ ಒಳಪಡುತ್ತಿದೆ ಎನ್ನುವುದುನ್ನು ನೂಪುರ್ ಶರ್ಮಾ ಪ್ರಕರಣ ತೋರಿಸಿಕೊಟ್ಟಿದೆ. 'ವಿಶ್ವ ಗುರು'ವನ್ನು ಜಗತ್ತು ಒಂದು ಕರಾಳ ಹಾಗೂ ಅಮಂಗಳದ ಬೆಳಕಿನಲ್ಲಿ ನೋಡುತ್ತಿದೆ.

ಅನು: ವಿಶ್ವ

ಕೇಂದ್ರ ಗೃಹಮಂತ್ರಿಗಳಿಗೆ ಸಿಪಿಐ(ಎಂ) ಸಂಸದ ಶಿವದಾಸನ್ ಪತ್ರ...... ಪುಟ 2 ರಿಂದ

ಮತ್ತು ನಿಭಾಯಿಸುವ ಸಾಮರ್ಥ್ಯ ತನಗಿಲ್ಲೆಂದು ಸಾಬೀತು ಪಡಿಸಿದೆ.

ಈ ಭಯೋತ್ಪಾದಕ ದಾಳಿಗಳನ್ನು ತಡೆಯುವಲ್ಲಿನ ವಿಫಲತೆ ಕಾಶ್ಮೀರ ಪ್ರಶ್ನೆಯನ್ನು ನಿಭಾಯಿಸಲು ಕೈಗೊಂಡಿರುವ ಕ್ರಮಗಳ ವಿಫಲತೆಯನ್ನು ಬಹಿರಂಗ ಪಡಿಸುತ್ತಿದೆ. ಕೇಂದ್ರ ಸರಕಾರ ತಕ್ಷಣವೇ ಸಂಬಂಧಪಟ್ಟ ಎಲ್ಲರೊಡನೆ ಸಮಾಲೋಚನೆ ನಡೆಸಿ ಇಂತಹ ಹೀನ ಪ್ರಹಾರಗಳಿಂದ ಅಮಾಯಕ ಜನಗಳ ಅಮೂಲ್ಯ ಜೀವಗಳು ನಷ್ಟಗೊಳ್ಳದಂತೆ ಖಾತ್ರಿಪಡಿಸಲು ತುರ್ತು ಕ್ರಮಗಳನ್ನು ಕೈಗೊಳ್ಳಬೇಕು ಎಂದು ಶಿವದಾಸನ್ ತಮ್ಮ ಪತ್ರದಲ್ಲಿ ಹೇಳಿದ್ದಾರೆ.

ಕಾಶ್ಮೀರಿಗಳ ಪಾಡನ್ನು ರಾಜಕೀಯ ಪ್ರಚಾರದ ಸಾಧನವಾಗಿ ಬಳಸಲಾಗುತ್ತಿದೆ. ಇದರಿಂದಾಗಿ ಕಾಶ್ಮೀರದಲ್ಲಿ ಪರಿಸ್ಥಿತಿ ಇನ್ನಷ್ಟು ಹದಗೆಡುವಂತಾಗಿದೆ. ನಿಜವಾದ ಸಮಸ್ಯೆಯನ್ನು ಎದುರಿಸಲಾಗುತ್ತಿಲ್ಲ, ಅದನ್ನು ಅರ್ಥಮಾಡಿಕೊಂಡಂತೆಯೂ ಇಲ್ಲ. ಕಾಶ್ಮೀರದಲ್ಲೀಗ ಜನಗಳೊಂದಿಗೆ ಬಲವಾದ ಸಂಬಂಧಗಳನ್ನು ಹೊಂದಿರುವ ಒಂದು ಶಾಸನಬದ್ಧ ಮತ್ತು ಪ್ರಜಾಸತ್ತಾತ್ಮಕ ಸರಕಾರ ಬೇಕಾಗಿದೆ. ಈ ಬಗ್ಗೆ ಕೇಂದ್ರ ಸರಕಾರ ತುರ್ತಾಗಿ ಕಾರ್ಯರತವಾಗಬೇಕಾಗಿದೆ, ಕಾಶ್ಮೀರದ ನಾಗರಿಕರ ಜೀವನದ ಹಕ್ಕನ್ನು ಖಾತ್ರಿಪಡಿಸಬೇಕಾಗಿದೆ ಮತ್ತು ಜನಗಳ ಜೀವ ಮತ್ತು ಜೀವನೋಪಾಯಗಳನ್ನು ರಕ್ಷಿಸಲು ಮುಂದಾಗಿ ಕ್ರಮಗಳನ್ನು ಕೈಗೊಳ್ಳಬೇಕಾಗಿದೆ ಎಂದು ಸಿಪಿಐ(ಎಂ) ಸಂಸದ ಶಿವದಾಸನ್ ಕೇಂದ್ರ ಗೃಹಮಂತ್ರಿಗಳನ್ನು ತಮ್ಮ ಈ ಪತ್ರದಲ್ಲಿ ಆಗ್ರಹಿಸಿದ್ದಾರೆ.

ಕಾರ್ಮಿಕ ಸಚಿವರ ವಜಾಕ್ಕೆ ಆಗ್ರಹ ರಾಜ್ಯಾದ್ಯಂತ ಕಟ್ಟಡ ಕಾರ್ಮಿಕರ ಹೋರಾಟ...... ಪುಟ 4 ರಿಂದ

ನೂತನ ಜಿಲ್ಲಾ ಸಮಿತಿಯನ್ನು ಮುಂದಿನ ಮೂರು ವರ್ಷದ ಅವಧಿಗೆ ಆಯ್ಕೆ ಮಾಡಲಾಯಿತು. ಅಧ್ಯಕ್ಷರಾಗಿ ಪಿ.ಶ್ರೀನಿವಾಸ್, ಉಪಾಧ್ಯಕ್ಷರಾಗಿ ನವೀನ್ ಕುಮಾರ್, ನಾಗರಾಜಪ್ಪ, ಕೃಷ್ಣೋಜಿರಾವ್, ಗುರಪ್ಪ, ಕಾರ್ಯದರ್ಶಿಯಾಗಿ ಎಂ.ಭೀಮರಾಜ್, ಸಹ ಕಾರ್ಯದರ್ಶಿಯಾಗಿ ಜಿ.ಶ್ರೀನಿವಾಸ್, ಎಂ. ವಿಜಯಕೃಷ್ಣ, ಆರ್ ಜಯರಾಮನ್, ಸಿ.ಮುನಿಸ್ವಾಮಿ, ಖಜಾಂಜಿಯಾಗಿ ಆಶಾ ಮತ್ತು 14 ಮಂದಿ ಸದಸ್ಯರಾಗಿ ಆಯ್ಕೆಯಾಗಿದ್ದರು.

ಸಮಾರಂಭದಲ್ಲಿ ಸಿಐಟಿಯು ಜಿಲ್ಲಾ ಪ್ರಧಾನ ಕಾರ್ಯದರ್ಶಿ ವಿಜಯಕೃಷ್ಣ, ಮುಖಂಡರಾದ ಆಶಾ, ಪಿ.ಶ್ರೀನಿವಾಸ್, ನವೀನ ಕುಮಾರ್ ಹೊಗರಿ ನಾಗರಾಜಪ್ಪ, ಟೇಕಲ್ ಮಂಜುನಾಥ್, ಜಯರಾಮ್ ಮುಂತಾದವರು ಇದ್ದರು, ಸಭೆಯಲ್ಲಿ ಇದೇ ಜೂನ್ 26-27 ರಂದು ತುಮಕೂರಿನಲ್ಲಿ ನಡೆಯುವ ರಾಜ್ಯ ಸಮ್ಮೇಳನಕ್ಕೆ 12 ಜನ ಪ್ರತಿನಿಧಿಗಳನ್ನು ಆಯ್ಕೆ ಮಾಡಲಾಯಿತು.





ನೆಲ ಅರಸಿ ಅಲೆದವರು

ಬಿಸಿಲಿಗೆ ಮೈಹಿಂಡಿ ಅರವಿಯಂತಾದ ಬಡಜನ 'ಮೈ ಆರಿಸಿಕೊಳ್ಳಲು ನೆರಳು ನೀಡಿ ಎಂದರೆ' ಅವರು ಜಾಲಿಕಂಟಿಯ ಗೂಡು ಸಾಕೆಂದರು. 'ಆಗಲಿ ಕಂಟಿ ಕಡಿದು ಗೂಡಾಗಿ ಗೂಡಿಗೆ ಹಕ್ಕುಕೊಡಿ' ಎಂದರೆ: ಇಲ್ಲಿ ಬೇಡ ಅಲ್ಲಿ' ಎಂದು ಬಾಯಲ್ಲಿ ಬಂಗಲೆಯ ಕನಸು ಕಟ್ಟಿ ಒಕ್ಕಲೆಬ್ಬಿಸಲು ಮುಂದಾದರು.
ಹೀಗೆ 35 ವರ್ಷಗಳಿಂದ ಬಳ್ಳಾರಿ ಜಿಲ್ಲೆಯ ಕುಡಿತಿನಿ ಗ್ರಾಮದ 107 ಬಡ ಕುಟುಂಬಗಳ ನಿವೇಶನದ ಕನಸು ಅಲ್ಲಿಂದಿಲ್ಲಿಗೆ, ಇಲ್ಲಿಂದಲ್ಲಿಗೆ ಊರ ತುಂಬಾ ವಲಸೆಗೊಂಡಿದೆ. ಇವರಲ್ಲದೆ ಇಂತಹ ಗಾಯಗಳ ಹೊತ್ತ ಸಹಸ್ರಾರು ಕುಟುಂಬಗಳು ನೆಲೆಯಿಲ್ಲದ ಸಮಸ್ಯೆಯ ಸುಳಿಗೆ ಸಿಲುಕಿವೆ.

ಪಿ.ಆರ್. ವೆಂಕಟೇಶ್

ಸುಮಾರು 40 ವರ್ಷದ ಹಿಂದೆ ಈ ಗ್ರಾಮದಲ್ಲಿ ವಿಶಾಲವಾದ ಸರ್ಕಾರಿ ಬೀಳು ಬಯಲಿದ್ದವು. ಗ್ರಾಮದ ಜನರಿಗೆ ಕೃಷಿ ಮೂಲ ಉದ್ಯೋಗವಾಗಿತ್ತು. ಅಲ್ಲದೆ ಕೃಷಿಗೆ ಸಂಬಂಧಿಸಿದ ಉಪ ಕಸುಬುಗಳಲ್ಲಿ ನೂರಾರು ಕುಟುಂಬಗಳು ಬದುಕು ಕಂಡುಕೊಂಡಿದ್ದವು. ಅರ್ಧ ಎಕರೆಯಷ್ಟು ಕುರಿಹಟ್ಟಿಗಳು, ಧನಿಕರ ಮನೆಯಲ್ಲಿ 10 ರಿಂದ 16 ಜೋಡೆತ್ತಿನ ಕಮ್ತಗಳಿದ್ದವು.

1995 ರಿಂದ ಈ ಗ್ರಾಮ ಜಾಗತೀಕರಣಕ್ಕೆ ತೆರೆದುಕೊಂಡಿತು. ಇದರ ಬೆನಲ್ಲೇ ಆಗಿನ ಕೇಂದ್ರ ಸರ್ಕಾರ ಜಾರಿಗೊಳಿಸಿದ ಹೊಸ ಭೂಕಂಪ ನೀತಿಯ **(waste land use policy)** ಜೊತೆಗೆ ಈಗಿನ ಸರ್ಕಾರದ ತಿದ್ದುಪಡಿಯ ಭೂಬಳಕೆ ನೀತಿಯ ಪರಿಣಾಮ ಗ್ರಾಮ ಸಂಪೂರ್ಣ ಬದಲಾಯಿತು. ರೈತರ ಅನುಮತಿ ಪಡೆಯದೆ ಕೈಗಾರಿಕಾ ಅಭಿವೃದ್ಧಿ ಮಂಡಳಿ ದುಗ್ಗಾಣಿ ಪರಿಹಾರದ ಆಶೆ ತೋರಿ ಸಹಸ್ರಾರು ಎಕರೆ ಕೃಷಿಯೋಗ್ಯ ಜಮೀನನ್ನು ಕೈಗಾರಿಕಾ ವಲಯ ಎಂದು ಘೋಷಿಸಿತು. ಇದರ ಪರಿಣಾಮ ಈ ಪರಿಸರದಲ್ಲಿ ಒಟ್ಟು 13 ಕಾರ್ಖಾನೆಗಳು ತಲೆ ಎತ್ತಿದವು. ಇವುಗಳಲ್ಲಿ 3 ಬೃಹತ್, ಉಳಿದವು ಮಧ್ಯಮ ಕಾರ್ಖಾನೆಗಳಾಗಿವೆ. ಇದರ ಪರಿಣಾಮವಾಗಿ ಜನಸಂಖ್ಯೆ ಹೆಚ್ಚಳಗೊಂಡು ನಿವೇಶನದ ಸಮಸ್ಯೆ ಬೃಹದಾಕಾರ ತಾಳಿದೆ. ಕೈಗಾರಿಕಾ ಸ್ಥಾಪನೆಯಿಂದಾಗಿ ದೇಶದ ಕೊಲ್ಕತ್ತಾ, ಬಾಂಬೆ, ಮದ್ರಾಸ್, ರಾಜಸ್ತಾನ ಮತ್ತಿತರೆ ರಾಜ್ಯಗಳಿಂದ ಬಂದ ಜನರಿಂದಾಗಿ ಈ ಗ್ರಾಮ ಮಿನಿ ಭಾರತದಂತಾಗಿದೆ. ಆದರೆ ಕೃಷಿ ಸಂಪೂರ್ಣ ಶೂನ್ಯಗೊಂಡಿತು.

ಉಪ ಕಸುಬುಗಳೆಲ್ಲಾ ನೆಲ ಕಚ್ಚಿದವು. ಆಗ ಈ ಗ್ರಾಮದಿಂದ ಕುರಿ ಸಾಕುದಾರರು ನೇಯುತ್ತಿದ್ದ 'ಕಂಬಳಿ ಕಲೆ' ಇತಿಹಾಸದ ಪುಟ ಸೇರಿದೆ. ಈ ಕುಟುಂಬದ ಹಿರಿಯರ ಹೇಳಿಕೆಯ ಪ್ರಕಾರ 17 ನಮೂನೆಯ ಕಂಬಳಿ ನೆಯ್ಗೆಯಿತ್ತು. ಇವುಗಳಲ್ಲಿ ರಾಜಗಂಬಳಿ ಸಂಡೂರು ಮತ್ತು ಮೈಸೂರು ಅರಮನೆಗಳಿಗೆ ಸರಬರಾಜುಗುತ್ತಿತ್ತು ಈಗ ಮೇವಿಲ್ಲದೆ, ಕುರಿಹಟ್ಟಿಗಳಿಲ್ಲದೆ ಅವೆಲ್ಲ ಕನಸು ಎನ್ನುತ್ತಾರೆ. ಇದರೊಂದಿಗೆ ಗ್ರಾಮದಲ್ಲಿದ್ದ ಬಡಿಗೇರ, ಕಮ್ಮಾರ ಕುಟುಂಬಗಳು ಮಾಯವಾಗಿವೆ. ಕಾರ್ಖಾನೆಗಳು ತಲೆ ಎತ್ತಿದ ನಂತರ ಮನುಷ್ಯನಿಗಿಂತ ನೆಲಕ್ಕೆ ಹೆಚ್ಚು ಬೆಲೆ ಬಂತು. ಕುರಿಹಟ್ಟಿಗಳು, ಹಸು, ದನಕ್ಕಿದ್ದ ದಂದಟ್ಟಿಗಳ ಸ್ಥಳದಲ್ಲಿ ಬಾಡಿಗೆ ಗಳಿಸುವ ಮನೆಗಳು ತಲೆ ಎತ್ತಿವೆ. ಕಮ್ಮಾರರ ಕುಲುಮೆಗಳ ಸ್ಥಳದಲ್ಲಿ ಬ್ರಾಂಡಿ ಷಾಪ್, ಹೋಟೆಲ್ ಗಳು ಸ್ಥಾಪನೆಗೊಂಡಿವೆ. ಇದರೊಂದಿಗೆ ರಿಯಲ್ ಎಸ್ಟೇಟ್ ದಂಧೆ ಎಲ್ಲಿಲ್ಲದೆ ಬೆಳೆದಿದೆ. ಅಳಿದುಳಿದ ರೈತರ ಹಾಗೂ ಸರಕಾರದ 5000 ಹೆಕ್ಟೇರ್ (12,500 ಎಕರೆ) ಜಮೀನು ಮುಂಬರುವ ಬೃಹತ್ ಕಾರ್ಖಾನೆಗಳಿಗೆ, ಉಳಿದದ್ದು ರಿಯಲ್ ಎಸ್ಟೇಟ್ ದಂಧೆಯ ಪಾಲಾಗಿದೆ. ಹೀಗಾಗಿ ಇಲ್ಲಿ ಮನುಷ್ಯನಿಗಿಂತ ನೆಲಕ್ಕೇ ಹೆಚ್ಚು ಬೆಲೆ!

ಬಡವರ ನಿವೇಶನಕ್ಕೆ ಸ್ಥಳವೇ ಇಲ್ಲವೆ?

ಈ ಪ್ರಶ್ನೆಗೆ ಉತ್ತರವಾಗಿ ಗ್ರಾಮದ ಗೋಸಂಬೀಳಿನ ಸರ್ವೇ ನಂ. 708 ರಲ್ಲಿ ಸರ್ಕಾರದ 38.77 ಎಕರೆ ಜಮೀನು ನಾನಿದ್ದೇನೆ ಎಂದಿದೆ. ಈ ಬೀಳಿನಲ್ಲೇ ನಿವೇಶನ ರಹಿತ ಬಡವರು ಗುಡಿಸಲು ನಿರ್ಮಿಸಿಕೊಂಡು ಕಳೆದ 22 ವರ್ಷದಿಂದ ವಾಸವಾಗಿದ್ದಾರೆ. ಹಕ್ಕು ಪತ್ರ ಕೇಳಿದರೆ ಜಿಲ್ಲಾಡಳಿತ ಈ ಜಮೀನನ್ನು 1998 ಮತ್ತು 2012 ರಲ್ಲಿ ನಾನಾ ಇಲಾಖೆಗೆ ಮೀಸಲಾಗಿದೆ ಎಂಬ ಆದೇಶ ಹೊರಡಿಸಿದೆ. ನಮ್ಮ ದಾಖಲೆ ಪ್ರಕಾರ 6.39 ಎಕರೆ ಸರಕಾರಿ ಅಸ್ಪತ್ರೆಗೆ, 4.00 ಎ. ಕೆಪಿಟಿಸಿಎಲ್ ಕಾರ್ಖಾನೆಗೆ, 3.74 ಎ. ಪಾರ್ಕಿಗೆ, 3.92 ಎ. ಕಾಲೇಜಿಗೆ, 1.86 ಎ. ಆಟದ ಮೈದಾನಕ್ಕೆ. 2.95 ಎ. ಪೊಲೀಸ್ ವಸತಿಗೃಹಕ್ಕೆ, 3.03 ಎ. ಬಸ್ ನಿಲ್ದಾಣಕ್ಕೆ, 2.18 ಎ. ಸರಕಾರಿ ವಸತಿಗೃಹಕ್ಕೆ, 4.18 ಎ. ರಸ್ತೆಗೆ, 3.03 ಎ. ಕಾರ್ಮಿಕ ಇಲಾಖೆಗೆ ಎನ್ನಲಾಗಿದೆ. ಇದೆಲ್ಲಾ ಒಟ್ಟುಗೂಡಿಸಿದರೆ ಇನ್ನೂ 2.49 ಎ ಜಮೀನು ಉಳಿಯುತ್ತದೆ. ಆದರೆ ಬಡವರ ನಿವೇಶನಕ್ಕೆ ಕೊಡುವ ಇಚ್ಛಾಶಕ್ತಿ ಆಡಳಿತದಲ್ಲಿಲ್ಲವಾಗಿದೆ.

ಜಿಲ್ಲಾ ಆಡಳಿತದ ಯಡವಟ್ಟುಗಳು



ಕಳೆದ 22 ವರ್ಷದಿಂದ ಬಡವರು ಗುಡಿಸಲು ನಿರ್ಮಿಸಿಕೊಂಡು ಹಕ್ಕುಪತ್ರ ಕೇಳುತ್ತಾ ನಿರಂತರ ವಾಸವಾಗಿದ್ದರೂ,

ಜಿಲ್ಲಾಧಿಕಾರಿ ಈ ಸ್ಥಳವನ್ನು ನಾನಾ ಇಲಾಖೆಗೆ ನೀಡುವಾಗ ನಿವಾಸಿಗಳಿಗೆ ಯಾವುದೇ ಸೂಚನೆ ನೀಡಿಲ್ಲ. ಕನಿಷ್ಟ ಇವರನ್ನು ಚರ್ಚೆಗೆ ಕರೆದು ಪರ್ಯಾಯದ ಭರವಸೆಯನ್ನು ನೀಡದೆ ಅಮಾಯಕ ನಿವಾಸಿಗಳನ್ನು ಕತ್ತಲಲ್ಲಿ ಇಟ್ಟದ್ದು ಅಮಾನವೀಯ ನಡೆಯಾಗಿದೆ.

ಅಲ್ಲದೆ ಆರೋಗ್ಯ ಇಲಾಖೆ ಗೆಂದು ಮಿಸಲಿದ್ದ 6.39 ಎ. ಜಮೀನಿನಲ್ಲಿ ಆಸ್ಪತ್ರೆ ನಿರ್ಮಿಸುವಾಗ ಗ್ರಾಮಸ್ಥರು ಈ ಸ್ಥಳ ಗ್ರಾಮಕ್ಕೆ ದೂರ, ಆಸ್ಪತ್ರೆ ಊರೊಳಗೆ ನಿರ್ಮಿಸಿ ಎಂದು ತಕರಾರು ಎತ್ತಿದ್ದರು. ಜನರ ಆಸೆಯ ವಿರುದ್ಧ ಜಿಲ್ಲಾಡಳಿತ ಆಸ್ಪತ್ರೆ ನಿರ್ಮಿಸಿತು. ಆದರೆ ಉದ್ಘಾಟನೆ ಭಾಗ್ಯವಿಲ್ಲದೆ ಈಗದು ಭೂತ ಬಂಗಲೆಯಾಗಿದೆ. ಆಸ್ಪತ್ರೆಗೆ ಅಳವಡಿಸಿದ ಕಿಟಕಿ, ಬಾಗಿಲು, ವಿದ್ಯುತ್ ಪರಿಕರ, ಮಂಚ ಮತ್ತಿತರೆ ಸಾಮಗ್ರಿಗಳು ಮಾಯವಾಗಿವೆ. ಇದರಂತೆ ಬಸ್ ನಿಲ್ದಾಣಕ್ಕೆಂದು ಮಿಸಲಾಗಿದ್ದ 3.03 ಎ. ಜಮೀನು ಸಹ ನಿರುಪಯುಕ್ತವಾಗಿದೆ.

ಈ ಸ್ಥಳದಲ್ಲಿ ನಿಲ್ದಾಣ ನಿರ್ಮಾಣಕ್ಕೂ ಊರಿಗೆ ಹಿರಿಯರು ತಕರಾರಿತ್ತು. ಕಾರಣ ಊರಲ್ಲಿ ನಿಲ್ದಾಣ ನಿರ್ಮಾಣಗೊಂಡಿತು.

ನಿಗದಿತ ಉದ್ದೇಶಕ್ಕಾಗಿ ಮೀಸಲಾದ ಜಮೀನು ಬಳಕೆಯಾಗದಿದ್ದರೆ ಅಂತಹ ಜಮೀನನ್ನು ಸರಕಾರ ವಶಪಡಿಸಿಕೊಳ್ಳಬೇಕು ಅಥವಾ ಹಿಂಪಡೆಯಬೇಕು ಎಂಬ ಕಾನೂನಿದ್ದರೂ ಈ ಬಗ್ಗೆ ಜಿಲ್ಲಾಡಳಿತ ಯಾವುದೇ ಕ್ರಮ ಕೈಗೊಂಡಿಲ್ಲ.

ಅಲ್ಲದೆ, ರಾಜ್ಯ ಸರಕಾರ ಅಕ್ರಮ–ಸಕ್ರಮ ಯೋಜನೆ ಜಾರಿಗೆ ತಂದ ಸಂದರ್ಭದಲ್ಲಿ ಇಲ್ಲಿನ ಗುಡಿಸಲು ನಿವಾಸಿಗಳು

ನಿಗದಿತ ಅರ್ಜಿಗಳನ್ನು ನೀಡಿದ್ದರೂ ಜಿಲ್ಲಾಡಳಿತ ಅರ್ಜಿಗಳತ್ತ ಕಡೆಗಣ್ಣೂ ಹಾಯಿಸಲಿಲ್ಲ.

ವಲಸೆಗೊಂಡ ನಿವೇಶನ ಕನಸು

ನಿವೇಶನ ರಹಿತರು ಈ ಮೊದಲು ಗ್ರಾಮದ ಚೌಕಿ, ಪಾಳುಬಿದ್ದ ಗುಡಿಗುಂಡಾರ, ಅವರಿವರು ಕರುಣೆಯಲ್ಲಿ ದೊರಕಿದ ಸ್ಥಳಗಳಲ್ಲಿ ವಾಸವಾಗಿದ್ದರು. ಗ್ರಾಮಾಡಳಿತಕ್ಕೆ ನಿವೇಶನ ನೀಡುವಂತೆ ಅವಲೊತ್ತುಕೊಂಡಾಗ ಆಗಿನ ಅಧ್ಯಕ್ಷ ಬಡವರ ನಿವೇಶನದ ಕನಸು ಅಧಿಕಾರಕ್ಕೇರುವ ಮೆಟ್ಟಿಲಾದೀತೆಂದು ಭಾವಿಸಿ

ಗ್ರಾಮದ ಹೊರವಲಯದಲ್ಲಿ ಸುಮಾರು 5 ಕಿಮೀ. ದೂರದ, ಯಾವುದೇ ನಾಗರೀಕರು ಸೌಲಭ್ಯವಿಲ್ಲದ ಕರೆಮಟ್ಟಿಯ ಗುಡ್ಡದಲ್ಲಿ ನಿವೇಶನ ನೀಡಿದ. ಅಲ್ಲಿಗೆ ಯಾರೂ ಹೋಗಲಿಲ್ಲ. ಪರರ ಕರುಣೆ ಎಷ್ಟುದಿನ ಇದ್ದೀತು. ಕೆಲದಿನಗಳ ನಂತರ ಕರುಣೆಯ ಸ್ಥಳದಿಂದ ಒಕ್ಕಲೆಬ್ಬಿಸಲಾಯಿತು. ಅಲ್ಲಿಂದ ಆಗ ಖಾಲಿಯಿದ್ದ ಈಗಿರುವ ಬಸ್ ನಿಲ್ದಾಣದ ಸ್ಥಳದಲ್ಲಿ ಗುಡಿಸಲು ನಿರ್ಮಿಸಿ ವಾಸಿಸತೊಡಗಿದರು. ಹೊಸ ಬಸ್ ನಿಲ್ದಾಣ ಕಾಮಗಾರಿ ಪ್ರಾರಂಭವಾದಾಗ ಗ್ರಾಮಾಡಳಿತ ಪೊಲೀಸರ ಬಲ ಪಡೆದು ಈ ಸ್ಥಳದಿಂದ ನಿವಾಸಿಗಳನ್ನು ಒಕ್ಕಲೆಬ್ಬಿಸಲಾಯಿತು. ಇಲ್ಲಿಂದ ಗೋಸಂಬೀಳಿನ ಸರಕಾರಿ ಸ್ಥಳದಲ್ಲಿ ಪುನ:ಗುಡಿಸಲು ನಿರ್ಮಿಸಿಕೊಂಡು ಈ ಬಡಜೀವಗಳು ಬದುಕಿದರೆ, ಈ ಸ್ಥಳದಲ್ಲಿ ಪೋಲೀಸ್ ವಸತಿಗೃಹ ನಿರ್ಮಾಣದ ಪ್ರಯುಕ್ತ ಪುನ: ಒಕ್ಕಲೆಬ್ಬಿಸಲಾಯಿತು. ಈಗ ಇದೇ ಬೀಳಿನ ಮತ್ತೊಂದು ಪರದೇಶದಲ್ಲಿ ಬಡ ಜನ ಗೂಡಾಗಿದ್ದಾರೆ. ಇದಕ್ಕೆ ಹಕ್ಕು ಪತ್ರ ಕೊಡಿ ಎಂದರೆ ಈ ಸ್ಥಳ ಸರಕಾದ ನಾನಾ ಇಲಾಖೆಗಳಿಗೆ ಮೀಸಲು ಎಂದು ಜಿಲ್ಲಾಡಳಿತ ಕೈತೊಳೆದುಕೊಂಡಿದೆ.

ಹೀಗೆ ಬಡವರ ನಿವೇಶನದ ಕನಸು ಊರಲ್ಲೆ ಅಲ್ಲಿಂದಿಲ್ಲಿಗೆ ಇಲ್ಲಿಂದಲ್ಲಿಗೆ ವಲಸೆಗೊಂಡಿದೆ.

ಇಚ್ಛಾಶಕ್ತಿ ಇಲ್ಲದ ಜನ ಪ್ರತಿನಿಧಿಗಳು

ಊರು ಅಭಿವೃದ್ಧಿಗೊಂಡಿದೆ. ಗ್ರಾಮ ಪಂಚಾಯಿತಿ ಪುರಸಭೆಯಾಗಿ ಮೇಲ್ದರ್ಜೆಗೇರಿದೆ. ಆದರೆ ಬಡವರ

ಪುಟ 10 ಕ್ಕೆ

ಬೆಳಕ ಬಿತ್ತೋಣ

ಆಕಾಶ ಹೆಪ್ಪಾಗಿ ಛತ್ತು ನಡುಗಿತು
ಗುಡಿಸಲು ತುಂಬೆಲ್ಲ ಮಳೆ ಹನಿಯ ಕುಣಿತ.
ತಡಿಕೆ ಹಾಡಿತು
ನನ್ನ ಬದುಕಂತೆ.

"ನನಗೊಂದು ಸೂರು ಕೊಡಿ"
ನನ್ನೊಡಲ ಅರ್ಜಿಯ ಕೂಗು
ಅವರು ನಗುತ್ತಲೆ ಕಟ್ಟಿದರು
ಇಲ್ಲೆ ನನ್ನ ಗುಡಿಸಲೆದುರೆ
ಗುಡಿಯ ಮಾಡ.

ಒಡಲ ಅರ್ಜಿ ಮತ್ತೆ ಕೂಗಿತು
ಅದೇ ಕೂಗನ್ನೆ.
ಮಾಡ ನೆತ್ತಿಯ ಮೇಲೆ
ಮುಗಿಲೆತ್ತರ ಗೋಪುರ.
ಛತ್ತು ಅನಾಥ
ನನ್ನ ಬದುಕಂತೆ.

ಸತ್ತ ಛತ್ತಿನ ಕನಸು
ಹಳಸುತ್ತಿದ್ದಂತೆ
ಬೆಳಕ ತುರುಸು.
"ಬೆಳಕ ಭಾಗ್ಯವ ನೀಡಿ".

ಅವರು ನಕ್ಕರು
ಇಲ್ಲೆ ಗುಡಿಸಲು ಪಕ್ಕದಲ್ಲೇ
ಕಂಬ ನೆಟ್ಟು.
ಛತ್ತಯ ನೆತ್ತಿಯಮೇಲೆ ತಂತಿ ನೇತಾಡಿಸಿ
ನನ್ನ ಕನಸಿನ ಬೆಳಕು
ತಂತಿಗುಂಟಲೆ ಹರಿದು
ಗುಡಿ, ಚರ್ಚು, ಮಸೀದಿಗೆ
ಬೆಳಕ ಹಬ್ಬ.
ಗುಡಿಸಲು ಗೂಡಲ್ಲಿ
ಅಣಕು ದಿಬ್ಬ.

ಹುಚ್ಚೆದ್ದ ಗಾಳಿಗೂ ನಿಕೃಷ್ಟ ನಾನು
ತಂತಿ ಕಿಡಿ ಉಗುಳಿ ಗಹಗಹಿಸಿತು.
ಬೂದಿ ಮುಚ್ಚಿದ ಕೆಂಡ
ನನ್ನ ಗೂಡು.

ನಾನೀಗ
ಗೂಡ ಬೆಂಕಿಯ ಪಂಜು.
ಸುಡಬೇಕಿದೆ ಪೊಳ್ಳು ಭರವಸೆಯ
ನಂಜ ಗೋಡೆಗಳ.

ಬನ್ನಿ ಗೆಳೆಯರೇ ಬನ್ನಿ,
ಸೂರಿಲ್ಲದೆ ಬಯಲಿಗಾತವರೆ
ಪಂಜಿನ ಬಿಸಿಯಲ್ಲಿ
ಬೆಳಕ ಬಿತ್ತೋಣ.

–ಪಿ.ಆರ್. ವೆಂಕಟೇಶ್



ಮಾಳಿಗೆಗಳ ಎತ್ತಿದೋರು, ಬಂಗಲೆಗಳ ಕಟ್ಟೀದೋರ ಬದುಕು-ಬವಣೆ

ಲಿಂಗರಾಜು

ಕರ್ನಾಟಕ ರಾಜ್ಯ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಫೆಡರೇಷನ್ (ರಿ.) ಬೆಂಗಳೂರು ದಕ್ಷಿಣ ಜಿಲ್ಲಾ ಸಮಿತಿಯ 4ನೇ ಜಿಲ್ಲಾ ಸಮ್ಮೇಳನವು ಇತ್ತೀಚೆಗೆ ಆನೇಕಲ್‌ನಲ್ಲಿ ನಡೆದಿದೆ.

ಕೇಂದ್ರ – ರಾಜ್ಯ ಬಿ.ಜೆ.ಪಿ ಸರ್ಕಾರಗಳು ಕೋಮುವಾದ & ನವ ಉದಾರವಾದಿ ಆರ್ಥಿಕ ನೀತಿಗಳು ಸಾಮಾಜಿಕ ಮತ್ತು ಆರ್ಥಿಕ ಅಸಮಾನತೆಯನ್ನು ತೀವ್ರಗೊಳಿಸುತ್ತಿದ್ದ ಸಂದರ್ಭದಲ್ಲಿ ಕೋವಿಡ್ ಮತ್ತು ಲಾಕ್‌ಡೌನ್ ಪರಿಣಾಮಗಳಿಂದ ಕಟ್ಟಡ ಕಾರ್ಮಿಕರು ಇನ್ನೂ ಸಹಜ ಸ್ಥಿತಿಗೆ ಮರಳಿಲ್ಲ. ಈ ಕುರಿತಂತೆ ಬೆಂಗಳೂರು ನಗರದಲ್ಲಿ ನಿರ್ಮಾಣ ವಲಯದ ಸ್ಥಿತಿಗತಿ ಹಾಗು ಕಾರ್ಮಿಕರ ಬದುಕು–ಬವಣೆಯ ಕುರಿತಾದ ಒಂದು ಅವಲೋಕನ ಇಲ್ಲಿದೆ.

ಬೆಂಗಳೂರು ನಗರದಲ್ಲಿ ನಿರ್ಮಾಣ ವಲಯ

ನಿರ್ಮಾಣ ವಲಯ ಎಂದರೆ ವಾಣಿಜ್ಯ ಕಟ್ಟಡಗಳು, ವಸತಿ ಕಟ್ಟಡಗಳು, ಕೈಗಾರಿಕಾ ಕಟ್ಟಡಗಳು, ಮೂಲಸೌಕರ್ಯ ಕಟ್ಟಡ ನಿರ್ಮಾಣ, ಸಾರಿಗೆ–ಸಂಪರ್ಕ ನಿರ್ಮಾಣ, ಶಕ್ತಿ ಉತ್ಪಾದನೆ ಮತ್ತು ಉಪಯುಕ್ತ ವಲಯದ ನಿರ್ಮಾಣ ಸೇರಿ ನಿರ್ಮಾಣ ವಲಯವಾಗಿದೆ. ಜೊತೆಗೆ ನಿರ್ವಹಣೆ ಹಾಗು ಪುನರ್ ನವೀಕರಣವೂ ಸೇರಿದೆ. ಆರ್ಥಿಕತೆಯ ಬೆಳವಣಿಗೆಗೆ ಮೂಲಸೌಕರ್ಯ ಅಭಿವೃದ್ಧಿ ಎಂಬುದು ಚಾಲನಾ ಶಕ್ತಿಯಾಗಿದೆ. ಕೃಷಿ ಮತ್ತು ಕೈಗಾರಿಕೆಯನ್ನು ಹೊರತುಪಡಿಸಿದರೆ ನಿರ್ಮಾಣ ವಲಯವು ಅತಿ ಹೆಚ್ಚು ಜಿಡಿಪಿ ಉತ್ಪಾದನೆಯ ಪ್ರಮುಖ ವಲಯವಾಗಿದೆ. ಜೊತೆಗೆ ಉದ್ಯೋಗ ನೀಡಿಕೆಯಲ್ಲೂ ಮೂರನೇ ಸ್ಥಾನದಲ್ಲಿದೆ. ಜಗತ್ತಿನ ಬಂಡವಾಳಿಗರ ಕೇಂದ್ರಗಳಲ್ಲೊಂದಾದ ಬೆಂಗಳೂರಿಗೆ ಬಂಡವಾಳ ಹರಿದು ಬರುತ್ತಿದ್ದು, ಇದನ್ನು ಆಧರಿಸಿ ಮೂಲಸೌಕರ್ಯ ಅಭಿವೃದ್ಧಿಯ ಮೇಲೂ ಹೂಡಿಕೆ ಹೆಚ್ಚುತ್ತಿದೆ. ಹೀಗಾಗಿ ಕಟ್ಟಡ ನಿರ್ಮಾಣ ಕಾಮಗಾರಿಗಳು ಹೆಚ್ಚುತ್ತಲೇ ಇವೆ. ಆದಾಗ್ಯೂ ಕೊರೊನಾ ನಂತರದಲ್ಲಿ 70% ಮಾತ್ರವೇ ನಿರ್ಮಾಣ ವಲಯ ಚೇತರಿಕೆ ಕಂಡಿದ್ದೂ, ಪೂರ್ಣವಾಗಿ ಚೇತರಿಸಿಕೊಂಡಿಲ್ಲ ಎನ್ನಲಾಗುತ್ತಿದೆ.

ಬೆಂಗಳೂರು ಒಂದರಲ್ಲೇ 10500 ಸಾವಿರಕ್ಕು ಹೆಚ್ಚು ಕಟ್ಟಡದ ನಿರ್ಮಾಣದ ಕಾಂಟ್ರಾಕ್ಟ್ ಸಂಸ್ಥೆಗಳಿವೆ. ರೇರಾ ಪ್ರಕಾರ ಪ್ರಮುಖ ಕಂಪನಿಗಳ 558 ಅಧಿಕೃತ ಪ್ರಾಜೆಕ್ಟ್‌ಗಳು ಸದ್ಯ ಚಾಲ್ತಿಯಲ್ಲಿವೆ. 1051 ನೋಂದಣಿ ರಹಿತ ಪ್ರಾಜೆಕ್ಟ್‌ಗಳು ನಡೆಯುತ್ತಿವೆ. ಸಾರ್ವಜನಿಕರು ಇಂತಹ ಪ್ರಾಜೆಕ್ಟ್‌ಗಳಲ್ಲಿ ಆಸ್ತಿ ಖರೀದಿಸಿ, ಮೋಸ ಹೋದಲ್ಲಿ ರೇರಾ ಮಧ್ಯಪ್ರವೇಶ ಸಾಧ್ಯವಿಲ್ಲ ಎಂದು ಎಚ್ಚರಿಕೆ ನೀಡಿದೆ. ಅಲಯನ್ಸ್ ಗ್ರೂಪ್ ಪ್ಲಾನ್ಸ್ ಒಂದೇ ಸಂಸ್ಥೆ ಬೆಂಗಳೂರು ಮತ್ತು ಹೈದ್ರಾಬಾದ್‌ನಲ್ಲಿ 8600 ಕೋಟಿ ರೂಗಳ ಪ್ರಾಜೆಕ್ಟ್‌ಗೆ ಚಾಲನೆ ನೀಡಿದ್ದಾರೆ. ಇದಲ್ಲದೇ ವಾಸಕ್ಕಾಗಿ ಬಿಡಿ ಮನೆಗಳ ನಿರ್ಮಾಣವೂ ಪ್ರಮುಖ ವಲಯವಾಗಿದೆ. ಆದರೆ ನಿರ್ಮಾಣ ವಲಯಕ್ಕೆ ಬಹುದೊಡ್ಡ ತೊಡೆಕೆಂದರೆ ಬಿಬಿಎಂಪಿಯಿಂದ ನಕ್ಷೆ ಮಂಜೂರಾತಿ, ಸಿ.ಸಿ. ನೀಡುವಲ್ಲಿ ನಿಧಾನಗತಿ, ಆಸ್ತಿ ನೋಂದಣಿಯಲ್ಲಿನ ತಾಂತ್ರಿಕ ಸಮಸ್ಯೆಗಳು ದಾಖಲಾತಿಗಳ ಹೊಂದಾಣಿಕೆ, ಬ್ಯಾಂಕುಗಳು ಸಾಲ ನೀಡುವಲ್ಲಿನ ಸಮಸ್ಯೆಗಳು ಮತ್ತು ವಿಳಂಬ ಇತ್ಯಾದಿ ಕಾರಣಗಳಿಂದಾಗಿ ನಿರ್ಮಾಣ ವಲಯ ಕುಂಟಿತವಾಗುತ್ತಿದೆ ಎಂಬುದನ್ನು ಬಿಲ್ಡರ್ಸ್ ಅಸೋಷಿಯೇಷನ್ ಆಫ್ ಇಂಡಿಯಾ ಹೇಳಿದೆ.

ನಿರ್ಮಾಣ ವಲಯದಲ್ಲಿ ತಂತ್ರಜ್ಞಾನದ ಬಳಕೆ

ನಿರ್ಮಾಣ ವಲಯದಲ್ಲಿ ಖರ್ಚಿನ ಪ್ರಮಾಣ ತಗ್ಗಿಸುವುದು, ಸಮಯದ ಉಳಿತಾಯ, ಸುಧಾರಿತ ಕೌಶಲ್ಯತೆ ಹಾಗು ಮಾರುಕಟ್ಟೆ ಬೇಡಿಕೆಗೆ ತಕ್ಕಂತೆ ಪೂರೈಕೆಗೆ ಅನುಕೂಲವಾಗುತ್ತದೆ ಎಂಬ ಹಲವು ಕಾರಣದಿಂದಾಗಿ ಆಧುನಿಕ ತಂತ್ರಜ್ಞಾನ ಬಳಕೆ ಮಾಡುವುದು ನಗರದಲ್ಲಿ ಹೆಚ್ಚುತ್ತಿದೆ. ಕೃತಕ ಬುದ್ಧಿಮತ್ತೆ ಹಾಗು ಮಷಿನ್ ಡ್ರಾಯಿಂಗ್ ಹಾಗು ರೋಬೋಟ್ ಬಳಕೆ ಹೆಚ್ಚುತ್ತಿದೆ. ಅಂದರೆ ಮಾನವ ರಹಿತ ನಿರ್ಮಾಣದತ್ತ ಬೆಂಗಳೂರು ಮುಖ ಮಾಡುತ್ತಿದೆ. ತಂತ್ರಜ್ಞಾನ ಮಾನವ ಸಮಾಜ ಅಭಿವೃದ್ಧಿಗೆ ಅತ್ಯಗತ್ಯ. ಆದರೆ ತಂತ್ರಜ್ಞಾನವು ಹೂಡಿಕೆದಾರರ ಲಾಭ ಹೆಚ್ಚಿಸಲು ಬಳಕೆಯಾಗುತ್ತಿದೆ. ಇದರಿಂದ ಉದ್ಯೋಗದ ಅವಕಾಶಗಳು ಕ್ಷೀಣಿಸಲಿವೆ.

ನಿರ್ಮಾಣ ವಲಯದ ಮೇಲೆ ಬೆಲೆ ಏರಿಕೆಯ ಕರಿನೆರಳು

ಜಿಎಸ್ಟಿ ಹೇರಿಕೆ ಹಾಗು ಅನಿಯಂತ್ರಿತ ಹಣದುಬ್ಬರದಿಂದಾಗಿ ಬೆಲೆ ಏರಿಕೆ ಅಬ್ಬರ ನಡೆದಿದೆ. ನಿರ್ಮಾಣವಲಯ ಸಾಮಗ್ರಿಗಳ ಬೆಲೆಗಳು ಗಗನ ನೋಡುವಂತಾಗಿದೆ. ಒಟ್ಟಾರೆ ನಿರ್ಮಾಣ ಸಾಮಗ್ರಿಗಳ ಬೆಲೆಗಳು ಸುಮಾರು 35 ಶೇಕಡ ಏರಿಕೆ ಆಗಿವೆ ಎಂದು ವರದಿಗಳು ಹೇಳುತ್ತಿವೆ. ಸಿಮೆಂಟ್ – 350 ನಿಂದ 460 ರೂಪಾಯಿ, ಸ್ಟೀಲ್ – 65 ಸಾವಿರದಿಂದ 95 ಸಾವಿರ ರೂಪಾಯಿ, ಎಂ ಸ್ಯಾಂಡ್ – 13 ಸಾವಿರದಿಂದ 17 ಸಾವಿರ ರೂಪಾಯಿ, ಪ್ಲೇವುಡ್ ಶೇ 20 ರಷ್ಟು ಏರಿಕೆ ಸೇರಿದಂತೆ ಎಲೆಕ್ಟ್ರಿಕಲ್, ಪ್ಲಂಬಿಂಗ್, ಇಂಟಿರೀಯರ್ ಎಲ್ಲ ಸಾಮಗ್ರಿಗಳ ಬೆಲೆಗಳು ದುಬಾರಿಯಾಗಿವೆ. ಈ ಬೆಲೆ ಏರಿಕೆಯ ಕಾರಣಕ್ಕಾಗಿ ನಿರ್ಮಾಣ ಹಂತದ ಕಾಮಗಾರಿಗಳು, ಪ್ರಾಜೆಕ್ಟ್‌ಗಳು ಅರ್ಧದಲ್ಲೇ ನಿಲ್ಲುತ್ತಿವೆ. ಹೊಸ ಪ್ರಾಜೆಕ್ಟ್‌ಗಳನ್ನು ಮುಂದೂಡಲಾಗುತ್ತಿದೆ. ಪರಿಣಾಮವಾಗಿ ಕಾರ್ಮಿಕರ ಕೂಲಿ ವಂಚನೆ ಹಾಗು ನಿರುದ್ಯೋಗ ತೀವ್ರವಾಗುತ್ತಿದೆ. ಬೆಲೆ ಏರಿಕೆಯ ವಿರುದ್ಧ ಬಿಲ್ಡರ್ಸ್ ಅಸೋಷಿಯೇಷನ್ ಆಫ್ ಇಂಡಿಯಾದಿಂದ ಬೆಂಗಳೂರು ನಗರದಲ್ಲಿ ಪ್ರತಿಭಟನೆ ನಡೆದಿರುವುದು ಗಮನಾರ್ಹ ಬೆಳವಣಿಗೆಯಾಗಿದೆ.

ಕಟ್ಟಡ ನಿರ್ಮಾಣ ವಲಯದಲ್ಲಿ ಕಾರ್ಮಿಕರು

ಬೆಂಗಳೂರನ್ನು ಒಳಗೊಂಡು ರಾಜ್ಯದ ವಿವಿಧ ಪ್ರದೇಶಗಳಿಗೆ ಬೇರೆ ರಾಜ್ಯಗಳಿಂದ ಪ್ರತೀವರ್ಷ 15 ರಿಂದ 20 ಲಕ್ಷಕ್ಕೂ ಹೆಚ್ಚು ಕಟ್ಟಡ ಕಾರ್ಮಿಕರು ವಲಸಿಗರಾಗಿ ಬರುತ್ತಿದ್ದಾರೆ. ನಮ್ಮ ರಾಜ್ಯದ ವಿವಿಧ ಜಿಲ್ಲೆಗಳ ಅಂತರ್ ಜಿಲ್ಲಾ ವಲಸಿಗರು ಸೇರಿ ಒಟ್ಟು ಸಂಖ್ಯೆ ಮತ್ತಷ್ಟು ಹೆಚ್ಚಿಗೆ ಆಗಬಹುದು. ಬರುವವರು ಕಾಂಟ್ರಾಕ್ಟರ್, ಸಬ್ ಕಾಂಟ್ರಾಕ್ಟರ್‌ಗಳ ಮೂಲಕ ಮೇಸ್ತ್ರಿಗಳ ಮೂಲಕ, ಸ್ವಯಂ

ಪುಟ 10 ಕ್ಕೆ

ಚಳ್ಳಕೆರೆ: ಹಮಾಲಿ ಕಾರ್ಮಿಕರ 5ನೇ ರಾಜ್ಯ ಸಮ್ಮೇಳನ

ಹಮಾಲರನ್ನು ಬೀದಿಗೆ ತರಲಿದೆ ಮುಕ್ತ ಮಾರುಕಟ್ಟೆ



ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಕೃಷಿ ಮಾರುಕಟ್ಟೆ ಕಾಯ್ದೆಗೆ ತಿದ್ದುಪಡಿ ತರುವ ಮೂಲಕ ರೈತಾಪಿ ವರ್ಗ ಮಾರುಕಟ್ಟೆಗೆ ಬರದಂತೆ ಮಾಡುತ್ತಿದ್ದಾರೆ ಇದರಿಂದ ರೈತರನ್ನೇ ನಂಬಿಕೊಂಡ ಹಮಾಲಿ ಕಾರ್ಮಿಕರು, ದಲ್ಲಾಳಿಗಳು, ಅಧಿಕಾರಿಗಳು ಹಾಗೂ ನೌಕರರು ಕೆಲಸ ಕಳೆದುಕೊಳ್ಳುವ ಅಪಾಯ ಬಂದಿದೆ. ಈ ಮುಕ್ತ ಮಾರುಕಟ್ಟೆ ನೀತಿ ಶ್ರಮಜೀವಿಗಳಾದ ಹಮಾಲಿ ಕಾರ್ಮಿಕರನ್ನು ಬೀದಿಗೆ ತರಲಿದೆ. ಇದರ ವಿರುದ್ಧ ಒಂದು ಸಂಘಟಿತ ಚಳವಳಿ ನಡೆಸಲು ಸಾಹಿತಿಗಳು ಹಾಗೂ ಹಿರಿಯ ಪತ್ರಕರ್ತರಾದ ಡಾ. ರಂಜಾನ್ ದರ್ಗಾ ಕರೆ ನೀಡಿದರು.

ಚಳ್ಳಕೆರೆಯ ಎಪಿಎಂಸಿ ಆವರಣದಲ್ಲಿ ನಡೆದ ಕರ್ನಾಟಕ ರಾಜ್ಯ ಹಮಾಲಿ ಕಾರ್ಮಿಕರ ಫೆಡರೇಶನ್ 5ನೇ ರಾಜ್ಯ ಸಮ್ಮೇಳನದ ಬಹಿರಂಗ ಅಧಿವೇಶನದಲ್ಲಿ ಶಾಂತಿಯ ಸಂಕೇತವಾದ ಪಾರಿವಾಳಗಳನ್ನು ಸ್ವಚ್ಚಂದವಾಗಿ ಆಕಾಶಕ್ಕೆ ಹಾರಿಬಿಡುವ ಮೂಲಕ ಉದ್ಘಾಟಿಸಿ ಮಾತನಾಡಿದ ಅವರು ಒಂದು ಬೀಡಿ ಸೇದುವುದು, ಕುಡಿಯುವುದು ಯಾವುದೇ ಅಭ್ಯಾಸವಿರದ ನನ್ನ ತಂದೆ ಯಾವ ಸೂಫಿ ಸಂತನಿಗಿಂತಲೂ ಕಡಿಮೆ ಇರಲಿಲ್ಲ ಪ್ರತಿನಿತ್ಯ ಕಷ್ಟಪಟ್ಟು ಹಮಾಲಿ ಕಾರ್ಮಿಕನಾಗಿ ದುಡಿಯುತ್ತಲೇ ಅತ್ಯಂತ ಪ್ರಾಮಾಣಿಕ ಬದುಕನ್ನು ಸಾಗಿಸಿ ನನ್ನನ್ನು ಓದಿಸಿದರು. ಬದುಕಿನಲ್ಲಿ ನಿನಗಿಂತ ಕೆಳಗಿರುವವರನ್ನು ಯಾವತ್ತೂ ಅವಮಾನಿಸಬೇಡ ಮತ್ತು ಎಂದೂ ಭ್ರಷ್ಟನಾಗಬೇಡ ಎಂದು ಬುದ್ದಿ ಹೇಳಿದ ವ್ಯಕ್ತಿಯಾಗಿದ್ದರು. ಹೀಗಾಗಿ ನೆರೆದಿರುವ ಈ ನೂರಾರು ಕಾರ್ಮಿಕರಲ್ಲಿ ನಾನು ನನ್ನ ತಂದೆ ಇರಬಹುದೆಂದು ಹುಡುಕುತ್ತಿರುವೆ ಎಂದು ಹೇಳಿದರು

ಬಿಜಾಪುರದ ಒಬ್ಬ ಬಡ ಹಮಾಲಿ ಕಾರ್ಮಿಕನ ಮಗನಾದ ನಾನು ಜಗತ್ತಿನ 15 ದೇಶಗಳಿಗೆ ಪ್ರವಾಸ ಮಾಡಿದ್ದೇನೆ 25 ಪುಸ್ತಕಗಳನ್ನು ರಚಿಸಿದ್ದೇನೆ ಅಮೇರಿಕ ಸೇರಿ ಕರ್ನಾಟಕದ 10 ವಿಶ್ವವಿದ್ಯಾಲಯಗಳು ನನ್ನ ಬರಹಗಳನ್ನು ಪಠ್ಯವಾಗಿಸಿಕೊಂಡು ಸಾವಿರಾರು ವಿದ್ಯಾರ್ಥಿಗಳು ಓದುತ್ತಿದ್ದಾರೆ. ನಾನು ಡಾಕ್ಟರೇಟ್ ಪದವಿ ಪಡೆದಿರುವೆ ನನ್ನ ಬದುಕು ಬರಹ ಕುರಿತು ಚೆನ್ನೈ ಸೇರಿ ಎರಡು ವಿ.ವಿಯಲ್ಲಿ ಡಾಕ್ಟರೇಟ್ ಪಡೆಯಲು ವಿದ್ಯಾರ್ಥಿಗಳು ಅಭ್ಯಾಸ ಮಾಡುತ್ತಿದ್ದಾರೆ. ಇಷ್ಟಾಗಿಯೂ ಒಬ್ಬ ಹಮಾಲಿ ಕಾರ್ಮಿಕನಾಗಿದ್ದ ನನ್ನ ತಂದೆಯ ಬದುಕಿನ ಮುಂದೆ ನನ್ನ ಸಾಧನೆ ಏನೇನೂ ಅಲ್ಲ ಹೀಗಾಗಿ ಇವತ್ತು ಒಬ್ಬ ಹಮಾಲಿ ಕಾರ್ಮಿಕನ ಮಗನಾಗಿ ಈ ಸಮ್ಮೇಳನದಲ್ಲಿ ಭಾಗವಹಿಸುತ್ತಿರುವುದು ನನಗೆ ನನ್ನ ಸಾಧನೆಗಿಂತ ಹೆಚ್ಚು ಸಂತೋಷ ಉಂಟು ಮಾಡಿದೆ ಇಂತಹ ಶ್ರಮಿಕರ ಪರವಾಗಿ ಶ್ರಮಿಸುತ್ತಿರುವ ಕರ್ನಾಟಕ ರಾಜ್ಯ ಹಮಾಲಿ ಕಾರ್ಮಿಕ ಫೆಡರೇಶನ್ ಸಂಗಾತಿಗಳಿಗೆ ನಾನು ಅಭಿನಂದನೆ ಸಲ್ಲಿಸುವೆ ಎಂದು ತಮ್ಮ ಭಾಷಣದೂದ್ದಕ್ಕೂ ಬಾವುಕರಾಗುತ್ತಲೇ ಮಾತನಾಡಿದರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಸಿಐಟಿಯು ರಾಜ್ಯ ಪ್ರಧಾನ ಕಾರ್ಯದರ್ಶಿ ಮೀನಾಕ್ಷೀಸುಂದರಂ ಮಾತನಾಡಿ ತೀವ್ರವಾಗಿ ಬೆಲೆಗಳ ಏರುತ್ತಿವೆ ಆದರೆ ಶ್ರಮಿಕ ವರ್ಗದ ಕೂಲಿಗಳು ಇಳಿಯುತ್ತಿವೆ. ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಜಾರಿಗೊಳಿಸುವ ಈ ನೀತಿಗಳನ್ನು ಸೋಲಿಸದಿದ್ದಲ್ಲಿ ಕಾರ್ಮಿಕ ವರ್ಗದ ಮೇಲೆ ಮತ್ತಷ್ಟು ದಾಳಿಗಳನ್ನು ಭವಿಷ್ಯದಲ್ಲಿ ಎದುರಿಸಬೇಕಾಗುತ್ತದೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ರಾಜ್ಯ ಕೃಷಿ ಮಾರುಕಟ್ಟೆ ಮಾರಾಟ ಮಂಡಳಿ ಮುಖ್ಯ ಪ್ರಧಾನ ವ್ಯವಸ್ಥಾಪಕ ಶ್ರೀ ಚಂದ್ರಕಾಂತ ಭಾಗವಹಿಸಿ ಮಂಡಳಿಯು ಶ್ರಮಿಕರ ಕಲ್ಯಾಣಕ್ಕಾಗಿ ಜಾರಿಗೊಳಿಸುತ್ತಿರುವ ಹಲವು ಯೋಜನೆಗಳ ಮಾಹಿತಿ ನೀಡಿದರು.

ಕಾರ್ಯಕ್ರಮದಲ್ಲಿ ಸಮಾಜ ಸೇವಕ ರವೀಶ ಕುಮಾರ್, ರಾಜ್ಯ ಪ್ರಧಾನ ಕಾರ್ಯದರ್ಶಿ ಮಹೇಶ ಪತ್ತಾರ್ ಮಾತನಾಡಿದರು ವೇದಿಕೆಯಲ್ಲಿ ಕರ್ನಾಟಕ ರೈತ ಸಂಘದ ಅಧ್ಯಕ್ಷ ಜಿ.ಸಿ ಬಯ್ಯಾರೆಡ್ಡಿ, ಸಿಐಟಿಯು ರಾಜ್ಯ ಕಾರ್ಯದರ್ಶಿ ಸೈಯದ್ ಮುಜೀಬ್ ಮೊದಲಾದವರು ಉಪಸ್ಥಿತರಿದ್ದರು. ಫೆಡರೇಶನ್ ರಾಜ್ಯ ಅಧ್ಯಕ್ಷರಾದ ಕೆ.ಮಹಾಂತೇಶ್ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಆಕರ್ಷಕ ಬೃಹತ್ ಸೌಹಾರ್ದ ಮೆರವಣಿಗೆ : ಪಿಂಚಣಿ, ವಸತಿ, ಆರೋಗ್ಯ ಹಾಗೂ ಸಾಮಾಜಿಕ ಭದ್ರತೆ ಮೊದಲಾದ ಬೇಡಿಕೆಗಳಗಾಗಿ ಮತ್ತು ರೈತ–ಕಾರ್ಮಿಕ ವಿರೋಧಿ ಕಾನೂನುಗಳ ವಾಪಸ್ಸಾತಿಗಾಗಿ ಹಾಗೂ ಸೌಹಾರ್ದ ಕರ್ನಾಟಕ ಉಳಿವಿಗಾಗಿ ನಡೆದ ಕರ್ನಾಟಕ ರಾಜ್ಯ ಹಮಾಲಿ ಕಾರ್ಮಿ ಫೆಡರೇಶನ್ (ರಿ) 5 ನೇ ರಾಜ್ಯ ಸಮ್ಮೇಳನದ ಬೃಹತ್ ಸೌಹಾರ್ದ ಮೆರವಣಿಗೆ ಮೂಲಕ ಆರಂಭಗೊಂಡಿತು. ಮೆರವಣಿಗೆಯನ್ನು ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯ ಅಧ್ಯಕ್ಷರಾದ ಜಿ.ಸಿ. ಬಯ್ಯಾರೆಡ್ಡಿ ಬಾವುಟವನ್ನು ಹಮಾಲಿ ಸಂಘದ ಮುಖಂಡರಿಗೆ ವರ್ಗಾಹಿಸಿ ಉದ್ಘಾಟಿಸಿದರು.

ಈ ಮೆರವಣಿಗೆಯನ್ನು ಸೌಹಾರ್ದತೆಯ ಮೆರವಣಿಗೆಯನ್ನಾಗಿಸಿ ಇಡೀ ನಗರದಲ್ಲಿ ಸೌಹಾರ್ಧತೆ ಘೋಷಣೆ ಮೊಳಗಿಸಿದರು. ಮೆರೆವಣಿಗೆಯಲ್ಲಿ ನಾಡಿನ ಸೌಹಾರ್ದತೆಯ

ಪುಟ 14 ಕ್ಕೆ



ಅಧ್ಯಕ್ಷರು: ಕೆ. ಮಹಾಂತೇಶ್



ಪ್ರಧಾನ ಕಾರ್ಯದರ್ಶಿ: ಮಹೇಶ ಪತ್ತಾರ



ಖಜಾಂಚಿ: ಟಿ. ತಿಪ್ಪೇಸ್ವಾಮಿ

ಮಾಳಿಗೆಗಳ ಎತ್ತಿದೋರು, ಬಂಗಲೆಗಳ ಕಟ್ಟೀದೋರ ಬದುಕು-ಬವಣೆ.......

ಪುಟ 9 ರಿಂದ

ಸಂಪರ್ಕಗಳ ಮೂಲಕವು ಬರುವವರಿದ್ದಾರೆ. 70% ವಲಸೆ ಕಾರ್ಮಿಕರು ಅಂತರ್ ರಾಜ್ಯ ವಲಸೆ ಕಾರ್ಮಿಕರಾಗಿದ್ದಾರೆ. 76% ಕುಟುಂಬ ಸಮೇತರಾಗಿ ಬಂದಿದ್ದರೆ, 24% ಕುಟುಂಬ ರಹಿತರು. ಈ ರೀತಿ ಬರುವವರಲ್ಲಿ ಬಹುತೇಕರಿಗೆ ಕಾರ್ಮಿಕ ಇಲಾಖೆ ಮತ್ತು ಮಂಡಳಿಯ ನೋಂದಣಿ ಕುರಿತು ಮಾಹಿತಿಗಳೇ ಗೊತ್ತಿರುವುದಿಲ್ಲ. ಡೆಕ್ಕನ್ ಹೆರಾಲ್ಡ್ ಪತ್ರಿಕೆಯ ವರದಿಯಂತೆ 44% ಕಾರ್ಮಿಕರ ಬಳಿ ಅಗತ್ಯ ದಾಖಲೆಗಳಿಲ್ಲದೆ ಮಂಡಳಿಯಲ್ಲಿ ಕಟ್ಟಡ ಕಾರ್ಮಿಕರಾಗಿ ನೊಂದಾಯಿಸಿಕೊಳ್ಳಲು ಸಾಧ್ಯವಾಗಿಲ್ಲ. 27% ಕಟ್ಟಡ ಕಾರ್ಮಿಕರಿಗೆ ಅರ್ಜಿಯ ಭಾಷೆ ಗೊತ್ತಿಲ್ಲ. 46% ಕಟ್ಟಡ ಕಾರ್ಮಿಕರು ಅವಿದ್ಯಾವಂತರೇ ಆಗಿದ್ದಾರೆ. ಇಂತಹ ಅಸಹಾಯಕ ಪರಿಸ್ಥಿತಿಯನ್ನು ದುರ್ಲಾಭ ಮಾಡಿಕೊಳ್ಳುತ್ತಿರುವ ಮಧ್ಯವರ್ತಿಗಳಿಂದಾಗಿ ಕಾರ್ಮಿಕರು ಮೋಸಹೋಗುತ್ತಿದ್ದಾರೆ.

ಕಟ್ಟಡ ನಿರ್ಮಾಣ ಕಾರ್ಮಿಕರ ಸಾಮಾಜಿಕ ಸ್ಥಿತಿಗತಿ

ಕೃಷಿ ಬಿಕ್ಕಟ್ಟು, ಕೌಟುಂಬಿಕ ಆರ್ಥಿಕ ಸಮಸ್ಯೆಗಳು, ಉದ್ಯೋಗ ಅವಕಾಶಗಳ ಕೊರತೆಯಿಂದ ಬೆಂಗಳೂರಿಗೆ ಮುಖ ಮಾಡುವವರಲ್ಲಿ 50%ಕ್ಕೂ ಹೆಚ್ಚಿನವರು ಕಟ್ಟಡ ಕಾರ್ಮಿಕರಾಗಿದ್ದಾರೆ. ಬೆಂಗಳೂರು ದಕ್ಷಿಣ ಭಾಗದಲ್ಲಿ ಉತ್ತರ ಕರ್ನಾಟಕ ಭಾಗದ ಮತ್ತು ಉತ್ತರ ಭಾರತದ ಕಟ್ಟಡ ಕಾರ್ಮಿಕರು ತದನಂತರ ಆಂಧ್ರ, ತಮಿಳುನಾಡಿನವರು ಗಣನೀಯ ಸಂಖ್ಯೆಯಲ್ಲಿದ್ದಾರೆ. ಬಹುತೇಕರು 4/5/6 ಅಡಿಯ ಜೋಪಡಿಗಳು, ಕೆಲಸ ಮಾಡುವ ಸ್ಥಳಗಳಲ್ಲಿನ ಶೆಡ್‌ಗಳಲ್ಲಿ, ಕೆಲವು ಕಡೆ ಶೀಟ್ ಮನೆಗಳಲ್ಲಿ ಇವರ ವಾಸ. ಎಷ್ಟೋ ಜೋಪಡಿಗಳಲ್ಲಿ ವಿದ್ಯುತ್ ಸಂಪರ್ಕಗಳಿಲ್ಲ. ಸೌದೆ ಒಲೆಯ ಮೇಲೆ ಅವರ ಹೊಟ್ಟೆಪಾಡು ನಿಂತಿರುತ್ತದೆ. ಸ್ನಾನ, ಶೌಚಕ್ಕೆ ಪ್ಲಾಸ್ಟಿಕ್ ಪರದೆಗಳೇ ಆಸರೆ. ವಲಸೆಯ ಸ್ವರೂಪದ ಇವರ ಕೆಲಸದಿಂದಾಗಿ ಇವರ ಮಕ್ಕಳು ಶಾಲೆ ಸಲುವಾಗಿ ಊರಲ್ಲೇ ಉಳಿಯಬೇಕು. ಇಲ್ಲವೇ ಶಾಲೆಯಿಂದ ಹೊರಗುಳಿಯುವ ಪರಿಸ್ಥಿತಿ ಇದೆ. ಕೂಸುಗಳೊಂದಿಗೆ ಕಾಮಗಾರಿಯಲ್ಲಿ ತೊಡಗಿರುವ ಮಹಿಳಾ ಕಟ್ಟಡ ಕಾರ್ಮಿಕರ ಚಿತ್ರಣ ಎಲ್ಲೆಡೆ ಸಿಗುತ್ತದೆ. ಜೋಪಡಿಗಳಲ್ಲಿ ನಾಯಿ ಕಡಿತ, ನವಜಾತ ಶಿಶು ನಾಯಿ ಪಾಲಾದದ್ದು, ಮಹಿಳೆ ಮತ್ತು ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯದ ಪ್ರಕರಣಗಳು ವರದಿಯಾಗುತ್ತಿವೆ.

ಕೆಲಸದ ಸ್ಥಳದಲ್ಲಿ ಕಾರ್ಮಿಕರ ಸ್ಥಿತಿ:

ಕೆಲಸದ ಸ್ಥಳಗಳಲ್ಲಿ ಶೌಚಾಲಯ, ಕುಡಿಯುವ ನೀರು, ಗಾಳಿ-ಬೆಳಕು ಇರುವ ವಸತಿ ವ್ಯವಸ್ಥೆ, ಪ್ರಥಮ ಚಿಕಿತ್ಸಾ ಕಿಟ್, ಸುರಕ್ಷಾ ಸಾಧನಗಳನ್ನು ನೀಡುವುದು, ಆರೋಗ್ಯ ಶಿಬಿರಗಳನ್ನು ನಡೆಸುವುದು, ಮಹಿಳಾ ಕಾರ್ಮಿಕರಿದ್ದಲ್ಲಿ ಕ್ರೀಚ್ ಸೌಲಭ್ಯ ಸೇರಿದಂತೆ ಇತರೆ ಸೌಲಭ್ಯಗಳನ್ನು ಒದಗಿಸಬೇಕೆಂದು ಕಾರ್ಮಿಕ ಕಾನೂನು ಹೇಳುತ್ತದೆ. ಕಟ್ಟಡ ಕಾರ್ಮಿಕರ ಕಾನೂನಿನ ಅಡಿಯ 262 ನಿಯಮಾವಳಿಗಳಲ್ಲಿ 200ಕ್ಕೂ ಹೆಚ್ಚು ನಿಯಮಗಳು ಕಾರ್ಮಿಕರ ಸುರಕ್ಷತೆ ಮತ್ತು ಆರೋಗ್ಯಕ್ಕೆ ಸಂಬಂಧಿಸಿವೆ. ಆದರೆ ಬಹುತೇಕ ಸೈಟ್‌ಗಳಲ್ಲಿ ಈ ಯಾವುದೇ ಸೌಲಭ್ಯಗಳು ಕಾಣುವುದಿಲ್ಲ. ಸೌಲಭ್ಯಗಳನ್ನು ನೀಡಿಲ್ಲ ಎಂಬ ಕಾರಣಕ್ಕಾಗಿ ಕಾರ್ಮಿಕ ಅಧಿಕಾರಿಗಳು ಸೈಟ್‌ಗೆ ಭೇಟಿ ನೀಡಿ ಮಾಲೀಕರ ಮೇಲೆ ಕ್ರಮಕೈಗೊಂಡ ಒಂದೇ ಒಂದು ಉದಾಹರಣೆಯೂ ಸಿಗುವುದಿಲ್ಲ! ಶೌಚಕ್ಕಾಗಿ ಕಿಲೋಮೀಟರ್ ಗಟ್ಟಲೆ ನಡೆದುಹೋಗಬೇಕಾದ ಸ್ಥಿತಿ ಈಗಲೂ ಇದೆ. ಮಹಿಳಾ ಕಾರ್ಮಿಕರದ್ದಂತು ಚಿಂತಾಜನಕ ಸ್ಥಿತಿ.

ಕಾರ್ಮಿಕರು ಮತ್ತು ಕೂಲಿ

ಕಟ್ಟಡ ನಿರ್ಮಾಣ ಕಾರ್ಮಿಕರಿಗೆ ಸರಾಸರಿ ಕೂಲಿ ದಿನಕ್ಕೆ 400 ರೂಪಾಯಿ ಇದೆ. ಕೂಲಿ ನೀಡಿಕೆಯಲ್ಲಿ ತಾರತಮ್ಯ ಇದೆ. ಅಂತರ ರಾಜ್ಯ ವಲಸೆ ಕಾರ್ಮಿಕರು ಹಾಗು ಮಹಿಳಾ ಕಾರ್ಮಿಕರಿಗೆ ಕೂಲಿ ನಿಗದಿಯಲ್ಲಿ ತಾರತಮ್ಯ ಎಸಗಲಾಗುತ್ತಿದೆ. 2015ರಿಂದೀಚೆಗೆ ಕೆಲಸದ ದಿನಗಳು ಕ್ಷಣಿಸುತ್ತಿದ್ದು, ತಿಂಗಳಲ್ಲಿ 15 ದಿನ ಕೆಲಸ ಸಿಗುವುದು ತೀರ ಕಷ್ಟ ಎಂಬ ಸ್ಥಿತಿ ಇದೆ. ನೋಟ್ ಬ್ಯಾನ್, ಜಿಎಸ್ಟಿ ಹೇರಿಕೆ, ಹಣದುಬ್ಬರ, ಅನಿಯಮಿತ ಬೆಲೆ ಏರಿಕೆ ಹಾಗು ಕೋವಿಡ್ ನಿಂದಾಗಿ ನಿರ್ಮಾಣ ವಲಯ ಕುಸಿಯುತ್ತಿದ್ದು ಉದ್ಯೋಗದ ಅವಕಾಶಗಳು ಕ್ಷೀಣಿಸುತ್ತಿವೆ. ಕೆಲಸ ದಿನಗಳು ಕುಸಿಯುತ್ತಿರುವುದರಿಂದ ಆದಾಯವೂ ಕುಸಿದು ಬದುಕಿನ ಬಂಡಿ ಸಾಗಿಸುವುದು ದುಸ್ತರವಾಗುತ್ತಿದೆ. ಬೆಲೆ ಏರಿಕೆ ಮತ್ತು ಮರು ಗುತ್ತಿಗೆ ಕಾರಣದಿಂದ ಕೂಲಿ ವಂಚನೆ ಪ್ರಕರಣಗಳು ನಗರದಲ್ಲಿ ಅತಿ ಹೆಚ್ಚು ವರದಿಯಾಗುತ್ತಿವೆ. ವಲಸೆ ಕಾರ್ಮಿಕರ ಕಾನೂನಿನ ಪ್ರಕಾರ ವಲಸೆ ಕಾರ್ಮಿಕರ ಪ್ರಯಾಣ ಭತ್ಯೆ ನೀಡಬೇಕೆಂದು ಹೇಳುತ್ತದೆಯಾದರೂ ಭತ್ಯೆ ನೀಡುವುದಿಲ್ಲ.

ನಿರ್ಮಾಣ ವಲಯದಲ್ಲಿ ವಲಸೆ ಕಾರ್ಮಿಕರು

ಕಳೆದ 10 ವರ್ಷಗಳಲ್ಲಿ ನಿರ್ಮಾಣ ವಲಯದಲ್ಲಿ ವಲಸೆ ಕಾರ್ಮಿಕರು ದೊಡ್ಡ ಸಂಖ್ಯೆಯಲ್ಲಿ ತೊಡಗುತ್ತಿದ್ದಾರೆ. ಪ್ರಧಾನವಾಗಿ ಅಂತರ ರಾಜ್ಯ ವಲಸೆ ಕಾರ್ಮಿಕರು ಈ ಕ್ಷೇತ್ರಕ್ಕೆ ಬರುತ್ತಿದ್ದಾರೆ. ಆರಂಭದಲ್ಲಿ ಮೆಟ್ರೋ ಸೇರಿದಂತೆ ದೊಡ್ಡ ದೊಡ್ಡ ಪ್ರಾಜೆಕ್ಟ್ ಕೆಲಸ ಮಾಡುತ್ತಿದ್ದ ವಲಸೆ ಕಾರ್ಮಿಕರು, ಸದ್ಯ ಬಿಡಿ ಮನೆಗಳ ನಿರ್ಮಾಣದಲ್ಲೂ ತೊಡಗುತ್ತಿದ್ದಾರೆ. ಕೊರೊನಾ ಸಮಯದಲ್ಲಿ ಹಿಂಬದಿ ವಲಸೆ ಶುರುವಾಗಿತ್ತು. ಬಹುತೇಕ ವಲಸೆ ಕಾರ್ಮಿಕರು ತಮ್ಮ ಊರುಗಳಿಗೆ ತೆರಳಿದ್ದರು. ನಿರ್ಮಾಣ ವಲಯದಲ್ಲಿನ ಕಾರ್ಮಿಕರಲ್ಲಿ ಕೇವಲ 1 ಲಕ್ಷ ಕಾರ್ಮಿಕರು ಮಾತ್ರವೇ ವಾಪಸ್ಸಾಗಿದ್ದು (20% ಮಾತ್ರ) ಒಟ್ಟಾರೆ ವಲಸೆ ಕಾರ್ಮಿಕರಲ್ಲಿ 40 ಶೇಕಡ ಕಾರ್ಮಿಕರು ವಾಪಸ್ಸಾಗಿದ್ದಾರೆ ಎಂದು ಎಫ್‌ಕೆಸಿಸಿಐ ಹೇಳುತ್ತದೆ.

ಉತ್ತರ ಭಾರತದ ವಲಸೆ ಕಾರ್ಮಿಕರು ದೊಡ್ಡ ಸಂಖ್ಯೆಯಲ್ಲಿ ಉದ್ಯೋಗಕ್ಕಾಗಿ ನಗರಕ್ಕೆ ಬರುತ್ತಿರುವುದು ಸಂಕೀರ್ಣವಾದ ಸಾಮಾಜಿಕ ಸಮಸ್ಯೆಯನ್ನು ಸೃಷ್ಟಿಸುತ್ತಿದೆ. ಹೆಚ್ಚಿನವರು ಹಿಂದಿ ಭಾಷಿಕರಾಗಿರುವುದೂ ಸಮಸ್ಯೆಯನ್ನು ಮತ್ತಷ್ಟು ಜಟಿಲಗೊಳಿಸಿದೆ. 'ನಮ್ಮ ಕೆಲಸಗಳನ್ನು ಕಿತ್ತುಕೊಳ್ಳುತ್ತಿದ್ದಾರೆ' ಎಂಬ ಭಾವನೆ ಸ್ಥಳೀಯ ಕಾರ್ಮಿಕರಲ್ಲಿ ನಿಧಾನವಾಗಿ ಮೊಳಕೆಯೊಡೆದಿದೆ. ಸರ್ಕಾರಗಳ ಉದಾರಿವಾದಿ ನೀತಿಗಳ ಫಲವಾಗಿ ಈ ಬೆಳವಣಿಗೆಗಳು ನಡೆಯುತ್ತಿವೆ ಎಂಬುದನ್ನು ಸ್ಥಳೀಯ ಕಾರ್ಮಿಕರಿಗೆ ಅರ್ಥ ಮಾಡಿಸುವ ಜವಾಬ್ದಾರಿ ನಮ್ಮ ಮೇಲಿದೆ. ಅಂತರ ರಾಜ್ಯ ವಲಸೆ ಕಾರ್ಮಿಕರನ್ನು ನಮ್ಮ ಸಂಘದ ಅಡಿಯಲ್ಲಿ ತರುವ ಪ್ರಯತ್ನ ಆಗಬೇಕಿದೆ.

ಕೊರೊನಾ-ಲಾಕ್‌ಡೌನ್: ಕಾರ್ಮಿಕರ ಮೇಲೆ ಆಘಾತಕಾರಿ ಪರಿಣಾಮ

ಕೇಂದ್ರ-ರಾಜ್ಯ ಸರ್ಕಾರಗಳ ಅವೈಜ್ಞಾನಿಕ ಲಾಕ್‌ಡೌನ್‌ನಿಂದಾಗಿ ನಿಶ್ಚಿತ ಆದಾಯವಿಲ್ಲದ ಅಸಂಘಟಿತ ಕಾರ್ಮಿಕರು ಅತೀವ ಸಂಕಷ್ಟಕ್ಕೆ ಸಿಲುಕಿದ್ದರು. ಒಂದಿಡಿ ಅನ್ನಕ್ಕಾಗಿ ಪರದಾಡುವ ದಯನೀಯ ಸ್ಥಿತಿ ತಲುಪಿದ್ದರು. ಹುಟ್ಟಿದೂರು ಸೇರಿಕೊಳ್ಳಲು ಪಟ್ಟ ಪರಿಪಾಟಲು ಹೇಳ ತೀರದು. ಒಂದೆಡೆ ಕೈಯಲ್ಲಿ ಹಣವಿಲ್ಲ, ಮತ್ತೊಂದೆಡೆ ಸರ್ಕಾರಗಳು ಪ್ರಯಾಣಕ್ಕೆ ಯಾವುದೇ ವ್ಯವಸ್ಥೆ ಮಾಡಿರಲಿಲ್ಲ. ಮಗದೊಂದು ಕಡೆ ಸ್ಥಳೀಯ ಕಾರ್ಮಿಕರು ಆದಾಯವಿಲ್ಲದೆ ಮನೆ ಬಾಡಿಗೆ, ದಿನಸಿ ಸಾಮಾನು, ಔಷಧ ಕೊಳ್ಳಲೂ ಆಗದೇ ಪರಿತಪಿಸಿದ್ದು ಇನ್ನೂ ಹಸಿಯಾಗಿದೆ. ಕಟ್ಟಡ ಕಾರ್ಮಿಕರು ಕೊರೊನಾಗೆ ತುತ್ತಾಗಿ, ಬೆಡ್, ಔಷದಿ, ಆಕ್ಸಿಜನ್ ಸಿಗದೆ ಪರದಾಡಿದ್ದಾರೆ. ಎಷ್ಟೋ ಜನ ಕೊರೊನಾಗೆ ಬಲಿಯಾದರು, ಜತೆಗೆ ಮಹಾ ವಲಸೆಯಲ್ಲಿ, ಹಸಿವಿನಿಂದ ಸತ್ತವರೆಷ್ಟೋ ಲೆಕ್ಕಕ್ಕೆ ಸಿಗದು.

ಕಾರ್ಮಿಕರ ಬಗ್ಗೆ ಕಾಳಜಿ ತೋರದ ಕಲ್ಯಾಣ ಮಂಡಳಿ

ಕೊರೊನಾ ಸಂಕಷ್ಟದಲ್ಲಿ ಕಾರ್ಮಿಕರು ನಲುಗುತ್ತಿರುವಾಗ ಅವರ ನೆರವಿಗೆ ನಿಲ್ಲುವ ಕಾಳಜಿ ತೋರದೇ ಇದ್ದುದು ದುರದೃಷ್ಟಕರ. ಹಸಿದವರಿಗೆ ಊಟ ನೀಡುವಂತೆ ಹೋರಾಟವನ್ನೇ ನಡೆಸಬೇಕಾಯಿತು. ನಿರಂತರ ಹೋರಾಟಗಳ ಪರಿಣಾಮವಾಗಿ ಮೊದಲ ಅಲೆಯಲ್ಲಿ 5 ಸಾವಿರ ರೂಪಾಯಿ ಎರಡನೇ ಅಲೆಯಲ್ಲಿ 3 ಸಾವಿರ ರೂಪಾಯಿ ಪರಿಹಾರ ಘೋಷಿಸಲಾಯಿತು. ಆದರೆ ಇದು ಎಲ್ಲರಿಗೂ ತಲುಪಿಲ್ಲ. ತಲಾ 10 ಸಾವಿರ ರೂಪಾಯಿ ನೀಡಬೇಕೆಂಬ ನಮ್ಮ ಒತ್ತಾಯವನ್ನು ಸರ್ಕಾರ ಪರಿಗಣಿಸಲಿಲ್ಲ. ಬದಲಾಗಿ ಸೋಪು, ಸ್ಯಾನಿಟೈಸರ್, ಇತರೆ ಅಗತ್ಯವಿಲ್ಲದವಗಳಿಗೆ ಖರ್ಚು ಮಾಡಲಾಯಿತು.

ಮಂಡಳಿಯಲ್ಲಿ ಮಿತಿಮೀರಿದ ಭ್ರಷ್ಟಾಚಾರ; ಸಾಮಾಜಿಕ ಭದ್ರತೆ ಉದ್ದೇಶಕ್ಕೆ ಎಳ್ಳುನೀರು

2009 ರಿಂದ 2019 ರವರೆಗೆ ಪಬ್ಲಿಕ್ ಅಫೇರ್ಸ್ ಸೆಂಟರ್ ರಾಜ್ಯ ಸರ್ಕಾರಕ್ಕೆ ಸಲ್ಲಿಸಿರುವ ವರದಿಯಂತೆ ಮಂಡಳಿಗೆ ಸಂಗ್ರಹವಾದ ಸೆಸ್‌ನಲ್ಲಿ ಕೇವಲ 6.25% ವೆಚ್ಚವಾಗಿದೆ. ಆದರೆ 2020, 2021 ಹಾಗು 2022ನೇ ಸಾಲಿನಲ್ಲಿ ಸಾವಿರಾರು ಕೋಟಿ ರೂಪಾಯಿ ಖರ್ಚು ಮಾಡಲಾಗಿದೆ. ವಿಪತ್ತು ನಿರ್ವಹಣಾ ಕಾಯ್ದೆಯನ್ನು ದುರ್ಬಳಕೆ ಮಾಡಿಕೊಂಡು ರೇಷನ್ ಕಿಟ್ ನೀಡುವ ಹೆಸರಿನಲ್ಲಿ ನೂರಾರು ಕೋಟಿ ರೂಪಾಯಿ ಖರ್ಚು ಮಾಡಲಾಗಿದೆ. ಕಳಪೆ ಆಹಾರ ಪದಾರ್ಥಗಳನ್ನು ಪೂರೈಸಿ ಮಂಡಳಿಯ ತಿಜೋರಿ ಲೂಟಿ ಮಾಡಲಾಗಿದೆ. ದುರಾದೃಷ್ಟವೆಂದರೆ ಕಳಪೆ ಆಹಾರವೂ ಶಾಸಕರುಗಳ ಕೈಗೆ ಹೋಯಿತೇ ಹೊರತು, ಹಸಿದ ಕಾರ್ಮಿಕರ ಹೊಟ್ಟೆ ತುಂಬಿಸಲಿಲ್ಲ. ಕಾರ್ಮಿಕರಿಗೆ ಬೇಡವಾದ ಬೂಸ್ಟರ್ ಕಿಟ್, ಸುರಕ್ಷಾ ಕಿಟ್ ಖರೀದಿಯಲ್ಲೂ ಭಾರಿ ಭ್ರಷ್ಟಾಚಾರ ನಡೆಸಲಾಗಿದೆ.

ಟೂಲ್ ಕಿಟ್ ಖರೀದಿಯಲ್ಲಿ ಭಾರಿ ಅವ್ಯವಹಾರವೇ ನಡೆದಿದೆ. ಸುರಕ್ಷಾ ಕಿಟ್ ಒಂದಕ್ಕೆ 24,780 ರೂಪಾಯಿನಂತೆ 8106 ಕಿಟ್‌ಗಳನ್ನು ಖರೀದಿಸಲಾಗಿದೆ. ಅದೇ ರೀತಿ ವುಡ್ ಪೈಂಟಿಂಗ್ ಕಿಟ್, ಡಿಸೈನಿಂಗ್ ಪೈಂಟಿಂಗ್ ಕಿಟ್, ಬಾರ್‌ಬೆಂಡಿಂಗ್ ಕಿಟ್, ಕಾರ್ಪೆಂಟರ್ ಕಿಟ್, ಎಲೆಕ್ಟ್ರೀಷಿಯನ್ ಕಿಟ್, ಪ್ಲಂಬಿಂಗ್ ಕಿಟ್, ಮೇಸನ್ ಕಿಟ್, ಅರ್ಥ್ ವರ್ಕ್ ಕಿಟ್, ಬ್ಲಾಕ್ ಮೇಕಿಂಗ್ ಕಿಟ್, ವಾಲ್ ಪೈಂಟಿಂಗ್ ಕಿಟ್, ಟೈಲ್ ವರ್ಕ್ ಕಿಟ್, ಪೈಂಟಿಂಗ್ ಕಿಟ್ ಹೀಗೆ ಟೂಲ್ ಕಿಟ್‌ಗಾಗಿ ಸಾವಿರಾರು ಕೋಟಿ ರೂಪಾಯಿ ಖರ್ಚು ಮಾಡಲಾಗಿದೆ. ಕಲ್ಯಾಣ ಮಂಡಳಿಯ ನಿಯಮಾವಳಿಯಲ್ಲಿ ಖರೀದಿ ವ್ಯವಹಾರಕ್ಕೆ ಅವಕಾಶ ಇಲ್ಲದಿದ್ದರೂ ಕಾನೂನು ಮೀರಿ ಖರೀದಿಸಲಾಗುತ್ತಿದೆ. ಇನ್ನೋವಾ ಕಾರು ಖರೀದಿ, ಕಂಪ್ಯೂಟರ್, ಟಿವಿ ಖರೀದಿ, ಮಂಡಳಿ ಕಾರ್ಯದರ್ಶಿ ಕಚೇರಿಯ ಐಷಾರಾಮಿ ನವೀಕರಣ ಹೀಗೆ ಎಲ್ಲ ವ್ಯವಹಾರಗಳಲ್ಲಿ ಭಾರಿ ಭ್ರಷ್ಟಾಚಾರ ನಡೆಯುತ್ತಿದೆ. ಆದರೆ ಕಾರ್ಮಿಕರಿಗೆ ನೀಡಬೇಕಿರುವ ಘೋಷಿತ ಸೌಲಭ್ಯಗಳೂ ಸರಿಯಾಗಿ ದೊರೆಯುತ್ತಿಲ್ಲ.

ಪ್ರಸ್ತುತ ಕಟ್ಟಡ ಕಾರ್ಮಿಕರಿಗೆ 19 ಸೌಲಭ್ಯಗಳು ಇದ್ದಾಗ್ಯು ಜಾರಿಯಲ್ಲಿರುವುದು 9 ಮಾತ್ರ. ಆದರೆ ರಾಜ್ಯ ಸರ್ಕಾರ ರಾಜ್ಯದ ಉದ್ದಗಲಕ್ಕು ಜಾಹಿರಾತುಗಳ ಕೀಳುಮಟ್ಟದ ಜನಪ್ರಿಯತೆಗೆ ಮುಂದಾಗಿದೆ. ಕೋಟ್ಯಾಂತರ ಹಣವನ್ನು ಇದಕ್ಕಾಗಿ ವ್ಯಯಿಸುತ್ತಿದೆ. ಮನೆ ನಿರ್ಮಾಣಕ್ಕಾಗಿ 5 ಲಕ್ಷ ರೂಪಾಯಿ ಸಹಾಯಧನ ನೀಡಬೇಕೆಂಬ ನಮ್ಮ ಬೇಡಿಕೆಯನ್ನೂ ಈವರೆಗೂ ಪುರಷ್ಕರಿಸಿಲ್ಲ!

ಘೋಷಿಸಿರುವ ಎಲ್ಲ ಸೌಲಭ್ಯಗಳ ಜಾರಿಗಾಗಿ ಮತ್ತು ಕೆಲಸದ ಸ್ಥಳಗಳಲ್ಲಿ ಶಿಶುಪಾಲನಾ ಕೇಂದ್ರಗಳು, ವಸತಿ ವ್ಯವಸ್ಥೆ, ಮಹಿಳಾ ಸುರಕ್ಷತೆಯ ಖಾತ್ರಿಯೊಂದಿಗೆ ನಿರ್ಮಾಣ ಕಾಮಗಾರಿಗಳಿಗೆ ಅನುಮತಿಸಬೇಕೆಂಬ ಹಕ್ಕೊತ್ತಾಯವನ್ನು ಮುನ್ನೆಲೆಗೆ ತರಬೇಕಿದೆ. ರಾಜ್ಯದ ಒಟ್ಟು ನಿರ್ಮಾಣ ಕಾಮಗಾರಿಗಳಲ್ಲಿ ಹೂಡುತ್ತಿರುವ ಬಂಡವಾಳ ಕಾರ್ಮಿಕರ ಶ್ರಮದ ಮೌಲ್ಯವನ್ನು ವೈಜ್ಞಾನಿಕ ನೆಲೆಯಲ್ಲಿ ಮಾಪನ ಮಾಡಿ, ಕೂಲಿ ಮತ್ತು ಅವರ ಜೀವನ ಭದ್ರತೆಗೆ ಹೋರಾಟಗಳನ್ನು ಮುಂದುವರಿಸಬೇಕಿದೆ. ●

ನೆಲ ಅರಸಿ ಅಲೆದವರು......

ಪುಟ 8 ರಿಂದ

ನಿವೇಶನದ ಕನಸು ಮಾತ್ರ ಒಂದಿಂಚೂ ಚಿಗುರದೆ ನಿರಾಸೆಯ ಬೆಂಕಿಯಲ್ಲಿ ಬಾಡುತ್ತಿದೆ.

ಈ ಹಿಂದೆ ಇಲ್ಲಿನ ಗುಡಿಸಲುಗಳು ಬೆಂಕಿ ಅವಘಡಕ್ಕೆ ಸಿಲುಕಿದಾಗ ಸಚಿವ ಶ್ರೀರಾಮುಲು ಸ್ಥಳಕ್ಕೆ ಭೇಟಿ ನೀಡಿ ಯಾಂತ್ರಿಕ ಕರುಣೆ ತೋರಿದರು. ಕನಿಷ್ಠ ಸುಟ್ಟ ಗುಡಿಸಲುಗಳಿಗೆ ಪರಿಹಾರದ ಬಗ್ಗೆ ಎಳ್ಳಷ್ಟೂ ಮಾತಾಡದೆ ಮನೆ ಕಟ್ಟಿಸಿಕೊಡುವ ಪೊಳ್ಳು ಭರವಸೆ ನೀಡಿ, ಪೊಲೀಸ್ ವಸತಿಗೃಹ ಉದ್ಘಾಟಿಸಿ ಮಾಯವಾದರು. ನಂತರ ಸಂಡೂರ್ ಶಾಸಕ ತುಕಾರಾಮ್ ಸ್ಥಳೀಯ ಆಡಳಿತಕ್ಕೆ ಆಹಾರ, ಮತ್ತಿತರೆ ಸಾಮಗ್ರಿಗಳನ್ನು ನೀಡುವಂತೆ ಆದೇಶಿಸಿ, ಬೇರೆ ಸ್ಥಳದಲ್ಲಿ ಒಂದರ ಮೇಲೊಂದು ಮನೆ ಕಟ್ಟಿಸುವ, ನನಸಾಗದ ಭವ್ಯ ಬಂಗಲೆಯ ಕನಸು ಬಿತ್ತಿ ಹೋದರು. ಇದುವರೆಗೂ ಯಾರೂ ಇತ್ತ ಕಣ್ಣು ಹಾಯಿಸಿಲ್ಲ.

ಇದರ ನಡುವೆ ಎರಡೂ ರಾಜಕೀಯ ಪಕ್ಷಗಳ ಮರಿ ಪುಢಾರಿಗಳ, "ನೀವಿರುವ ಸ್ಥಳ ಸರಕಾರಿ ಇಲಾಖೆಗೆ ಸೇರುತ್ತದೆ. ನಿಮ್ಮನ್ನು ಇಲ್ಲಿಂದ ಒಕ್ಕಲೆಬ್ಬಿಸುತ್ತಾರೆ.

ಆಗ ನಾವೇ ನಿಮ್ಮನ್ನು ಕಾಪಾಡುವುದು" ಎಂದು ಪುರಸಭೆ ಚುನಾವಣೆಗೆ ಓಟು ಗಿಟ್ಟಿಸುವ ತಂತ್ರ ಹೆಣೆಯುವಲ್ಲಿ ಪೈಪೋಟಿಗಿಳಿದಿದ್ದಾರೆ.

ಕೊನೆಗಾಣದ ಬಾಳಿಗೆ ಹೋರಾಟವೆ ದಾರಿ

ನಿವೇಶನಕ್ಕಾಗಿ ಯಾತನೆಗೊಳಗಾದ ಈ ಬಡವರು ಬೇರೆ ಯಾರಲ್ಲ. ಕಾರ್ಖಾನೆ ಅಭಿವೃದ್ಧಿಯ ಭರಾಟೆಯಲ್ಲಿ ಬದುಕು ಕಳಕೊಂಡವರು. ಕಂಬಳಿ ನೇಯ್ಗಾರಿಕೆ, ಬಡಗಿತನ, ಕುಲುಮೆತನದಲ್ಲಿದ್ದ ಈ ಕುಟುಂಬದ ಹಿರಿತಲೆಗಳು ಆಗಲೇ ಉರುಳಿ ಹೋಗಿವೆ. ಅವರ ಮುಂದಿನ ಪೀಳಿಗೆಯ ಈ ಬಡವರು ಕಾರ್ಖಾನೆಯಲ್ಲಿ ಸಿಗುವ ಅಲ್ಪ ದಿನಗೂಲಿ, ಸಣ್ಣಪುಟ್ಟ ಅಂಗಡಿ, ಕಟ್ಟಡ ಕೆಲಸ ಮುಂತಾದ ಅರೆಬರೆಯ ಉದ್ಯೋಗದಲ್ಲಿ ದಕ್ಕುವ ಹಿಡಿಕೂಲಿಯಲ್ಲಿ ಸ್ವಂತಕ್ಕೆ ಮನೆಯಿಲ್ಲದೆ ಬದುಕು ಕಂಡಿದ್ದಾರೆ.

ಸದ್ಯ ಇವರ ನಿವೇಶನದ ಕನಸು ಊರತುಂಬ ವಲಸೆಗೊಂಡು ಗ್ರಾಮದ ಗೋಸಂಬೀಳಿನಲ್ಲಿ ಹಕ್ಕುಪತ್ರ ವಿಲ್ಲದೆ ಅತಂತ್ರಗೊಂಡಿದೆ.

ಮಂತ್ರಿ, ಶಾಸಕರ ಹುಸಿ ಭರವಸೆಯ ಬಾಣಗಳು ಈ ಬಡವರ ಎದೆಗೆ ಗಾಯ ಕೊರೆದಿವೆ. ಮರಿ ಪುಡಾರಿಗಳ ತಂತ್ರಕ್ಕೆ ತಲೆಕೊಡವಿ ಎಚ್ಚರಗೊಂಡಿದ್ದಾರೆ. ಇವರ ಎಚ್ಚರದ ಅರಿವಿಗೆ ಸಿಪಿಐ(ಎಂ) ಬೆಳಕು ಹಿಡಿದಿದೆ. ಇತ್ತೀಚಿಗೆ ಸ್ಥಳೀಯ ಕಾರ್ಯಕರ್ತರಾದ ಕನಕಪ್ಪ, ರಾಮಪ್ಪ, ಪಾಂಡುರಂಗ ರವರು ಮುತುವರ್ಜಿಯಲ್ಲಿ ನಿವೇಶನ ರಹಿತರ ಹೋರಾಟ ಸಮಿತಿ ರಚಿಸಿ ಪುರಸಭೆ ಎದುರು ಬೃಹತ್ ಧರಣಿ ನಡೆಸಿದ್ದಾರೆ. ಈ ಸಂದರ್ಭದಲ್ಲಿ ಸಿಐಟಿಯುನ ಮುಖಂಡ ಜೆ. ಸತ್ಯಬಾಬು ಹೋರಾಟಕ್ಕೆ ಹುರುಪು ತುಂಬಿ ಮಾತಾಡಿದ್ದಾರೆ. ಅಲ್ಲದೆ ಜನವಾದಿ ಮಹಿಳಾ ಸಂಘದ ಅಧ್ಯಕ್ಷೆ ಚಂದ್ರಕುಮಾರಿ ಧರಣಿ ಬೆಂಬಲಿಸಿ ಮಾತಾಡಿದ್ದಾರೆ. ಸ್ಥಳೀಯ ಕಟ್ಟಡ ಕಾರ್ಮಿಕ, ಬಿಟಿಪಿಎಸ್ ಕಾರ್ಮಿಕ ಸಂಘಟನೆಗಳು ಬೆಂಬಲಕ್ಕೆ ಮುಂದಾಗಿವೆ. ಹೋರಾಟದ ಮೂಲಕ ಜಿಲ್ಲಾದಿಕಾರಿಗಳು ಚರ್ಚೆಗೆ ಕರೆದು ಸಮಸ್ಯೆ ಬಗೆಹರಿಸುವಂತೆ ಆಗ್ರಹಿಸಿದ್ದಾರೆ.

ಇದಕ್ಕೆ ಆಡಳಿತ ಮಣಿಯದಿದ್ದರೆ ನಾನಾ ಹಂತಗಳ ಹೋರಾಟ ನಡೆಸಲು ದಿಟ್ಟ ಹೆಜ್ಜೆಹಾಕಿದ್ದಾರೆ.

ದ್ವೇಷ ಭಾಷಣಗಳ ಚರ್ಚೆಯಲ್ಲಿ ಅತಿ ದೊಡ್ಡ ಅಪರಾಧಿಗಳು ಪಾರಾಗಲು ಬಿಡಬೇಕೇ?

ಎಂದು ಕೇಳುತ್ತಾರೆ ಸಿಪಿಐ(ಎಂ) ರಾಜ್ಯಸಭಾ ಸದಸ್ಯ ಜಾನ್ ಬ್ರಿಟ್ಟಾಸ್

ಭಾರತೀಯ ಮಾಧ್ಯಮಗಳು – ನಿರ್ದಿಷ್ಟವಾಗಿ ಟಿವಿ ಮಾಧ್ಯಮ – 2014 ರಿಂದ ದ್ವೇಷ ಭಾಷಣ ಮತ್ತು ವಿಭಜನಕಾರೀ ರಾಷ್ಟ್ರವಾದವನ್ನು ಮುಖ್ಯವಾಹಿನಿಗೆ ತರುವಲ್ಲಿ ವಹಿಸಿದ ಪಾತ್ರಕ್ಕೆ ಅವುಗಳನ್ನು ಹೊಣೆಗಾರರಾಗಿಸಬೇಕಾಗಿದೆ ಎನ್ನುತ್ತಾರೆ ಅವರು 'ಇಂಡಿಯನ್ ಎಕ್ಸ್‌ಪ್ರೆಸ್'ನಲ್ಲಿ (ಜೂನ್ 9) ಪ್ರಕಟವಾಗಿರುವ ಈ ಲೇಖನದಲ್ಲಿ.



ಪ್ರವಾದಿ ಮೊಹಮ್ಮದ್ ಮತ್ತು ಇಸ್ಲಾಂ ಬಗ್ಗೆ ಅವಹೇಳನಕಾರಿ ಟಿಪ್ಪಣಿಗಳ ನಂತರ ಬೆಳೆಯುತ್ತಿರುವ ಅಪಸ್ವರಗಳ ನಡುವೆ, ಈ ವಿಷಯದಲ್ಲಿ ಅತ್ಯಂತ ದೊಡ್ಡ ಅಪರಾಧಿಗಳಲ್ಲಿ ಒಂದಾದ ಮಾಧ್ಯಮವು ನಿರ್ಭಯದಿಂದ ಪಾರಾಗುತ್ತಿದೆ. ರಂಪಾಟ ನಡೆಸಿದವರಿಗೆ ಪಿಟೀಲು ನುಡಿಸಿದ ಮಾಧ್ಯಮಗಳು ಯಾವುದೇ ಆತ್ಮಾವಲೋಕನವಿಲ್ಲದೆ ಅದೇ ಪಥದಲ್ಲಿ ಮುಂದುವರಿಯುತ್ತಿವೆ.

ಭಾರತೀಯ ಮಾಧ್ಯಮಗಳು – ನಿರ್ದಿಷ್ಟವಾಗಿ ಟಿವಿ ಮಾಧ್ಯಮ – 2014 ರಿಂದ ದ್ವೇಷ ಭಾಷಣಗಳು ಮತ್ತು ವಿಭಜನಕಾರೀ ರಾಷ್ಟ್ರವಾದವನ್ನು ಮುಖ್ಯವಾಹಿನಿಗೆ ತರುವಲ್ಲಿ ವಹಿಸಿದ ಪಾತ್ರದ ಬಗ್ಗೆ ಒಂದು ದೊಡ್ಡ ಅಧ್ಯಯನವೇ ನಡೆಯಬೇಕಾಗಿದೆ. ನಿಸ್ಸಂದೇಹವಾಗಿ, ಬಲಪಂಥೀಯ ಸಂಘಟನೆಗಳು ಮತ್ತು ಅಂಚಿನಲ್ಲಿದ್ದವರು ಪ್ರತಿಪಾದಿಸುತ್ತಿದ್ದ ಬಹುಸಂಖ್ಯಾತವಾದೀ ಸಿದ್ಧಾಂತವು ಸಮಾಜದಲ್ಲಿ ಬಿರುಕುಗಳನ್ನು ಸೃಷ್ಟಿಸುವ ವಿಷಯಗಳನ್ನು ಕೆರಳಿಸುವಲ್ಲಿ ಮೂಲಭೂತ ಪಾತ್ರವನ್ನು ವಹಿಸಿದೆ. ಆದರೆ ಟಿವಿ ಮಾಧ್ಯಮ ಅದನ್ನು ಪ್ರತಿಯೊಬ್ಬರ ಮನೆಗೆ ತರುವ ಮೂಲಕ ಮುಖ್ಯವಾಹಿನಿಗೆ ತಂದಿತು. ಕಥನಗಳನ್ನು ರೂಪಿಸಲು ಪ್ರತಿದಿನ ವಿಷಯಗಳಲ್ಲದ ವಿಷಯಗಳ ಬಗ್ಗೆ ಬೊಬ್ಬೆ ಎಬ್ಬಿಸಲಾಗುತ್ತಿದೆ– ಹಲಾಲ್, ಹಿಜಾಬ್, ನಮಾಜ್, ದೇಶದ್ರೋಹ, ಜೆಎನ್‌ಯು, ಮಾಂಸಾಹಾರ, ಮುಸ್ಲಿಂ ಎನಿಸುವ ಸ್ಥಳನಾಮಗಳು, ರಸ್ತೆಗಳ ಹೆಸರುಗಳು, ಮೊಘಲ್ ವಾಸ್ತುಶಿಲ್ಪ ಮತ್ತು ಮಸೀದಿಗಳು– ಇವೆಲ್ಲ ಟೆಲಿವಿಷನ್ ಸ್ಟುಡಿಯೋಗಳಲ್ಲಿ ಕೂಗಾಡಿದ ಹತ್ತು ಹಲವ ವಿಷಯಗಳು. ಪ್ರಾರ್ಥನಾ ಟೋಪಿಗಳು ಮತ್ತು ಉದ್ದನೆಯ ಗಡ್ಡಗಳನ್ನು ಭಾವೋದ್ರೇಕ ಉಂಟುಮಾಡಲು ಉದ್ದೇಶಪೂರ್ವಕವಾಗಿ ಪ್ರದರ್ಶಿಸಲಾಯಿತು. ಒಂದು ಸಂದರ್ಭದಲ್ಲಿ, ಬುಲ್ಡೋಜರ್‌ಗಳು ರಾಷ್ಟ್ರ ರಾಜಧಾನಿಯಲ್ಲಿ ಬಡವರ ಅರೆಬರೆ ಮನೆಗಳನ್ನು ಕೆಡವುತ್ತಿದ್ದಾಗ – ಒಂದು ಪ್ರಮುಖ ಇಂಗ್ಲಿಷ್ ಸುದ್ದಿ ವಾಹಿನಿ, ಅವರನ್ನು ಗಲಭೆಕೋರರು ಎಂದು ಹೆಸರಿಸಿತು, ಮತ್ತು ' #ಬುಲ್‌ಡೋಜರ್‌ರ್‌ನ್ಯಾಯ ಎಂಬ ಹ್ಯಾಶ್‌ಟ್ಯಾಗ್‌ನೊಂದಿಗೆ ಪ್ರೈಮ್ ಟೈಮ್ ಚರ್ಚೆಯನ್ನು ನಡೆಸಿತು!

ಇದೇ ನೂಪುರ್ ಶರ್ಮಾ ಎಂಬ ಜಾಡ್ಯಕ್ಕೆ ಜನ್ಮ ನೀಡಿದ ಪರಿವೇಶ. ಈ ಹಿಂದೆ, ಮಾಧ್ಯಮಗಳು ತಮ್ಮ ಮತೀಯ ಒಲವುಗಳನ್ನು ಪ್ರದರ್ಶಿಸಲು ಹಿಂಜರಿಯುತ್ತಿದ್ದವು ಮತ್ತು ಅದರ ಅನೇಕ ಬಳಸುದಾರಿಗಳು ಅಗ್ರಾಹ್ಯವಾಗಿದ್ದವು. ಆದರೆ ಸಂಘ ಪರಿವಾರದ ಸಂಘಟನೆಗಳ ನೇತೃತ್ವದ ರಾಮಜನ್ಮಭೂಮಿ ಆಂದೋಲನವು ಮಾಧ್ಯಮದೃಶ್ಯವನ್ನು ತೀವ್ರವಾಗಿ ಬದಲಾಯಿಸಿತು. ಹಿಂದಿ ಮಾಧ್ಯಮಗಳು ಪ್ರದರ್ಶಿಸಿದ ಉದ್ಧಟತನ ದೇಶವನ್ನು ಆವರಿಸಲಿದ್ದ ಪ್ರವೃತ್ತಿಯ ಆರಂಭಿಕ ಅಭಿವ್ಯಕ್ತಿಯಾಗಿತ್ತು. ಪ್ರೆಸ್ ಕೌನ್ಸಿಲ್ ಮತ್ತು ಇತರ ಸ್ವತಂತ್ರ ಗುಂಪುಗಳು ನಡೆಸಿದ ಅಧ್ಯಯನಗಳು ಕೋಮು ಉನ್ಮಾದವನ್ನು ಹುಟ್ಟುಹಾಕುವ ಏಕೈಕ ಉದ್ದೇಶವನ್ನು ಹೊಂದಿರುವಂತೆ ತೋರುತ್ತಿದ್ದ ವರದಿಗಾಗಿ ಅನೇಕ ಹಿಂದಿ ಪತ್ರಿಕೆಗಳನ್ನು ದೂಷಿಸಿದವು. ಆದರೆ ಈ ಭ್ರಮಣೆ ಈಗ ರೂಢ ಸಂಗತಿಯಾಗಿದೆ, ಅನೇಕ ಟಿವಿ ವಾಹಿನಿಗಳು ಈ ರೂಪಾಂತರ ವಿಜಯದ ದ್ಯೋತಕ ಎಂದು ಭಾವಿಸಿವೆ.

ನಿಮ್ಮ ಪ್ರಾಥಮಿಕ ಆದಾಯವು ಸರ್ಕಾರಿ ಜಾಹೀರಾತುಗಳು ಮತ್ತು ಸರ್ಕಾರದ–ನೇತೃತ್ವದ ಈವೆಂಟ್‌ಗಳಿಂದ ಬರುತ್ತಿರುವಾಗ ನೀವು ರಾಜಕೀಯವಾಗಿ ಪ್ರಸಕ್ತ ಆಡಳಿತಗಾರರೊಂದಿಗೆ ಹೊಂದಾಣಿಕೆ ಮಾಡಿಕೊಳ್ಳುವುದು ಒಂದು ವಿಷಯ. ಆದರೆ ದ್ವೇಷದ ಸಗಟು ವಿತರಕರಾಗಿ ಸೇವೆ ಸಲ್ಲಿಸುವುದು ಒಟ್ಟಾರೆಯಾಗಿ ಬೇರೆಯೇ ಸಂಗತಿಯಾಗುತ್ತದೆ. ಭವಿಷ್ಯದ ಪೀಳಿಗೆಗಳು ಇದಕ್ಕೆ ನಿಮ್ಮನ್ನು ಕ್ಷಮಿಸದಿರಬಹುದು. ಹಲವು ಬಾರಿ ನ್ಯೂಸ್‌ರೂಮ್‌ಗಳು ಅಂಚಿನಲ್ಲಿರುವವರ ಗಿಳಿಪಾಟವನ್ನು ಸಲ್ಲಿಸುವ ಗೂಡುಗಳಾಗಿ ಬಿಡುತ್ತವೆ ಎಂದು ಹೇಳಲಾಗಿದೆ. ಏಕೆಂದರೆ ಅದು ಅವರಿಗೆ ವೀಕ್ಷಣೆಗಳ ಸಂಖ್ಯೆಯನ್ನು ಹೆಚ್ಚಿಸುತ್ತದೆ. ಇದು ಭಾರತೀಯ ಸಾರ್ವಜನಿಕರ ಬುದ್ಧಿವಂತಿಕೆ ಮತ್ತು ಭಾರತೀಯ ಗಣರಾಜ್ಯದ ನೀತಿಯನ್ನು ಅವಮಾನಿಸುವ ಒಂದು ಪ್ರಮೇಯ.

ಸಂಘಪರಿವಾರದ ಸಂಘಟನೆಗಳು ಅಧಿಕಾರಕ್ಕಾಗಿ ಮಾತ್ರ ಪ್ರಜಾಪ್ರಭುತ್ವ ಪ್ರಕ್ರಿಯೆಯಲ್ಲಿ ಭಾಗವಹಿಸುವುದಿಲ್ಲ. ಭಾರತೀಯ ಸಮಾಜವನ್ನು ಬುಡಮೇಲು ಮಾಡುವುದು, ಅವರು ಕಲ್ಪಿಸಿಕೊಂಡಂತೆ ಅದರ ಇತಿಹಾಸವನ್ನು ಮರುಶೋಧಿಸುವುದು ಮತ್ತು ರಾಷ್ಟ್ರದ ಜಾತ್ಯತೀತ ರಾಜಕೀಯ ಸಂಸ್ಕೃತಿಯನ್ನು ವಿರೂಪಗೊಳಿಸುವುದು ಅವರ ಪ್ರಮುಖ ಕಾರ್ಯಸೂಚಿಯಾಗಿದೆ. ಈ ಪ್ರಕ್ರಿಯೆಯಲ್ಲಿ ಒಂದು ಹೊಸ ರೀತಿಯ ರಾಷ್ಟ್ರವಾದ ಅವರ ಸಾಧನವಾಗಿದೆ. ಇದು ಎಲ್ಲರನ್ನು ಒಳಗೊಳ್ಳುವ ಬದಲು ಕೆಲವರನ್ನು ಹೊರಗಿಡುವ ರಾಷ್ಟ್ರವಾದ. ಈ ರಾಷ್ಟ್ರವಾದದ ಒಂದು ಮುಖ್ಯ ಲಕ್ಷಣವೆಂದರೆ ಅದು ಹಿಂದೂ ಧರ್ಮ ಮತ್ತು ಹಿಂದುತ್ವ ಹಾಗೂ ರಾಷ್ಟ್ರ ಮತ್ತು ಪ್ರಸಕ್ತ ಸರ್ಕಾರದ ನಡುವಿನ ಎಲ್ಲೆಗುರುತುಗಳನ್ನು ಅಳಿಸಲು ಪ್ರಯತ್ನಿಸುತ್ತದೆ. ಆದ್ದರಿಂದ, ಉಗ್ರ ಹಿಂದುತ್ವದ ಯಾವುದೇ ಟೀಕೆಯನ್ನು ಹಿಂದೂ ಧರ್ಮದ ಕಲ್ಪನೆಯ ಮೇಲಿನ ಆಕ್ರಮಣ ಎಂದು ವ್ಯಾಖ್ಯಾನಿಸಲಾಗುತ್ತದೆ ಮತ್ತು ಪ್ರಸಕ್ತ ಸರ್ಕಾರದ ಮೇಲೆ ಮಾಡಿದ ಯಾವುದೇ ಟೀಕೆಯನ್ನು ಭಾರತದ ಕಲ್ಪನೆಯ ಮೇಲಿನ ದಾಳಿ ಎಂದು ಪರಿಗಣಿಸಲಾಗುತ್ತದೆ. ಮತು ಇಂತಹ ಯೋಚನಾ ಪ್ರಕ್ರಿಯೆಯನ್ನು ಆವಿಷ್ಕರಿಸುವ ಯೋಜನೆಯಲ್ಲಿ ಟಿವಿ ನಿರ್ಣಾಯಕ ಪಾತ್ರವನ್ನು ವಹಿಸುತ್ತದೆ. ಮಾಧ್ಯಮವು ಬೌದ್ಧಿಕ ಉದ್ಯಮವಾಗಿರುವುದರಿಂದ, ಐತಿಹಾಸಿಕ ಸತ್ಯ ಮತ್ತು ಕಲ್ಪಿತ ವಾಸ್ತವವನ್ನು ಆರಿಸಿಕೊಂಡು ಮಾಡುವ ಆಯ್ಕೆಯು ಒಂದು ದಹನಕಾರೀ ಜಾಡನ್ನು ತನ್ನ ಹಿಂದೆ ಬಿಟ್ಟು ಹೋಗುತ್ತದೆ. ಹೀಗೆ ದ್ವೇಷಭಾಷಣ ಸಾಮಾನ್ಯ ಸಂಗತಿಯಾಗುತ್ತದೆ ಮತ್ತು ಸಾರ್ವಜನಿಕ ಚಿಂತಕರಿಗೆ ರಾಷ್ಟ್ರವಿರೋಧಿಗಳೆಂಬ ಬಣ್ಣ ಹಚ್ಚಲಾಗುತ್ತದೆ.

ಈ ಸಂಸ್ಕೃತಿಯು ನಮ್ಮ ಸಮಾಜದ ಎಲ್ಲಾ ಆಯಾಮಗಳನ್ನು ಶಾಲಾ ಪಠ್ಯಕ್ರಮದಿಂದ ಬಾಲಿವುಡ್‌ವರೆಗೆ ಎಲ್ಲವನ್ನೂ ಕಲುಷಿತಗೊಳಿಸಿದೆ. ದಿ ಕಾಶ್ಮೀರ್ ಫೈಲ್ಸ್‌ನಂತಹ ಚಲನಚಿತ್ರಗಳ ಮೇಲೆ ಎಬ್ಬಿಸಿದ ಗುಲ್ಲು ಇದಕ್ಕೊಂದು ಉದಾಹರಣೆ. ಈ ಕಾರಣದಿಂದಲೇ ಈ ರಾಷ್ಟ್ರವಾದವು ಸೂಕ್ತವೆಂದು ಬಗೆಯುವ ಅಲ್ಪಸಂಖ್ಯಾತರ ಸಿದ್ಧಮಾದರಿಯ ಚಿತ್ರಣವನ್ನು ಪ್ರದರ್ಶಿಸುವ ಐತಿಹಾಸಿಕ ಚಲನಚಿತ್ರಗಳೆಂದು ಕರೆಯಲ್ಪಡುವವುಗಳು ಪುಷ್ಕಳವಾಗಿ ಬಾಲಿವಡ್‌ನಿಂದ ಬರುತ್ತಿರುವುದು. ಭಾರತದ ವಿಭಜನೆ ಬಿಟ್ಟು ಹೋಗಿರುವ ವೈಮನಸ್ಯಗಳ ಮೇಲೆ ಆಟವಾಡುವ ಪ್ರೈಮ್ ಟೈಮ್ ಸುದ್ದಿ ಚರ್ಚೆಗಳು ಮನೆಗಳಲ್ಲಿ ಟಿವಿ ಮುಂದೆ ಕೂತಿರುವ ಮಂದಿ ಅಲ್ಲಿಗೆ ಹೋಗಿ "ಗೋಲಿ ಮಾರೋ ಸಾಲೋಂ ಕೋ" ಎಂದು ಉದ್ರೇಕಿಸುತ್ತವೆ.



ಸರ್, ಇಂತವರನ್ನು ನೀವು ಸಸ್ಪೆಂಡ್ ಮಾಡಿದರೆ ನಾವು ಡಿಬೇಟ್ ನಡೆಸುದಾದರೂ ಹೇಗೆ? (ವ್ಯಂಗ್ಯಚಿತ್ರ: ಅಲೋಕ್ ನಿರಂತರ್)

"ನಾಲ್ಕು ವರ್ಷಗಳಾದವು, ನಾವೆಂದೂ ತಲೆಬಾಗಿಲ್ಲ, ಕ್ಷಮಾಯಾಚನಾ ಪತ್ರ ಬರೆದಿಲ್ಲ": ಭೀಮ–ಕೊರೆಗಾಂವ್ ಪ್ರಕರಣದ ಆರೋಪಿಗಳ ಬಹಿರಂಗ ಪತ್ರ

ಭೀಮ–ಕೊರೆಗಾಂವ್ ಪ್ರಕರಣದಲ್ಲಿ ಪ್ರಾಧ್ಯಾಪಕರು, ವಕೀಲರು, ಸಾಮಾಜಿಕ ಕಾರ್ಯಕರ್ತರು ಸೇರಿದಂತೆ 15 ಪ್ರಮುಖರನ್ನು ಆರೋಪಿಗಳಾಗಿಸಿ ಜೈಲಿಗೆ ತಳ್ಳಿ ನಾಲ್ಕು ವರ್ಷಗಳಾಗಿವೆ. ಈ ಸಂದರ್ಭದಲ್ಲಿ ಜೈಲಿನಿಂದ ಬರೆದಿರುವ ಒಂದು ಪತ್ರದಲ್ಲಿ, ಈ ಪ್ರಕರಣದ ಸಾಕ್ಷ್ಯಗಳೆಲ್ಲ ಹುಸಿ ಎಂದು ಜೀರ್ಣಿಸಿಕೊಳ್ಳಲು ನ್ಯಾಯಾಂಗಕ್ಕೆ ಇನ್ನೆಷ್ಟು ಸಮಯ ಬೇಕು ಎಂದು ಆರೋಪಿಗಳ ಪರವಾಗಿ ಕಟುವಾದ ಪ್ರಶ್ನೆಯನ್ನು ಎತ್ತಲಾಗಿದೆ.

ಭಿನ್ನಮತವನ್ನು ಹತ್ತಿಕ್ಕಲು ಭಯೋತ್ಪಾದಕ–ವಿರೋಧಿ ಕಾಯ್ದೆಗಳನ್ನು ಮನಬಂದಂತೆ ಪ್ರಯೋಗಿಸಿ ತಮ್ಮನ್ನು ನಾಲ್ಕು ವರ್ಷಗಳಿಂದ ಜೈಲಿನಲ್ಲಿಡಲಾಗಿದೆ ಎಂದಿರುವ ಅವರು, ತಮ್ಮ ಸಂಕಟಗಳು ಹಲವು ವರ್ಷಗಳಿಂದ ಜೈಲಿನಲ್ಲಿ ಕೊಳೆಯುತ್ತಿರುವ ಇನ್ನೂ ಹಲವಾರು ಬಂಧಿಗಳಿಗೆ ಹೋಲಿಸಿದರೆ ಏನೇನೂ ಅಲ್ಲ, ಅವರು ನಗುಮುಖದಿಂದ ಅವನ್ನೆಲ್ಲ ಸಹಿಸಿಕೊಂಡು ಬಂದಿದ್ದಾರೆ, "ಅವರನ್ನು ನೋಡುವಾಗ ನಮಗೆ ಒಂದು ಭಿನ್ನರೀತಿಯ ಬಲ ಸಿಗುತ್ತದೆ, ಈ ಅಮಾನವೀಯ ಜಾಗದಲ್ಲೂ ಅವರು ಮಹಾನ್ ಆಶಾಭಾವನೆಯಿಂದ ಬದುಕುತ್ತಿದ್ದಾರೆ" ಎಂದು ಈ ಪತ್ರ ಹೇಳಿದೆ.

"ಈ ಕಾಯ್ದೆಗಳು ಒಬ್ಬ ವ್ಯಕ್ತಿ ತನ್ನನ್ನು ರಕ್ಷಿಸಿಕೊಳ್ಳದಂತೆ ಅಸ್ತವ್ಯಸ್ತಗೊಳಿಸುತ್ತದೆ, ಜಾಮೀನು ಕೇಳಿದಾಗ ಅದು ಅನುಗ್ರಹವೋ ಎಂಬಂತೆ ನಿರಾಕರಿಸಲಾಗುತ್ತದೆ. ಜಾಮೀನು ಪಡೆಯಲು ಭಾರತದಲ್ಲಿ 5–10 ವರ್ಷಗಳು (ಮಹಾರಾಷ್ಟ್ರದಲ್ಲಿ 8–10 ವರ್ಷಗಳು) ಬೇಕಾಗುತ್ತವೆ ಎಂದು ಅಂಕಿ–ಅಂಶಗಳು ಹೇಳುತ್ತವೆ. ಅದುವರೆಗೆ ಜೈಲಿನಲ್ಲೇ ಕೊಳೆಯಬೇಕು. ಇದು ವ್ಯಕ್ತಿಗಳ ಸಾಮಾಜಿಕ, ಆರ್ಥಿಕ, ಮಾನಸಿಕ ಮತ್ತು ಭಾವುಕ ಬದುಕನ್ನು ಧ್ವಂಸ ಮಾಡಲು ಆಳುವವರು ಸೃಷ್ಟಿಸಿರುವ ವಿವರವಾದ ಪರಿಯೋಜನೆ" ಎಂದಿರುವ ಈ ಪತ್ರದಲ್ಲಿ ತಾವುಗಳೆಲ್ಲ ತಮ್ಮ ಪ್ರಜ್ಞೆಯ, ಸಂವೇದನಾಶೀಲತೆಯ, ಮತ್ತು ಭಾವನೆಗಳ ಬಂಧಿಗಳು, ಇದನ್ನು ತಾವು, ಆಳುವ ಮಂದಿಗಳಂತೆ ಬಿಟ್ಟುಕೊಟ್ಟಿಲ್ಲ, ತಮ್ಮನ್ನು ಏಕಾಂತವಾಸದಲ್ಲಿ ಇಡಲಾಗಿದೆ, ಆದರೂ ತಾವು ತಲೆಬಾಗಿಲ್ಲ, ಬಿಡುಗಡೆ ಮಾಡಿ ಎಂದು ಬೇಡಿಕೊಂಡಿಲ್ಲ, ಎಂದೂ ಕ್ಷಮಾಪಣಾ ಪತ್ರ ಬರೆದಿಲ್ಲ ಎಂದು ಈ 15 ಮಂದಿ ಹೇಳಿದ್ದಾರೆ.

ಜನ–ವಿರೋಧಿ ಆಳ್ವಿಕೆಗಳು ಜೈಲನ್ನು ಒಂದು ಪ್ರಮುಖ ಅಸ್ತ್ರವಾಗಿ ಬಳಸುತ್ತಿವೆ, ನಾಗರಿಕತೆಯ ಬೆಳವಣಿಗೆಯ ಸಂಕೇತಗಳು ಎಂದು ಏನನ್ನು ಪರಿಗಣಿಸಲಾಗಿರುವ ಎಲ್ಲ ಮೂಲಭೂತ ಮಾನವ ಸೌಲಭ್ಯಗಳಿಂದ ದೂರವಿಡಲಾಗುತ್ತದೆ ಎಂದು ಜನರಿಗೆ ನೆನಪಿಸಿರುವ ಪತ್ರ ಇಂತಹ ಕಷ್ಟದ ಸಮಯದಲ್ಲಿ ತಮಗೆ ಬೆಂಬಲ, ವಿವಿಧ ರೀತಿಯ ನೆರವುಗಳನ್ನು ನೀಡಿರುವ ಹಿತೈಷಿಗಳಿಗೆ ಕೃತಜ್ಞತೆ ಸಲ್ಲಿಸುತ್ತ, ಈ ಅಭೂತಪೂರ್ವ ಬೆಂಬಲ, ಸಾರ್ವಜನಿಕ ಆಕ್ರೋಶ ಮತ್ತು ಅವಿರತ ಪ್ರಯತ್ನಗಳು ಒಂದು ದಿನ ಫಲ ನೀಡುತ್ತವೆ ಎಂಬ ಆಶಾಭಾವನೆಯನ್ನು ವ್ಯಕ್ತಪಡಿಸಿದೆ.

ತ್ರೈಮಾಸಿಕ ಹಣದುಬ್ಬರ ಜೂನ್‌ನಲ್ಲಿ 7.5%, ಸಪ್ಟಂಬರ್‌ನಲ್ಲಿ 7.4%

ಇದು ಭಾರತೀಯ ರಿಜರ್ವ್ ಬ್ಯಾಂಕ್(ಆರ್.ಬಿ.ಐ.)ನ ಅಂದಾಜು. ಹಣದುಬ್ಬರ ಏರುವ ಅಪಾಯ ಇನ್ನೂ ಇದೆ. ಆಹಾರ ಸರಕುಗಳ ಬೆಲೆಗಳಲ್ಲಿ ಹೆಚ್ಚಳ ಮತ್ತು ಜಾಗತಿಕ ಕಚ್ಚಾ ತೈಲ ಬೆಲೆಗಳ ಹೆಚ್ಚಳದಿಂದಾಗಿ ಈ ಅಪಾಯ ಮುಂದುವರೆಯುತ್ತದೆ ಎಂದು ಜೂನ್ 8ರಂದು ರಿಜರ್ವ್ ಬ್ಯಾಂಕ್ ಗವರ್ನರ್ ಹೇಳಿದ್ದಾರೆ.

ಇದರಿಂದಾಗಿ ಪ್ರಸಕ್ತ ಹಣಕಾಸು ವರ್ಷದಲ್ಲಿ ಒಟ್ಟು ಹಣದುಬ್ಬರ ದರ 5.7% ಇರುತ್ತದೆ ಎಂದು ಕಳೆದ ಎಪ್ರಿಲ್‌ನಲ್ಲಿ ಮಾಡಿದ ಅಂದಾಜನ್ನು ಈಗ 6.7%ಕ್ಕೆ ಏರಿಸಲಾಗಿದೆ. ಈ ಜೂನ್ ತಿಂಗಳಲ್ಲಿ ಕೊನೆಗೊಳ್ಳುವ ತ್ರೈಮಾಸಿಕದಲ್ಲಿ ಇದು 7.5% ಇರಬಹುದು, ಸಪ್ಟಂಬರಿನಲ್ಲಿ ಕೊನೆಗೊಳ್ಳುವ ತ್ರೈಮಾಸಿಕದಲ್ಲಿ ಇದು 7.4% ಇರಬಹುದು ಎಂದು ಸದ್ಯಕ್ಕೆ ಆರ್.ಬಿ.ಐ. ಅಂದಾಜು ಮಾಡಿದೆ. ಮೂರನೇ ತ್ರೈಮಾಸಿಕದ ಅಂತ್ಯದಲ್ಲಿ, ಡಿಸೆಂಬರಿನಲ್ಲಿ ಇದು 6.2%ಕ್ಕೆ ಇಳಿಯಬಹುದು, ನಂತರ ಈ ಹಣಕಾಸು ವರ್ಷದ ಕೊನೆಯಲ್ಲಿ ಇದು 5.8%ಕ್ಕೆ ಇಳಿಯಬಹುದು. ಒಟ್ಟಾರೆಯಾಗಿ, ಇಡೀ 2022–23ರಲ್ಲಿ ಇದು 6.7% ಆಗುತ್ತದೆ ಎಂದು ಅಂದಾಜು ಮಾಡಲಾಗಿದೆಯಂತೆ.

ಈ ಮೊದಲು ಎಪ್ರಿಲ್ ತಿಂಗಳಲ್ಲಿ ಅದು, ಮೊದಲ ತ್ರೈಮಾಸಿಕದಲ್ಲಿ 6.3%, 2ನೇ ತ್ರೈಮಾಸಿಕದಲ್ಲಿ 5.8%, 3ನೇ ತ್ರೈಮಾಸಿಕದಲ್ಲಿ 5.4% ಮತ್ತು ಕೊನೆಯ ತ್ರೈಮಾಸಿಕದಲ್ಲಿ 5.1% ಇರಬಹುದು, ಒಟ್ಟಾರೆಯಾಗಿ 5.7% ಎಂದು ಅಂದಾಜು ಮಾಡಿತ್ತು.

ಹಣದುಬ್ಬರ ದರ 4%ದ ಒಳಗೆ ಇರಬೇಕು, ಹೆಚ್ಚೆಂದರೆ 6%, ಅದನ್ನು ದಾಟುವುದು ಅಸಮಾಧಾನದ ಸಂಗತಿ ಎಂಬ ಆಧಾರದ ಮೇಲೆ ಆರ್.ಬಿ.ಐ. ತನ್ನ ದ್ವೈಮಾಸಿಕ ಹಣಕಾಸು ಕ್ರಮಗಳನ್ನು ನಿರ್ಧರಿಸುತ್ತದೆ ಎಂಬುದನ್ನು ಇಲ್ಲಿ ನೆನಪಿಸಿಕೊಳ್ಳಬಹುದು.

ಈ ಹಿನ್ನೆಲೆಯಲ್ಲಿ ಪ್ರಮುಖ ಸಾಲ ನೀಡಿಕೆ ದರವನ್ನು 50 ಆಧಾರ ಪಾಯಿಂಟುಗಳಷ್ಟು(ಅಂದರೆ 0.5% ದಷ್ಟು) ಅದು ಏರಿಸಿದೆ. ಇದು ಕಳೆದ ಐದು ವಾರಗಳಲ್ಲಿ ಎರಡನೇ ಏರಿಕೆಯಾಗಿದೆ. ಇದರ ತಕ್ಷಣದ ಪರಿಣಾಮ ಎಂದರೆ ಬೆಲೆಯೇರಿಕೆಗಳಿಂದ ನರಳುತ್ತಿರುವ ಜನಗಳ ಮೇಲೆ, ಅದರಲ್ಲೂ ಮನೆಸಾಲ, ವಾಹನ ಸಾಲ ಇತ್ಯಾದಿಗಳನ್ನು ಪಡೆದವರಿಗೆ ಮರುಪಾವತಿ ಕಂತುಗಳ ಏರಿಕೆಯ ಹೊರೆಯೂ ಬೀಳುತ್ತದೆ. ಆದರೆ ಇದರಿಂದ ಹಣದುಬ್ಬರ ಏರಿಕೆಗೆ ಕಡಿವಾಣ ಬೀಳುತ್ತದೆ ಎಂಬುದು ಆರ್.ಬಿ.ಐ. ನಿರೀಕ್ಷೆ.

ಆರ್ಥಿಕ ಬೆಳವಣಿಗೆ ದರ 7.5%ಕ್ಕೆ ಇಳಿಯುತ್ತದೆ–ವಿಶ್ವ ಬ್ಯಾಂಕ್

ಈ ನಡುವೆ ಭಾರತದ ಆರ್ಥಿಕ ಬೆಳವಣಿಗೆ ದರ 2022–23ರ ಹಣಕಾಸು ವರ್ಷದಲ್ಲಿ 7.5%ಕ್ಕೆ ಇಳಿಯುತ್ತದೆ ಎಂದು ವಿಶ್ವಬ್ಯಾಂಕ್ ಭವಿಷ್ಯ ನುಡಿದಿದೆ. ಈ ಮೊದಲು ಅದು 8.7% ಇರುತ್ತದೆ ಎಂದು ಕಳೆದ ಜನವರಿಯಲ್ಲಿ ಹೇಳಿತ್ತು, ಎಪ್ರಿಲ್ ನಲ್ಲಿ ಅದನ್ನು 8%ಕ್ಕೆ ಇಳಿಸಿತು, ಈಗ ಅದನ್ನು ಮತ್ತಷ್ಟು ಇಳಿಸಿದೆ.

ರಿಜರ್ವ್ ಬ್ಯಾಂಕ್ ಎಪ್ರಿಲಿನಲ್ಲಿ ಜಿಡಿಪಿ ವೃದ್ಧಿದರ 7.2% ಇರುತ್ತದೆ ಎಂದಿತ್ತು. ಜೂನ್ 8ರ ಪ್ರಕಟಣೆಯಲ್ಲಿ ಅದನ್ನೇ ಪುನರುಚ್ಚರಿಸಿದೆ, ಇಳಿಸಿಲ್ಲ ಎಂಬುದು ಗಮನಾರ್ಹ.

ಅಮೃತ ಕಾಲವಿದು!

ಅತ್ತ ಅಲ್–ಖೈದಾ ಬೆದರಿಕೆ–ಇತ್ತ ಸಾಲ ಕಂತು ಏರಿಕೆ



"ಪಕ್ಷ ಜನಗಳ ಗಮನವನ್ನು ತಿರುಗಿಸಿಡುವ ವರೆಗೆ ಇದರಿಂದ ತೊಂದರೆಯೇನಿಲ್ಲ!"

(ವ್ಯಂಗ್ಯ ಚಿತ್ರ ಕೃಪೆ: ಸಜಿತ್ ಕುಮಾರ್, ಡೆಕ್ಕನ್ ಹೆರಾಲ್ಡ್)

"ಮುಚ್ಚಿದ ಲಕೋಟೆ"ಯಲ್ಲಿ ಚುನಾವಣಾ ಬಾಂಡಿನ ಮಿಥ್ಯೆ

ರಾಜಕೀಯ ಪಕ್ಷಗಳಿಗೆ ಕಾರ್ಪೊರೇಟ್ ದೇಣಿಗೆಗಳಲ್ಲಿ ಪಾರದರ್ಶಕತೆ ತರಲು, ಈ ಮೂಲಕ ಕಪ್ಪು ಹಣದ ಚಲಾವಣೆಯನ್ನು ತಪ್ಪಿಸಲು ಎಂದು 2017ರಲ್ಲಿ ಮೊದಲ ಮೋದಿ ಸರಕಾರ ಪರಿಚಯಿಸಿದ ಚುನಾವಣಾ ಬಾಂಡ್ ಒಂದು ಅತ್ಯಂತ ಅಪಾರದರ್ಶಕವಾದ, ಸಂದೇಹಾಸ್ಪದವಾದ ವ್ಯವಸ್ಥೆ ಎಂಬುದು ಮತ್ತೊಮ್ಮೆ ಕಂಡು ಬಂದಿದೆ. ಜತೆಗೆ, ಈ ವಿಷಯದಲ್ಲಿ ಚುನಾವಣಾ ಆಯೋಗದ ಮತ್ತು ನ್ಯಾಯಾಂಗದ ಪಾತ್ರದ ಬಗ್ಗೆಯೂ ಮತ್ತೆ ಪ್ರಶ್ನೆಗಳು ಎದ್ದಿವೆ.

ಇದು ಭಾರತದಲ್ಲಿ ಪ್ರಜಾಪ್ರಭುತ್ವವನ್ನು ವಿರೂಪಗೊಳಿಸುವ ಕ್ರಮ ಎಂಬ ಟೀಕೆಗಳು ಬಂದ ಹಿನ್ನೆಲೆಯಲ್ಲಿ 2017 ಮತ್ತು 2018ರಲ್ಲಿ ಇದರ ಕಾನೂನುಬದ್ಧತೆಯನ್ನು ಪ್ರಶ್ನಿಸುವ ಎರಡು ಅರ್ಜಿಗಳನ್ನು ಸರ್ವೋಚ್ಚ ನ್ಯಾಯಾಲಯದಲ್ಲಿ ಸಲ್ಲಿಸಲಾಯಿತು. ಆಗ ಚುನಾವಣಾ ಆಯೋಗವೂ ಈ ಕ್ರಮದ ಬಗ್ಗೆ ತನ್ನದೇ ಆಕ್ಷೇಪಗಳನ್ನು ವ್ಯಕ್ತ ಮಾಡಿತ್ತು. ಕೊನೆಗೂ ಇದನ್ನು ಕೈಗೆತ್ತಿಕೊಂಡ ಸುಪ್ರಿಂ ಕೋರ್ಟ್ ಎಪ್ರಿಲ್ 12, 2019ರಲ್ಲಿ ಎಷ್ಟು ಪಕ್ಷಗಳು ಎಷ್ಟು ಮೊತ್ತವನ್ನು ಈ ಬಾಂಡ್‌ಗಳ ಮೂಲಕ ಪಡೆದಿವೆ ಎಂಬ ಮಾಹಿತಿಗಳನ್ನು ಸಂಗ್ರಹಿಸಿ ತನಗೆ ತಿಳಿಸಬೇಕು ಎಂದು ಚುನಾವಣಾ ಆಯೋಗಕ್ಕೆ ಹೇಳಿತು. ಇದನ್ನು 'ಮುಚ್ಚಿದ ಲಕೋಟೆ'ಯಲ್ಲಿ ನೀಡಬೇಕು ಎಂದೂ ನ್ಯಾಯಾಲಯ ಹೇಳಿತು.

ಇದರಂತೆ ಚುನಾವಣಾ ಆಯೋಗ 105 ರಾಜಕೀಯ ಪಕ್ಷಗಳ ಉತ್ತರಗಳನ್ನು ಫೆಬ್ರುವರಿ 2020 ರಲ್ಲಿ ಸುಪ್ರಿಂ ಕೋರ್ಟಿಗೆ 'ಮುಚ್ಚಿದ ಲಕೋಟೆ'ಯಲ್ಲಿ ಸಲ್ಲಿಸಿತು ಎಂದು ವರದಿಯಾಗಿತ್ತು. ಆದರೆ ಎರಡು ವರ್ಷಗಳಾದರೂ, ಮತ್ತು ಅರ್ಜಿದಾರರು ವಿಚಾರಣೆಯನ್ನು ಮತ್ತೆ ಆರಂಭಿಸುವಂತೆ ಮತ್ತೆ–ಮತ್ತೆ ಕೇಳಿಕೊಂಡರೂ, ವಿಚಾರಣೆ ನಡೆದಿಲ್ಲ, ಈ 'ಲಕೋಟೆ' ಯಲ್ಲಿ ಏನಿದೆ ಎಂದು ಇದುವರೆಗೂ ತಿಳಿದಿಲ್ಲ.

ಆದರೆ ಕೇಂದ್ರದ ಆಳುವ ಪಕ್ಷ ಹೇಳಿದಂತೆ ಇದು ಎಲ್ಲ ಪಕ್ಷಗಳಿಗೂ ರಾಜಕೀಯ ದೇಣಿಗೆ ಪಡೆಯುವ ಅವಕಾಶವನ್ನು ತೆರೆದಿರುವ ಕ್ರಮ ಎಂಬ ಭಾವನೆ ಕಳೆದ ಎರಡು ವರ್ಷಗಳಿಂದ ಇದೆ.

ಈ 105 ಪಕ್ಷಗಳಲ್ಲಿ 7 ರಾಷ್ಟ್ರೀಯ ಮಟ್ಟದ ಪಕ್ಷಗಳು, ಮೂರು ರಾಷ್ಟ್ರಿಯ ಪಕ್ಷಗಳ ರಾಜ್ಯ ಘಟಕಗಳು, 20 ರಾಜ್ಯ ಮಟ್ಟದ ಪಕ್ಷಗಳು ಮತ್ತು 70 ನೋಂದಾಯಿತ, ಆದರೆ ಚುನಾವಣಾ ಆಯೋಗದ ಮಾನ್ಯತೆ ಪಡೆಯದ ಪಕ್ಷಗಳು. ಹೆಚ್ಚಿನವು ದಿಲ್ಲಿಯಿಂದ ಬಹಳ ದೂರದಲ್ಲಿರುವವುಗಳು.

ಆದರೆ ವಾಸ್ತವವಾಗಿ ಈ 105 ಪಕ್ಷಗಳಲ್ಲಿ 17 ಪಕ್ಷಗಳು ಮಾತ್ರ ಕಾರ್ಪೊರೇಟ್‌ಗಳಿಂದ ದೇಣಿಗೆಯನ್ನು ಪಡೆದಿವೆ, ಇವುಗಳಲ್ಲಿ ಕೇಂದ್ರದಲ್ಲಿ ಆಳುವ ಪಕ್ಷದ್ದೇ ಸಿಂಹಪಾಲು, 2020ರ ಆರಂಭದ ವರೆಗೆ ಮೂರು ವರ್ಷಗಳಲ್ಲಿ ಈ ಬಾಂಡ್‌ಗಳ ಮೂಲಕ ಪಡೆದ ಒಟ್ಟು ರೂ. 6201 ಕೋಟಿಯಲ್ಲಿ ಅದು ಪಡೆದಿರುವುದು ರೂ.4215.89 ಕೋಟಿ, ಅಂದರೆ 67.9%. ರೂ.706.12 ಕೋಟಿ ಪಡೆದು ಎರಡನೇ ಸ್ಥಾನದಲ್ಲಿ ಕಾಂಗ್ರೆಸ್‌ನ ಪಾಲು 11.3% ಮಾತ್ರ ಮತ್ತು ಮೂರನೇ ಸ್ಥಾನದಲ್ಲಿ ಬಿಜೆಡಿ ಪಡೆದದ್ದು ರೂ.264 ಕೋಟಿ.

ಇದು 'ರಿಪೋರ್ಟರ್ಸ್ ಕಲೆಕ್ಟಿವ್'ನ ಮೂವರು ಪತ್ರಕರ್ತರಾದ ಶ್ರೀಗಿರೀಶ್ ಜಾಲಿಹಾಳ್, ಪೂನಮ್ ಅಗರ್‌ವಾಲ್ ಮತ್ತು ಸೋಮೇಶ್ ಝಾ ಅವರ ತನಿಖಾ ವರದಿಗಳಿಂದ ಈಗ ಗೋತ್ತಾಗಿರುವ ಸಂಗತಿಗಳು (ದಿ ಲೀಫ್‌ಲೆಟ್, ಜೂನ್ 6).

ಚುನಾವಣಾ ಆಯೋಗ ಸುಪ್ರಿಂ ಕೋರ್ಟ್ ಕೇಳಿರುವ ಪ್ರಶ್ನೆಗಳಿಗೆ ಉತ್ತರ ನೀಡಿ ಎಂದು ತನ್ನಲ್ಲಿ ನೋಂದಾವಣೆಗೊಂಡಿರುವ 2800ಕ್ಕೂ ಹೆಚ್ಚು ಪಕ್ಷಗಳಿಗೆ ಪತ್ರ ಬರೆಯಿತು. ಸುಪ್ರಿಂ ಕೋರ್ಟ್ ಕೇಳಿದ್ದು ಎಷ್ಟು ರಾಜಕೀಯ ಪಕ್ಷಗಳು ಈ ಮೂಲಕ ದೇಣಿಗೆ ಪಡೆದವು ಮತ್ತು ಅದರ ಮೊತ್ತವೆಷ್ಟು ಎಂದು. ಆದರೆ ಇದಕ್ಕೆ ಸ್ಪಂದಿಸಿದ 105 ಪಕ್ಷಗಳ ಉತ್ತರಗಳನ್ನು ಚುನಾವಣಾ ಆಯೋಗ ಅವರುಗಳ 'ಲಕೋಟೆಗಳನ್ನು ತೆರೆಯದೆಯೇ', ಅಂದರೆ ಪರಿಶೀಲಿಸದೆಯೇ ತನ್ನ 'ಮುಚ್ಚಿದ ಕೋಟೆ'ಯಲ್ಲಿಟ್ಟು ಅವನ್ನು ನ್ಯಾಯಾಲಯಕ್ಕೆ ಸಲ್ಲಿಸಿತೇ? ಏಕೆಂದರೆ ಕನಿಷ್ಟ 54 ಪಕ್ಷಗಳು ತಾವು ಯಾವುದೇ ಬಾಂಡನ್ನು ಪಡೆದಿಲ್ಲ ಎಂದು ಬರೆದಿವೆ. ಈ ಪತ್ರಗಳ ಪ್ರತಿಯನ್ನು ಈ ಪತ್ರಕರ್ತರಿಗೆ ತೋರಿಸಿದ ಆ ಪಕ್ಷಗಳ ಮುಖಂಡರು ತಮಗೆ ಓಂದು ಪೈಸೆಯೂ ದೇಣಿಗೆ ಸಿಕ್ಕಿಲ್ಲ ಎಂದು ಸ್ಪಷ್ಟಪಡಿಸಿದರು. ಕೆಲವು ಪಕ್ಷಗಳಿಗಂತೂ ಚುನಾವಣಾ ಬಾಂಡ್ ಎಂದರೇನು ಎಂದೂ ತಿಳಿದಿರಲಿಲ್ಲ ಎಂಬುದು ಈ ತನಿಖೆಗಳಿಂದ ಗೊತ್ತಾಗಿರುವ ಸಂಗತಿ.

ನೋಟುರದ್ಧತಿಯ 'ಮಾಸ್ಟರ್‌ಸ್ಟ್ರೋಕ್' ನಂತರವೂ ಖೋಟಾ ನೋಟುಗಳ ಸಂಖ್ಯೆ ಇಳಿದಿಲ್ಲ–ಹೆಚ್ಚಿದೆ


ಕಪ್ಪು ಹಣ ಹೊರತೆಗೆಯುವದಲ್ಲದೆ, ಖೋಟಾ ನೋಟುಗಳ ಹಾವಳಿಯನ್ನು ತಡೆಯುವುದು ಕೂಡ 2016ರಲ್ಲಿ ತಂದ, ಪ್ರಧಾನಿಗಳ 'ಮಾಸ್ಟರ್ ಸ್ಟ್ರೋಕ' ಎನ್ನಲಾದ ನೋಟುರದ್ಧತಿಯ ಒಂದು ಉದ್ದೇಶವಾಗಿತ್ತು.

ಆದರೆ ಐದು ವರ್ಷಗಳ ನಂತರ 2021–22ರಲ್ಲಿ ಖೋಟಾ 500 ರೂ. ನೋಟುಗಳ ಸಂಖ್ಯೆ 2020–21ಕ್ಕೆ ಹೋಲಿಸಿದರೆ ದ್ವಿಗುಣಗೊಂಡಿದೆ(101.93%). 2000ರೂ. ಖೋಟಾ ನೋಟುಗಳಲ್ಲಿಯೂ 54.63% ಏರಿಕೆಯಾಗಿದೆ. ಒಟ್ಟು ಖೋಟಾ ನೋಟುಗಳಲ್ಲಾದ ಏರಿಕೆ 10.71%. ಅಂದರೆ ನೋಟು ರದ್ಧತಿಯ ನಂತರ ಹೊಸದಾಗಿ ತಂದ 500ರೂ. ಮತ್ತು 2000ರೂ. ನೋಟುಗಳಲ್ಲೇ ಇದು ಅತಿ ಹೆಚ್ಚು.

ನೋಟು ರದ್ಧತಿಯ ಮರು ವರ್ಷವೇ ಹೊಸದಾಗಿ ತಂದ 500ರೂ. ನೋಟುಗಳಲ್ಲಿ ಖೋಟಾ ನೋಟುಗಳ ಸಂಖ್ಯೆ 9892, ಇದು ಪ್ರತಿವರ್ಷವೂ ಏರುತ್ತಲೇ ಬಂದಿದೆ. 2018–19ರಲ್ಲಿ ದುಪ್ಪಟ್ಟಿಗಿಂತಲೂ ಹೆಚ್ಚು, 2019–20ರಲ್ಲಿ 2021–22ರಲ್ಲಿ 37%ದಷ್ಟು, 2020–21ರಲ್ಲಿ 31%, 2021–22ರಲ್ಲಿ ಮತ್ತೆ ದುಪ್ಪಟ್ಟಿಗಿಂತಲೂ ಹೆಚ್ಚಾಗಿ 79,669ಕ್ಕೆ ನೆಗೆದಿದೆ, ಅಂದರೆ 5ವರ್ಷಗಳಲ್ಲಿ ಸುಮಾರು 8 ಪಟ್ಟಾಗಿದೆ. (ಈ ಕೆಳಗಿರುವ ತಖ್ತೆ ನೋಡಿ).

2020ರಲ್ಲಿ ಖೋಟಾ ನೋಟು ಪ್ರಕರಣದಲ್ಲಿ ಸಿಕ್ಕಿಬಿದ್ದವರಲ್ಲಿ ಅರ್ಧಕಿಂತಲೂ ಹೆಚ್ಚು ಕೇಸುಗಳಲ್ಲಿ ಆರೋಪ ಪಟ್ಟಿಯನ್ನೇ ಹಾಕಿರಲಿಲ್ಲ, 75% ಕ್ಕಿಂತ ಹೆಚ್ಚು ಕೇಸುಗಳಲ್ಲಿ ತನಿಖೆ ಇನ್ನೂ ಬಾಕಿಯಿತ್ತು. ಕೇವಲ 30% ಕೇಸುಗಳಲ್ಲಿ ಮಾತ್ರ ಶಿಕ್ಷೆಯಾಗಿದೆ.

ವರ್ಷವಾರು ಖೋಟಾ ನೋಟುಗಳ ಸಂಖ್ಯೆ



ಈಗ ಆಳುವ ಪಕ್ಷದಿಂದಲೇ ಸ್ವಂತ 'ದ್ವೇಷ ಭಾಷಣ ದೋಷಿ'ಗಳ ಪಟ್ಟಿ?



ಆಳುವ ಪಕ್ಷ ತನ್ನ ಪ್ರಮುಖ ವಕ್ತಾರರುಗಳಾದ ನೂಪುರ್ ಶರ್ಮ ಮತ್ತು ನವೀನ್ ಕುಮಾರ್ ಜಿಂದಾಲ್‌ರವರ ಹೇಳಿಕೆಗಳಿಗೆ ವ್ಯಕ್ತಗೊಂಡ ಅಂತರಾಷ್ಟ್ರೀಯ ಆಕ್ರೋಶದಿಂದಾಗಿ 'ಶಿಸ್ತು ಕ್ರಮ' ಕೈಗೊಳ್ಳಲೇ ಬೇಕಾಗಿ ಬಂದ ನಂತರ ತನ್ನದೇ ಒಂದು ಆಂತರಿಕ 'ದ್ವೇಷಭಾಷಣ ದೋಷಿ'ಗಳ ಪಟ್ಟಿಯನ್ನು ತಯಾರಿಸಿದೆ ಎಂದು ವರದಿಯಾಗಿದೆ(ಸಬ್‌ರಂಗ್ ಇಂಡಿಯ, ಜೂನ್8). ತನ್ನ 'ಐಟಿ ಎಕ್ಸ್‌ಪರ್ಟ್'ಗಳ ನೆರವಿನಿಂದ ಸಪ್ಟಂಬರ್ 2014ರಿಂದ ಕಳೆದ ಎಂಟು ವರ್ಷಗಳಲ್ಲಿ ಇವರುಗಳ ಹೇಳಿಕೆಗಳನ್ನು ಪರಿಶೀಲಿಸಿ ಈ ಪಟ್ಟಿಯನ್ನು ತಯಾರಿಸಲಾಗಿದೆಯಂತೆ. ಇವುಗಳಲ್ಲಿ 5200 ಹೇಳಿಕೆಗಳು ಅನಗತ್ಯವಾಗಿದ್ದವಂತೆ ಮತ್ತು 2700 ಹೇಳಿಕೆಗಳು ಸಂವೇದನಾಶೂನ್ಯ ರೀತಿಯಲ್ಲಿದ್ದವಂತೆ. ಇದರ ಆಧಾರದಲ್ಲಿ ಧಾರ್ಮಿಕ ಭಾವನೆಗಳನ್ನು ನೋಯಿಸಿದ 38 ಮುಖಂಡರುಗಳ ಪಟ್ಟಿಯನ್ನು ತಯಾರಿಸಿದೆ, ಇದರಲ್ಲಿ 27 ಮಂದಿ ಚುನಾಯಿತ ಮುಖಂಡರುಗಳು ಎನ್ನಲಾಗಿದೆ. ಇವರಿಗೂ 'ಫ್ರಿಂಜ್ ಎಲಿಮೆಂಟ್ಸ್' ಎಂಬ ಹಣೆಪಟ್ಟಿ ಅಥವ ಕೊರಳ ಬ್ಯಾಡ್ಜ್ ಇದೆಯೇ ತಿಳಿದಿಲ್ಲ.

ಈ 'ದೋಷಿ'ಗಳ ಪಟ್ಟಿಯಲ್ಲಿ ಎಲ್ಲರ ಹೆಸರುಗಳು ಇನ್ನೂ ಸಿಕ್ಕಿಲ್ಲ. ಮಾಧ್ಯಮಗಳಲ್ಲಿ ಹರಿದಾಡುತ್ತಿರುವ ಇಂತವರ 11 ಸಂಭಾವ್ಯ ಹೆಸರುಗಳನ್ನು 'ಸಬ್‌ರಂಗ್' ಪಟ್ಟಿ ಮಾಡಿದೆ. ಅದರಲ್ಲಿ ಮೂರು ಹೆಸರುಗಳು ಕರ್ನಾಟಕದವು ಎಂಬುದು ಗಮನಾರ್ಹ–ಆಶ್ಚರ್ಯ ಹುಟ್ಟಿಸುವ ಹೆಸರುಗಳೇನೂ ಅಲ್ಲ. ಇವರಲ್ಲಿ ಇಬ್ಬರು ಮಾಜಿ ಮತ್ತು ಹಾಲಿ ಕೇಂದ್ರ ಮಂತ್ರಿಗಳು ಮತ್ತು ಒಬ್ಬರು ಹಾಲಿ ಸಂಸದ. ಇನ್ನಷ್ಟು ಹೆಸರುಗಳು ಬರಬಹುದು ಎಂದು ನಿರೀಕ್ಷಿಸಬಹುದು.



ನವ-ಉದಾರವಾದದಲ್ಲಿ ಹಣದುಬ್ಬರ- ತಡೆ ಯಾರ ಕೈಯಲ್ಲಿ?

ಹಣದುಬ್ಬರವನ್ನು ಎದುರಿಸುವ ಒಂದು ಸಾಧನವಾಗಿ ಬಡ್ಡಿ ದರಗಳನ್ನು ಹೆಚ್ಚಿಸುವ ವಿವೇಕದ ಬಗ್ಗೆ ಬಹಳಷ್ಟು ಚರ್ಚೆ ನಡೆಯುತ್ತಿದೆ. ಈ ಚರ್ಚೆಯು ಸಾಮಾನ್ಯವಾಗಿ ನವ-ಉದಾರವಾದಿ ಸನ್ನಿವೇಶವನ್ನು ಭಾವಿಸಿಕೊಳ್ಳುತ್ತದೆ ಮತ್ತು ನಿರುದ್ಯೋಗ ಹಾಗೂ ಹಣದುಬ್ಬರ ಇವುಗಳ ನಡುವೆ ಯಾವುದಕ್ಕೆ ಎಷ್ಟು ಪ್ರಾಶಸ್ತ್ಯ ಕೊಡಬೇಕು ಎಂದು ತಿಳಿಯಲು ಯಾವ ನಿರ್ದಿಷ್ಟ ಅಂಶವನ್ನು ಆಯ್ಕೆ ಮಾಡಬೇಕು ಎಂಬುದರ ಬಗ್ಗೆ ನಿಲುವುಗಳನ್ನು ನಂತರ ತೆಗೆದುಕೊಳ್ಳುತ್ತದೆ. ಆದರೆ, ನವ-ಉದಾರವಾದದ ಸನ್ನಿವೇಶದಲ್ಲಿ ಈ ಪ್ರಾಶಸ್ತ್ಯದ ಅಂಶವು ಉದ್ಭವವಾಗುವುದೇ, ಇತರ ಸಾಧನಗಳನ್ನು ಸರ್ಕಾರದ ಕೈಯಿಂದ ಕಿತ್ತುಕೊಳ್ಳುವುದರಿಂದಾಗಿ. ಹಾಗಾಗಿ, ವಿಶ್ವದ ಪ್ರತಿಯೊಂದು ದೇಶದ, ಅಂದರೆ ಇಡೀ ವಿಶ್ವದ ಅರ್ಥವ್ಯವಸ್ಥೆಯಲ್ಲಿ ಉತ್ಪಾದನೆಯ ಮತ್ತು ಉದ್ಯೋಗದ ಮಟ್ಟವನ್ನು ಕೆಲವೇ ಅಮೆರಿಕನ್ ಜೂಜುಕೋರರ ಒಂದು ಗುಂಪು ನಿರ್ಧರಿಸುವ ಪರಿಸ್ಥಿತಿ ಉಂಟಾಗಿದೆ.. ಇಲ್ಲಿರುವ ಒಟ್ಟು ಅಂಶವೆಂದರೆ, ಇಂತಹ ಪರಿಸ್ಥಿತಿಯನ್ನು ಸಂಪೂರ್ಣವಾಗಿ ತಪ್ಪಿಸಬೇಕು ಎಂದಾದರೆ, ಅದು ನವ-ಉದಾರವಾದಿ ಸನ್ನಿವೇಶವನ್ನು ಮೀರುವ ಮೂಲಕವೇ ಆಗಬೇಕಾಗುತ್ತದೆ. ಆದರೆ, ಹಣದುಬ್ಬರದ ನಿಯಂತ್ರಣದ ಚರ್ಚೆಯಲ್ಲಿ ಈ ಅಂಶವು ಕಂಡುಬರುವುದೇ ವಿರಳ.


ಪ್ರೊ.ಪ್ರಭಾತ್ ಪಟ್ನಾಯಕ್ ಅನು: ಕೆ.ಎಂ. ನಾಗರಾಜ್

ಕೊರೊನಾ ಪಿಡುಗಿನಿಂದ ಪರಿಣಾಮದಿಂದ ಇನ್ನೂ ಚೇತರಿಸಿಕೊಳ್ಳದ ಜಾಗತಿಕ ಅರ್ಥವ್ಯವಸ್ಥೆಯಲ್ಲಿ ತಡೆಬಡೆ ಇಲ್ಲದೆ ಹಬ್ಬುತ್ತಿರುವ ಪ್ರಸ್ತುತ ಹಣದುಬ್ಬರವನ್ನು ಎದುರಿಸುವ ಒಂದು ಸಾಧನವಾಗಿ ವಿಶ್ವದ ಎಲ್ಲ ಬಂಡವಾಳಶಾಹಿ ದೇಶಗಳ ಕೇಂದ್ರ ಬ್ಯಾಂಕುಗಳೂ ಬಡ್ಡಿ ದರಗಳನ್ನು ಹೆಚ್ಚಿಸುತ್ತಿವೆ ಅಥವಾ ಹೆಚ್ಚಿಸಲು ಹೊರಟಿವೆ. ಈ ಕ್ರಮವು ಅರ್ಥವ್ಯವಸ್ಥೆಯನ್ನು ಅಂತಿಮವಾಗಿ ಸ್ಥಗಿತತೆಯತ್ತ ಮತ್ತು ಹೆಚ್ಚಿನ ಮಟ್ಟದ ನಿರುದ್ಯೋಗದತ್ತ ತಳ್ಳುವುದು ಖಚಿತ.

ನಿಜ, ಎಲ್ಲ ದೇಶಗಳ ಕೇಂದ್ರ ಬ್ಯಾಂಕುಗಳಿಗೂ ಬಡ್ಡಿದರ ಏರಿಕೆಯ ವಿಷಯದಲ್ಲಿ ಒಂದು ಮಾನದಂಡವನ್ನು ನಿಗದಿಪಡಿಸುವ ಅಮೆರಿಕಾದ ಫೆಡರಲ್ ರಿಸರ್ವ್ ಬೋರ್ಡ್ ಮಂಡಿಸುವ ವಾದವೇ ಬೇರೆ. ತಾನು ನಿರ್ಣಯಿಸುವ ಬಡ್ಡಿ ದರ ಹೆಚ್ಚಳವು ನಿಜ ಅರ್ಥವ್ಯವಸ್ಥೆಯ ಮೇಲೆ ಬೀರುವ ಪರಿಣಾಮವು ನಗಣ್ಯ ಅಥವಾ ಹೆಚ್ಚೆಂದರೆ ತಾತ್ಕಾಲಿಕವಾಗಿ ಅಲ್ಪ ಸ್ವಲ್ಪ ಪರಿಣಾಮ ಬೀರಬಹುದು ಮತ್ತು ಬಡ್ಡಿ ದರ ಏರಿಕೆಯಿಂದಾಗಿ ಅರ್ಥವ್ಯವಸ್ಥೆಯ ಚೇತರಿಕೆಗೆ ಧಕ್ಕೆಯಾಗುವುದಿಲ್ಲ ಎಂದು ಅದು ವಾದಿಸುತ್ತದೆ. ಆದರೆ, ಈ ವಾದವು ಮೂಲಭೂತವಾಗಿ ದೋಷಪೂರಿತವಾದ ತರ್ಕವನ್ನು ಆಧರಿಸಿದೆ. ಫೆಡರಲ್ ರಿಸರ್ವ್ ಬೋರ್ಡ್‌ನ ತರ್ಕವು ಈ ಕೆಳಗಿನಂತಿದೆ.

ಅಮೆರಿಕದ ಇಂದಿನ ಹಣದುಬ್ಬರವು ಹಣ-ವೇತನದ ಒತ್ತಡದಿಂದ (ವೇತನಗಳ ಹೆಚ್ಚಳದಿಂದ) ಉಂಟಾಗಿದೆ. ಹಣದುಬ್ಬರವಾಗುತ್ತದೆ ಎಂದು ಜನರು ನಿರೀಕ್ಷಿಸುವುದರಿಂದಲೇ ಈ ಹಣದುಬ್ಬರ ಉದ್ಭವಿಸುತ್ತದೆ. ಬಡ್ಡಿ ದರ ಏರಿಕೆಯ ಕ್ರಮವು ಜನರನ್ನು ಹಣದುಬ್ಬರದ ಇಳಿಕೆಯನ್ನು ನಿರೀಕ್ಷಿಸುವಂತೆ ಮಾಡುತ್ತದೆ ಮತ್ತು ಹಣ-ವೇತನದ ತಳ್ಳುವಿಕೆಯಿಂದಾದ ಹಣದುಬ್ಬರವನ್ನು ಕೊನೆಗೊಳಿಸುತ್ತದೆ. ಹಾಗಾಗಿ, ಹಣದುಬ್ಬರ ನಿಜಕ್ಕೂ ಇಳಿಯುತ್ತದೆ. ಈ ಎಲ್ಲ ಹೊಂದಾಣಿಕೆಗಳೂ ನಿರೀಕ್ಷಿತ ಬೆಲೆಗಳ ವಲಯಕ್ಕೆ ಸೀಮಿತಗೊಳ್ಳುವುದರಿಂದ ಮತ್ತು ಆ ಮಾರ್ಗವಾಗಿ ವಾಸ್ತವಿಕ ಬೆಲೆಗಳ ವಲಯವನ್ನು ಪ್ರಭಾವಿಸುವುದರಿಂದ, ಉತ್ಪಾದನೆ ಮತ್ತು ಉದ್ಯೋಗದ ನಿಜ ಅರ್ಥವ್ಯವಸ್ಥೆಯು ಹಿಂಜರಿತಕ್ಕೊಳಗಾಗುವುದಿಲ್ಲ ಎಂದು ಅಮೆರಿಕಾದ ಫೆಡ್ ಅಧ್ಯಕ್ಷ ಜೆರೋಮ್ ಪೊವೆಲ್ ವಾದಿಸುತ್ತಾರೆ. ಆದರೆ, ಒಂದು ಸರಳ ಸಂಗತಿಯಿಂದಾಗಿ ಈ ಇಡೀ ವಾದವೇ ತಪ್ಪಾಗಿದೆ: ಹಣದುಬ್ಬರದ ಮಟ್ಟಕ್ಕೆ ಹೋಲಿಸಿದರೆ ಕಾರ್ಮಿಕರ ಹಣ-ವೇತನಗಳು ಕೆಳ ಮಟ್ಟದಲ್ಲಿರುತ್ತವೆ. ಹಾಗಾಗಿ, ಅವರ ನಿಜ ವೇತನಗಳು ಇಳಿಕೆಯಾಗುತ್ತವೆ. ಆದ್ದರಿಂದ, ಅಮೆರಿಕದಲ್ಲಿ ಹಣದುಬ್ಬರವು ಹಣ-ವೇತನ ತಳ್ಳುವಿಕೆಯಿಂದಾಗಿ ಉಂಟಾಗಿದೆ ಎಂದು ವಾದಿಸುವುದು ಒಂದು ಭಾರೀ ಪ್ರಮಾದವಾಗುತ್ತದೆ.

ಅದೇ ರೀತಿಯಲ್ಲಿ ಹಣದುಬ್ಬರದ ಬಗ್ಗೆ ನೀಡಲಾದ ಮತ್ತೊಂದು ಸಾಮಾನ್ಯ ವಿವರಣೆಯೆಂದರೆ, ರಷ್ಯಾ-ಉಕ್ರೇನ್ ಯುದ್ಧವು ವಿಶ್ವ ಮಾರುಕಟ್ಟೆಯಲ್ಲಿ



ಅನೇಕ ಸರಕುಗಳ, ವಿಶೇಷವಾಗಿ ತೈಲ ಮತ್ತು ಆಹಾರ ಧಾನ್ಯಗಳ ಕೊರತೆಯನ್ನು ಸೃಷ್ಟಿಸಿದೆ ಎಂಬುದು. ಈ ವಿವರಣೆಯೂ ಸಹ ಒಪ್ಪಲಾಗದ್ದು: ಯುದ್ಧವು ಅನೇಕ ವಸ್ತುಗಳ ಅಭಾವವನ್ನು ಉಂಟುಮಾಡಬಹುದಾದರೂ, ಈವರೆಗೂ ಅಂತಹ ಕೊರತೆ ಕಾಣಿಸಿಕೊಂಡಿಲ್ಲ. ಯುದ್ಧದಿಂದಾಗಿ ವಿಶ್ವ ಮಾರುಕಟ್ಟೆಯಲ್ಲಿ ವಾಸ್ತವವಾಗಿ ಸರಕುಗಳ ಪೂರೈಕೆಯಲ್ಲಿ ಯಾವುದೇ ಇಂತಹ ಕುಸಿತದ ಬಗ್ಗೆ ಪುರಾವೆಗಳಿಲ್ಲ. ಆದ್ದರಿಂದ, ಅಮೆರಿಕದ ಸಂದರ್ಭದಲ್ಲಿ ಹಣದುಬ್ಬರವನ್ನು ಯುದ್ಧ-ಪ್ರೇರಿತ ಅಭಾವವೆಂದು ಆರೋಪಿಸುವುದು ಖಂಡಿತವಾಗಿಯೂ ತಪ್ಪು.

ಜೂಜುಕೋರ ನಡವಳಿಕೆಯ ಪರಿಣಾಮ-ಅತಾರ್ಕಿಕತೆಯ ಪರಾಕಾಷ್ಠೆ

ಅಮೆರಿಕದಲ್ಲಿ ಹಣದುಬ್ಬರವಾಗುತ್ತಿರುವುದಕ್ಕೆ ಕಾರಣವೆಂದರೆ, ಲಾಭಾಂಶವು ಸ್ವಾಯತ್ತವಾಗಿ ಏರುತ್ತಿರುವುದರಿಂದಾಗಿ ಸರಕು-ಸಾಮಗ್ರಿಗಳ ಬೆಲೆಗಳು ವೇತನಕ್ಕಿಂತ ವೇಗವಾಗಿ ಏರುತ್ತಿವೆ. ಕೆಲವು ಸರಕುಗಳ ಕೊರತೆ ಉಂಟಾದಾಗ ಲಾಭದ ಅಂತರ ಹೆಚ್ಚಾಗುತ್ತದೆ ಎಂದು ಭಾವಿಸುವುದು ಸಾಮಾನ್ಯ. ಆದರೆ, ಇಂದಿನ ಸಂದರ್ಭದಲ್ಲಿ ಹಣದುಬ್ಬರದ ಒತ್ತಡಗಳಿಗೆ ಒಳಗಾಗಿರುವ ಸರಕುಗಳಲ್ಲಿ ಕೊರತೆ ಇಲ್ಲವೇ ಇಲ್ಲ ಎನ್ನಬಹುದು. ಕೊರೊನಾದ ಕಾರಣದಿಂದಾಗಿ ಪೂರೈಕೆಯಲ್ಲಿ ಉದ್ಭವವಾದ ಕೆಲವು ಅಡಚಣೆಗಳಿಂದಾಗಿ ತಕ್ಷಣವೇ ಕೊರತೆಯಾದ ಸರಕುಗಳ ವಿಷಯದಲ್ಲಿಯೂ ಸಹ, ಬೆಲೆ ಏರಿಕೆಯು ಅಗತ್ಯಕ್ಕಿಂತಲೂ ಹೆಚ್ಚಾಗಿದೆ ಮಾತ್ರವಲ್ಲ ಅದು ನಿರಂತರವಾಗುತ್ತಿದೆ. ಈ ವಿಷಯವನ್ನು ಬೇರೆ ಮಾತುಗಳಲ್ಲಿ ಹೇಳುವುದಾದರೆ, ಅಮೆರಿಕದಲ್ಲಿ ಇಂದಿನ ಹಣದುಬ್ಬರವನ್ನು ಮೇಲೆ ತಳ್ಳುತ್ತಿರುವ ಅಂಶವೆಂದರೆ ಅದು ಸ್ವಾಯತ್ತವಾಗುತ್ತಿರುವ ಲಾಭದ ಪ್ರಮಾಣದ ಹೆಚ್ಚಳವೇ. ಇದು ಜೂಜುಕೋರ ನಡವಳಿಕೆಯನ್ನು ಸೂಚಿಸುತ್ತದೆ.

ಈ ಜೂಜುಕೋರ (ಅಥವಾ ಕುರುಡು ಲಾಭ ಬೇಟೆಗಾರಿಕೆಯ) ಪ್ರವೃತ್ತಿಯು ಕೇವಲ ವ್ಯಾಪಾರಿಗಳಲ್ಲಿ ಮತ್ತು ಮಧ್ಯವರ್ತಿಗಳಲ್ಲಿ ಮಾತ್ರ ಇದೆ, ಉತ್ಪಾದಕರಲ್ಲಿ ಇಲ್ಲ ಎಂಬ ಭಾವನೆ ಸಾಮಾನ್ಯ. ಆದರೆ, ಈ ಭಾವನೆಯು ಆಧಾರ-ರಹಿತವಾದದ್ದು. ಏಕೆಂದರೆ, ಬಹುರಾಷ್ಟ್ರೀಯ ಕಂಪನಿಗಳೂ ಸಹ ತಮ್ಮ ಮಾರಾಟದ ಬೆಲೆಯನ್ನು ನಿಗದಿಪಡಿಸುವಾಗ ಈ ಕುರುಡು ಲಾಭದ ಪ್ರವೃತ್ತಿಯಲ್ಲಿ ತೊಡಗುತ್ತವೆ. ಹಾಗಾಗಿ, ಲಾಭಾನ್ವೇಷಣಾ-ಪ್ರೇರಿತ ಹಣದುಬ್ಬರವು ವಿಶ್ವದ ಅತಿದೊಡ್ಡ ಅರ್ಥವ್ಯವಸ್ಥೆಯನ್ನು ಬಾಧಿಸಲು ಕಾರಣವೆಂದರೆ, ಇಲ್ಲಿಯವರೆಗೂ ಅಮೆರಿಕ ಅನುಸರಿಸಿದ ಒಂದು ಅಸಾಧಾರಣ ರೀತಿಯ ಸುಲಭ ಹಣಕಾಸು ನೀತಿಯೇ. ಅಗಾಧ ಪ್ರಮಾಣದ ಸಾಲಗಳು ಅಮೆರಿಕದ ಅರ್ಥವ್ಯವಸ್ಥೆಗೆ ಲಭ್ಯವಾಗುವಂಥಹ ಸುಲಭ ಹಣಕಾಸು ನೀತಿಯನ್ನು("ಪರಿಮಾಣಾತ್ಮಕ ಸರಾಗಗೊಳಿಸುವಿಕೆ"-Quantitative easing), ಫೆಡರಲ್ ರಿಸರ್ವ್ ಅನುಸರಿಸಿತು. ಇದರಲ್ಲಿ ಅಲ್ಪಾವಧಿಯ ಮತ್ತು ದೀರ್ಘಾವಧಿಯ ಸಾಲಗಳ ಮೇಲಿನ ಬಡ್ಡಿಯ ದರವನ್ನು ಹತ್ತಿರ ಹತ್ತಿರ ಶೂನ್ಯ ಮಟ್ಟದಲ್ಲಿಡಲಾಗಿತ್ತು. ಹಾಗಾಗಿ, ಅಮೆರಿಕದ ಅರ್ಥವ್ಯವಸ್ಥೆಯು ಹಣದ ಸುಲಭ ಲಭ್ಯತೆಯಿಂದ ತುಳುಕಾಡುತ್ತಿತ್ತು. ಈ ಪರಿಸ್ಥಿತಿಯು ಸ್ವಾಯತ್ತ ಲಾಭಾಂಶ ಏರಿಕೆಯನ್ನು ಇನ್ನೂ ಮೇಲೆ ತಳ್ಳಲು ಅನುಕೂಲಕರವಾಗಿತ್ತು. ಇದುವೇ, ಉತ್ಪಾದನೆಯ ಮಟ್ಟವು ಪೂರ್ಣ ಸಾಮರ್ಥ್ಯವನ್ನು ತಲುಪುವ ಮೊದಲೇ ಹಣದುಬ್ಬರದ ರೂಪದಲ್ಲಿ ಪ್ರಕಟಗೊಂಡಿದೆ. ಇಷ್ಟೇ ಅಲ್ಲದೆ, ಈ ವಿತ್ತೀಯ ನೀತಿಯ ಅನುಸರಣೆಯಿಂದ ಉಂಟಾಗಿರುವ ಹಣದುಬ್ಬರದ ವಿರುದ್ಧ ಲಭ್ಯವಿರುವ ಒಂದೇ ಕ್ರಮವೆಂದರೆ, "ವಿತ್ತೀಯ ಮಿತವ್ಯಯ" ಪಾಲನೆ ಅಥವಾ ಈಗ ಸಂಭವಿಸುತ್ತಿರುವ ಬಡ್ಡಿ ದರಗಳ ಏರಿಕೆಯೇ. ಇವೆರಡೂ ಆರ್ಥಿಕ ಹಿಂಜರಿತವನ್ನು ಮತ್ತು ನಿರುದ್ಯೋಗವನ್ನು ಉಂಟುಮಾಡುವ ಕ್ರಮಗಳೇ.


ಈಗ ನಾವು ಸಮಸ್ಯೆಯ ಸಾರಾಂಶಕ್ಕೆ ಬರೋಣ. ಸಮಕಾಲೀನ ಬಂಡವಾಳಶಾಹಿಯ ಅಡಿಯಲ್ಲಿ ಆರ್ಥಿಕ ವ್ಯವಸ್ಥೆ ಹೇಗಿದೆಯೆಂದರೆ, ಅಮೆರಿಕಾದ ಬೆರಳೆಣಿಕೆಯಷ್ಟು ಮಂದಿ ಜೂಜುಕೋರರ ಲಾಭದಾಹಕ್ಕಾಗಿ, ಅಮೆರಿಕದಲ್ಲಿ ಸಾಮೂಹಿಕ ನಿರುದ್ಯೋಗವನ್ನು ಸೃಷ್ಟಿಸಬೇಕಾಗಿತ್ತು. ಇದೊಂದು ಅಸಂಬದ್ಧ ಅಂಶವೇ. ಆದರೆ ಈಗ ಇದೂ ಸಾಲದು ಎಂಬಂತೆ, ಇಡೀ ವಿಶ್ವದ ಅರ್ಥವ್ಯವಸ್ಥೆಯಲ್ಲೂ ಸಾಮೂಹಿಕ ನಿರುದ್ಯೋಗವನ್ನು ಸೃಷ್ಟಿಸಬೇಕಾಗುತ್ತದೆ. ವಿಶ್ವದ ಅರ್ಥವ್ಯವಸ್ಥೆಯ ಅಂಶ ಇಲ್ಲಿ ಉದ್ಭವಿಸುತ್ತದೆ, ಏಕೆಂದರೆ, ನವ-ಉದಾರವಾದದ ಅಡಿಯಲ್ಲಿ, ಬಂಡವಾಳವು ಅದರಲ್ಲೂ ವಿಶೇಷವಾಗಿ ಹಣಕಾಸು ಬಂಡವಾಳವು, ಜಾಗತಿಕವಾಗಿ ಹರಿದಾಡುತ್ತಿರುವುದರಿಂದ, ಅಮೆರಿಕದಲ್ಲಿ ಬಡ್ಡಿ ದರಗಳನ್ನು ಏರಿಸಿದಾಗ ವಿಶ್ವಾದ್ಯಂತವೂ ಬಡ್ಡಿದರಗಳನ್ನು ಏರಿಸಬೇಕಾಗುತ್ತದೆ. ಇಲ್ಲದಿದ್ದರೆ, ಬಲಶಾಲಿಯಲ್ಲದ ಅರ್ಥವ್ಯವಸ್ಥೆಗಳಿಂದ ಹಣಕಾಸು ಬಂಡವಾಳವು ಅಮೆರಿಕದತ್ತಲೇ ಹರಿಯುತ್ತದೆ ಮತ್ತು ಈ ಹೊರ ಹರಿವಿನ ಪರಿಣಾಮವಾಗಿ, ಡಾಲರ್ ಎದುರು ಈ ದೇಶಗಳ ಕರೆನ್ಸಿಗಳು ನಿರಂತರ ಅಪಮೌಲ್ಯಕ್ಕೆ ಒಳಗಾಗುತ್ತವೆ. ವಿಷಯವನ್ನು ಬೇರೆ ರೀತಿಯಲ್ಲಿ ಹೇಳುವುದಾದರೆ, ಅಮೆರಿಕಾದ ಕೆಲವರ ಜೂಜುಕೋರತನದಿಂದ ಸೃಷ್ಟಿಯಾದ ಸಮಸ್ಯೆಯನ್ನು ಇತರ ವಿಧಾನಗಳ ಮೂಲಕ ನೇರವಾಗಿ ನಿಭಾಯಿಸುವುದರ ಬದಲು, "ಉದಾರೀಕರಣದ" ಆಳ್ವಿಕೆಯಲ್ಲಿ, ವಿಶ್ವಾದ್ಯಂತ ಸಾಮೂಹಿಕ ನಿರುದ್ಯೋಗವನ್ನು ಸೃಷ್ಟಿಸುವ ಮೂಲಕ ನಿಭಾಯಿಸಲಾಗುತ್ತದೆ. ಇದು ಅತಾರ್ಕಿಕತೆಯ ಪರಾಕಾಷ್ಠೆಯೇ.

"ನಿಯಂತ್ರಕ ನೀತಿ"ಗಳ ಕಾಲದಲ್ಲಿ

ರಷ್ಯಾದ ಬೋಲ್ಷೆವಿಕ್ ಕ್ರಾಂತಿಯ ಹಿನ್ನೆಲೆಯಲ್ಲಿ ಮತ್ತು ಮಹಾ ಆರ್ಥಿಕ ಕುಸಿತದ ಸಂದರ್ಭದಲ್ಲಿ ಜಾನ್ ಮೇನಾರ್ಡ್ ಕೀನ್ಸ್ ಈ ಅತಾರ್ಕಿಕತೆಯ ಬಗ್ಗೆ ಕೂಲಂಕುಷವಾಗಿ ಅರಿತಿದ್ದರು. ಬಂಡವಾಳಶಾಹಿ ವ್ಯವಸ್ಥೆಯ ಸಂರಕ್ಷಣೆಯನ್ನು ಗುರಿಯಾಗಿ ಹೊಂದಿದ್ದ ಕೀನ್ಸ್, "ಹೂಡಿಕೆಯ ಸಾಮಾಜೀಕರಣವನ್ನು" ಪ್ರತಿಪಾದಿಸಿದ್ದರು. ಪ್ರಭುತ್ವದ ಈ ರೀತಿಯ ವಿತ್ತೀಯ ಮಧ್ಯಪ್ರವೇಶವೂ ಸಹ, ಒಂದು ಸೂಕ್ತವಾದ ಹಣ ನೀತಿಯು(monetary policy)ಎಷ್ಟು ಅಗತ್ಯವೋ ಅಷ್ಟೇ ಅಗತ್ಯವಾಗುತ್ತದೆ. ಇವೆರಡೂ ನೀತಿಗಳೂ ಇಡೀ ಸಮಾಜದ ಅಗತ್ಯಗಳಿಗೆ ಹಣಕಾಸು ಹಿತಾಸಕ್ತಿಗಳನ್ನು ಅಧೀನಗೊಳಿಸುವುದು ಅವಶ್ಯವಾಗುತ್ತದೆ.

ಇಂಥಹ ಒಂದು ಬೌದ್ಧಿಕ ವಾತಾವರಣದಲ್ಲಿ, ಯುದ್ಧಾನಂತರದಲ್ಲಿ ಹೊಸದಾಗಿ ವಿಮೋಚನೆಗೊಂಡ ಮೂರನೆಯ ಜಗತ್ತಿನ ಅನೇಕ ದೇಶಗಳು ನವ ನವೀನ ಹಣಕಾಸು ಸಂಸ್ಥೆಗಳನ್ನು ಸ್ಥಾಪಿಸಿದವು. ಈ ಸಂಸ್ಥೆಗಳು, ಸಾಮೂಹಿಕ ನಿರುದ್ಯೋಗವಷ್ಟೇ ಅಲ್ಲ, ಯಾವ ಚಟುವಟಿಕೆಯನ್ನೂ ಕಡಿತಗೊಳಿಸದ ರೀತಿಯಲ್ಲಿ ಜೂಜುಕೋರತನಕ್ಕೆ ನೇರವಾಗಿ ಕಡಿವಾಣ ಹಾಕಿದವು. ಉದಾಹರಣೆಗೆ, ಭಾರತದಲ್ಲಿ ಹೂಡಿಕೆಗಾಗಿ ದೀರ್ಘಾವಧಿ ಸಾಲಗಳನ್ನು ಕೊಡುವ ಅನೇಕ ವಿಶೇಷ ಹಣಕಾಸು ಸಂಸ್ಥೆಗಳನ್ನು ಸ್ಥಾಪಿಸಲಾಯಿತು. ಈ ಸಂಸ್ಥೆಗಳು, ಸಾಮಾನ್ಯವಾಗಿ ಬ್ಯಾಂಕುಗಳು ಅಲ್ಪಾವಧಿ ಸಾಲಗಳ ಮೇಲೆ ವಿಧಿಸುವ ಬಡ್ಡಿ ದರಗಳಿಗಿಂತ ಕಡಿಮೆ ಬಡ್ಡಿ ದರದಲ್ಲಿ ಸಾಲಗಳನ್ನು ಒದಗಿಸುತ್ತಿದ್ದವು. ಜೂಜುಕೋರ ಚಟುವಟಿಕೆಗಳನ್ನು ನಿಗ್ರಹಿಸುವ ಸಲುವಾಗಿ ಬ್ಯಾಂಕುಗಳು ಹಲವಾರು ನಿರ್ದಿಷ್ಟ ಸಾಧನಗಳನ್ನು ಬಳಸುತ್ತಿದ್ದವು. ಜೂಜುಕೋರತನಕ್ಕೆ ಗುರಿಯಾದ ನಿರ್ದಿಷ್ಟ ವಲಯಗಳಿಗೆ (ಉದಾಹರಣೆಗೆ, ಗೃಹ ಬಳಕೆ, ರಿಯಲ್ ಎಸ್ಟೇಟ್, ವ್ಯಾಪಾರ, ಷೇರು ಮಾರುಕಟ್ಟೆ ಮುಂತಾದ ವಲಯಗಳಿಗೆ) ಸಾಲದ ಹರಿವನ್ನು ನೇರವಾಗಿ ನಿರ್ಬಂಧಿಸಲಾಗಿತ್ತು. ಇವನ್ನು "ಆಯ್ದ ಸಾಲ ನಿಯಂತ್ರಣಗಳು" (selective credit

ಪುಟ 15 ಕ್ಕೆ



"ಪರವಾಗಿಲ್ಲ ಬಿಡು.. .. ಇದು ಅವನಿಗೆ ಹೊಡೆಯಲು, ನಿನಗಲ್ಲ"
(ವ್ಯಂಗ್ಯಚಿತ್ರ: ಅಲೋಕ್ ನಿರಂತರ್)

ಥ್ರಿಕ್ಕಕಾರ ಉಪಚುನಾವಣೆಯಲ್ಲಿ ಯುಡಿಎಫ್‌ಗೆ ಹೆಚ್ಚಿನ ಬಹುಮತ ಎಡ–ವಿರೋಧಿ ಮತಗಳ ಕ್ರೋಢೀಕರಣದಿಂದಾಗಿ–ಸಿಪಿಐ(ಎಂ) ಕೇರಳ ರಾಜ್ಯ ಕಾರ್ಯದರ್ಶಿ ಮಂಡಳಿ

ಎಡ ವಿರೋಧಿ ಶಕ್ತಿಗಳನ್ನು ಒಗ್ಗೂಡಿಸಿ ಥ್ರಿಕ್ಕಕಾರ ಉಪಚುನಾವಣೆಯಲ್ಲಿ ಯುಡಿಎಫ್ ಗೆಲುವು ಸಾಧಿಸಲು ಮತ್ತು ಬಹುಮತವನ್ನು ಹೆಚ್ಚಿಸಿಕೊಳ್ಳಲು ಸಾಧ್ಯವಾಗಿದೆ. ಕಳೆದ ವಿಧಾನಸಭಾ ಚುನಾವಣೆಯಲ್ಲಿ 45,510 ಮತಗಳನ್ನು ಪಡೆದಿದ್ದ ಎಲ್‌ಡಿಎಫ್ ಮತಗಳ ಸಂಖ್ಯೆ ಈ ಉಪಚುನಾವಣೆಯಲ್ಲಿ 47,754ಕ್ಕೆ ಏರಿಕೆಯಾಗಿದೆ. ಕಳೆದ ವಿಧಾನಸಭಾ ಚುನಾವಣೆಗೆ ಹೋಲಿಸಿದರೆ ಉಪಚುನಾವಣೆಯಲ್ಲಿ ಎಲ್‌ಡಿಎಫ್ 2244 ಹೆಚ್ಚು ಮತಗಳನ್ನು ಗಳಿಸಿದೆ. ಎಲ್‌ಡಿಎಫ್‌ನ ಮತಗಳ ಪ್ರಮಾಣವೂ ಶೇ.33.32ರಿಂದ ಶೇ.35.28ಕ್ಕೆ ಏರಿಕೆಯಾಗಿದೆ. ಈ ಕ್ಷೇತ್ರದಲ್ಲಿ ಎಲ್.ಡಿ.ಎಫ್.ನ ಜನಬೆಂಬಲ ಮತ್ತು ಮತ ನೆಲೆಗೆ ಧಕ್ಕೆಯಾಗಿಲ್ಲ ಎಂಬುದನ್ನು ಈ ಅಂಕಿ ಅಂಶಗಳು ತೋರಿಸುತ್ತವೆ ಎಂದು ಸಿಪಿಐ(ಎಂ) ಕೇರಳ ರಾಜ್ಯ ಕಾರ್ಯದರ್ಶಿ ಮಂಡಳಿ ಹೇಳಿದೆ.

ಬಿಜೆಪಿಯ ಮತ್ತು ಟ್ವೆಂಟಿ20 ಯಂತಹ ಗುಂಪುಗಳ ಮತಗಳು ಹರಿದು ಬಂದಿದ್ದರಿಂದ ಯುಡಿಎಫ್‌ನ ಮತಗಳಿಕೆ 59,839 ರಿಂದ 72,770 ಕ್ಕೆ ಏರಿತು. 2016ರ ವಿಧಾನಸಭೆ ಚುನಾವಣೆಯಲ್ಲಿ ಬಿಜೆಪಿ 21,249 ಮತ್ತು 2021ರ ವಿಧಾನಸಭೆ ಚುನಾವಣೆಯಲ್ಲಿ 15,483 ಮತಗಳನ್ನು ಪಡೆದಿದ್ದು, ಬಿಜೆಪಿ ಮತಗಳು ಯುಡಿಎಫ್ ಪರವಾಗಿ ಹೋಗುತ್ತಿವೆ ಎಂಬ ಅಂಶವನ್ನು ಸಾಬೀತುಪಡಿಸಿದೆ – ಈ ಪ್ರವೃತ್ತಿ ಉಪಚುನಾವಣೆಯಲ್ಲಿಯೂ ಕಂಡುಬಂದಿದೆ.

ಕಳೆದ ಚುನಾವಣೆಯಲ್ಲಿ ಟ್ವೆಂಟಿ20ಗೆ 13,897 ಮತಗಳು ಬಂದಿದ್ದು, ಈ ಚುನಾವಣೆಯಲ್ಲಿ ಅದು ಅಭ್ಯರ್ಥಿಯನ್ನೂ ಹಾಕಿರಲಿಲ್ಲ. ಕಳೆದ ವಿಧಾನಸಭಾ ಚುನಾವಣೆಯಲ್ಲಿ 14,329 ಮತಗಳ ಬಹುಮತ ಪಡೆದಿದ್ದ ಯುಡಿಎಫ್ ಉಪಚುನಾವಣೆಯಲ್ಲಿ ತನ್ನ ಬಹುಮತವನ್ನು 25,016ಕ್ಕೆ ಹೆಚ್ಚಿಸಿಕೊಳ್ಳಲು ಇದು ಮತ್ತೊಂದು ಕಾರಣವಾಗಿದೆ ಎಂದಿರುವ ಕಾರ್ಯದರ್ಶಿಮಂಡಳಿ ತೀರ್ಪನ್ನು ಒಪ್ಪಿಕೊಂಡಿರುವುದಾಗಿ ಹೇಳುತ್ತ ಯುಡಿಎಫ್‌ನೊಂದಿಗೆ ಯಾವಾಗಲೂ ನಿಂತಿರುವ ಕ್ಷೇತ್ರದಲ್ಲಿ ತನ್ನ ಉಪಚುನಾವಣೆ ಚಟುವಟಿಕೆಗಳನ್ನು ಪರಿಶೀಲಿಸುವುದಾಗಿ ಹೇಳಿದೆ.

ಪ್ರಜ್ಞೆಯ ಕೊರತೆಯ ನಡುವೆಯೇ ಮತ್ತೊಂದು ಪರಿಸರ ದಿನ...... ಪುಟ 6 ರಿಂದ

ಮಾರುಕಟ್ಟೆ ಬಳಕೆಯ ವಸ್ತುಗಳಂತೆ ಪೋಲು ಮಾಡುತ್ತಿರುವುದನ್ನು ಮತ್ತು ನಗರಗಳ ಐಷಾರಾಮಿ ಬದುಕಿನ ಕಚ್ಚಾವಸ್ತುಗಳಂತೆ ಬಳಸುತ್ತಿರುವುದನ್ನು ಸದ್ದು ಮಾಡದೆ ಗಮನಿಸುತ್ತಲೇ ಇದ್ದೇವೆ. ಮೈಸೂರಿನ ಪ್ರತಿಷ್ಠಿತ ಚಾಮುಂಡಿ ಬೆಟ್ಟವೂ ಈ ಆಧುನಿಕತೆ, ಧಾರ್ಮಿಕತೆ ಮತ್ತು ಪ್ರವಾಸೋದ್ಯಮದ ವಾಣಿಜ್ಯ ಹಿತಾಸಕ್ತಿಗಳಿಗೆ ಬಲಿಯಾಗುತ್ತಿದ್ದು, ರೋಪ್‌ವೇ ನಿರ್ಮಿಸುವ ಮೂಲಕ ಅಲ್ಲಿನ ಜೈವವೈವಿಧ್ಯತೆಗೆ ಸಂಚಕಾರ ತರಲು ಎಲ್ಲ ಸಿದ್ಧತೆಗಳೂ ನಡೆದಿವೆ. ಕಲ್ಲಿದ್ದಲು ಗಣಿಗಾರಿಕೆಯಾಗಲೀ, ಅಣು ವಿದ್ಯುತ್ ಉತ್ಪಾದನೆಯಾಗಲೀ ಅಥವಾ ಬೃಹತ್ ಅಣೆಕಟ್ಟುಗಳೇ ಆಗಲಿ, ಅರಣ್ಯ ಸಂಪತ್ತಿನ ಸಮಾಧಿಯ ಮೇಲೆ ನಿರ್ಮಿತವಾಗುವ ಈ ಮಾರುಕಟ್ಟೆ ಸಾಮ್ರಾಜ್ಯಗಳನ್ನು ವಿರೋಧಿಸುವುದೂ ಸಹ "ದೇಶದ್ರೋಹ" ಅಥವಾ "ಅಭಿವೃದ್ಧಿ ವಿರೋಧ" ಎಂಬ ಹಣೆಪಟ್ಟಿಯನ್ನು ಹೊತ್ತು ಹೋರಾಟ ನಡೆಸಬೇಕಿದೆ.

ನಗರೀಕರಣ ಹೆಚ್ಚಾದಂತೆಲ್ಲಾ ಜನದಟ್ಟಣೆ ಮತ್ತು ವಾಹನದಟ್ಟಣೆಯೂ ಹೆಚ್ಚಾಗುತ್ತಿದ್ದು, ಆಧುನಿಕ ನಾಗರಿಕತೆಯಲ್ಲಿ ಈ ದಟ್ಟಣೆಯಿಂದುಂಟಾಗುವ ಪರಿಸರ ಮಾಲಿನ್ಯದ ಪರಿಜ್ಞಾನವೇ ಇಲ್ಲದಂತಾಗುತ್ತಿದೆ. ವಾಹನಗಳು ಉಗುಳುವ ಹೊಗೆ, ದಿನಕ್ಕೆ 20 ಗಂಟೆಗಳ ಕಾಲವಾದರೂ ವಾಹನಗಳಿಂದ ಉಂಟಾಗುವ ಶಬ್ದ ಮಾಲಿನ್ಯ, ನಗರೀಕೃತ ಜೀವನದಲ್ಲಿ ತ್ಯಾಜ್ಯ ನಿರ್ವಹಣೆಯನ್ನು ಮತ್ತೊಬ್ಬರ ಹೊಣೆಯನ್ನಾಗಿ ಮಾಡಿರುವ ಆಧುನಿಕ ಮಾನವ ಸಮಾಜದ ಬೇಜವಾಬ್ದಾರಿ ನಡವಳಿಕೆ ಇವೆಲ್ಲವೂ ನಮ್ಮ ಸುತ್ತಲಿನ ಪರಿಸರವನ್ನೇ ಗೊಬ್ಬರದ ಗುಂಡಿಗಳನ್ನಾಗಿ ಮಾಡುತ್ತಿದೆ. ನಗರ ಮತ್ತು ಪಟ್ಟಣ ಪ್ರದೇಶಗಳಲ್ಲಿ ತ್ಯಾಜ್ಯ ಸಂಗ್ರಹಣೆ, ಶೇಖರಣೆ, ಸಂಸ್ಕರಣೆ ಮತ್ತು ವಿಲೇವಾರಿಗೆ ಅಗತ್ಯ ಕ್ರಮಗಳನ್ನು ಕೈಗೊಂಡು ಕೋಟ್ಯಂತರ ರೂಗಳನ್ನು ಖರ್ಚು ಮಾಡಲಾಗುತ್ತಿದೆ. ಆದರೂ ರಸ್ತೆಬದಿಯ ಕಸದ ರಾಶಿ ಇಲ್ಲದ ಬಡಾವಣೆಗಳನ್ನು ಎಲ್ಲೆಂದರಲ್ಲಿ ಕಾಣಬಹುದಾಗಿದೆ. ಗಂಗಾನದಿಯ ಮಾಲಿನ್ಯದ ಬಗ್ಗೆ ಸದಾ ಪರಿತಪಿಸುತ್ತಾ ಭಾವುಕವಾಗುವ ಮಧ್ಯಮ ವರ್ಗದ ಮನಸುಗಳು ತಮ್ಮ ರಸ್ತೆಯಲ್ಲೇ ಇಕ್ಕೆಲಗಳಲ್ಲಿರುವ ಕಸದ ರಾಶಿಯನ್ನು ಕಂಡೂ ಕಾಣದಂತೆ ಇರುತ್ತವೆ. ಈ ಕಸದ ರಾಶಿಯೇ ಬೀಡಾಡಿ ದನಗಳಿಗೆ ಭೂರಿಭೋಜನದ ಕೇಂದ್ರಗಳೂ ಆಗಿರುತ್ತವೆ.

ಅಂದರೆ, ಸಾರ್ವಜನಿಕ ಪರಿಕಲ್ಪನೆಯಲ್ಲಿ "ಪರಿಸರ" ಒಂದು ಅಮೂರ್ತ ಪ್ರಜ್ಞೆಯಾಗಿ ಮಾತ್ರ ಕಂಡುಬರುತ್ತಿದೆ. ಅಥವಾ ಅತೀತತೆಯ ನೆಲೆಯಲ್ಲಿ, ಭಾವನಾತ್ಮಕತೆಯ ನೆಲೆಯಲ್ಲಿ ಮಾತ್ರವೇ ಕಂಡುಬರುತ್ತಿದೆ. ಹಾಗಾಗಿಯೇ ನದಿ ಸ್ವಚ್ಚತೆಯ ಬಗ್ಗೆ ಉಪನ್ಯಾಸಗಳನ್ನು ನೀಡುವವರೂ ಸಹ, ನದಿ ತೀರಗಳಲ್ಲಿ ನಡೆಯುವ ಧಾರ್ಮಿಕ ಚಟುವಟಿಕೆಗಳನ್ನಾಗಲೀ, ಅದರಿಂದ ಉಂಟಾಗುವ ಮಾಲಿನ್ಯವನ್ನಾಗಲೀ ಗಂಭೀರವಾಗಿ ಪರಿಗಣಿಸುವುದೇ ಇಲ್ಲ. ಮೈಸೂರಿನ ಸುತ್ತಲಿನ ಕಾವೇರಿ, ಕಪಿಲೆ, ಕಬಿನಿ ನದಿಯ ತೀರಗಳಲ್ಲಿ ನಡೆಯುವ ಚಟುವಟಿಕೆಗಳನ್ನು ನಿರ್ಬಂಧಿಸುವುದು ಪರಿಸರ ಪ್ರಜ್ಞೆಯ ಒಂದು ಭಾಗವಾದಾಗ ಮಾತ್ರವೇ ನಮ್ಮ ಜಲಮಾಲಿನ್ಯ ಕುರಿತ ಪ್ರಲಾಪಗಳಿಗೆ ಅರ್ಥ ಮೂಡಲು ಸಾಧ್ಯ. ಇಲ್ಲಿ ಧಾರ್ಮಿಕ ನಂಬಿಕೆಗಳ ಪ್ರಶ್ನೆ ಎದುರಾಗುವುದಾದರೂ, ನದಿ ನೀರನ್ನು ಮಲಿನಗೊಳಿಸದೆಯೇ ಈ ವಿಧಿವಿಧಾನಗಳನ್ನು ಆಚರಿಸಬಹುದಾದ ಮಾರ್ಗಗಳನ್ನೂ ಕಂಡು ಕೊಳ್ಳಬೇಕಿದೆ. ಜನಸಾಮಾನ್ಯರ ಶ್ರದ್ಧಾಭಕ್ತಿಗಳಿಗೆ ಭಂಗ ಉಂಟುಮಾಡದೆಯೇ ಈ ನದಿಗಳ ಮತ್ತು ಬೆಟ್ಟಗುಡ್ಡಗಳ ನೈಸರ್ಗಿಕ ಆರೋಗ್ಯವನ್ನು ಕಾಪಾಡಿಕೊಳ್ಳುವ ವಿಶಾಲ ಮನೋಭಾವವನ್ನು ಆಧುನಿಕ ಸಮಾಜ ರೂಢಿಸಿಕೊಳ್ಳಬೇಕಿದೆ.

"ಸೂಯೆಜ್ ಫಾರ್ಮ್" ಅಥವಾ "ಸೆವೇಜ್ ಫಾರ್ಮ್"

ಇದಕ್ಕೆ ಅಡ್ಡಿಯಾಗಬಹುದಾದ ಮಾರುಕಟ್ಟೆ, ವಾಣಿಜ್ಯ ಮತ್ತು ಪ್ರವಾಸೋದ್ಯಮದ ಹಿತಾಸಕ್ತಿಗಳಿಗೆ ಎಲ್ಲ ನೈಸರ್ಗಿಕ ಸಂಪನ್ಮೂಲಗಳೂ ಬಂಡವಾಳದ ಮೂಲಗಳಾಗಿಯೇ ಕಾಣುವುದರಿಂದ, ಆಡಳಿತ ನೀತಿಯನ್ನು ರೂಪಿಸುವ ಸರ್ಕಾರಗಳು ತಮ್ಮ ನಿಸರ್ಗ ಪ್ರಜ್ಞೆ ಮತ್ತು ಪರಿಸರ ಪ್ರಜ್ಞೆಯನ್ನು ಮತ್ತಷ್ಟು ಸೂಕ್ಷ್ಮಗೊಳಿಸಬೇಕಿದೆ. ಬಂಡವಾಳಶಾಹಿ ಅಭಿವೃದ್ಧಿಯ ಮಾದರಿಗಳು ನಿಸರ್ಗವನ್ನು ಶೋಷಣೆಗೊಳಪಡಿಸುವುದೇ ಅಲ್ಲದೆ ಪರಿಸರ ಅಸಮತೋಲನವನ್ನು ಹೇಗೆ ಸೃಷ್ಟಿಸುತ್ತದೆ ಎನ್ನಲು ಕೇದಾರನಾಥದಲ್ಲಿ ನಡೆಯುತ್ತಿರುವ ಭೂಕುಸಿತಗಳು, ಎರಡು ವರ್ಷದ ಹಿಂದೆ ಕರ್ನಾಟಕದ ಕೊಡಗಿನಲ್ಲಿ ಸಂಭವಿಸಿದ ಅನಾಹುತಗಳು ಕೇವಲ ನಿದರ್ಶನಗಳಷ್ಟೇ. ಆಧುನಿಕ ನಗರೀಕರಣ ಪ್ರಕ್ರಿಯೆಗೆ ಬಲಿಯಾಗುತ್ತಿರುವ ನದಿ ತೀರಗಳು ಮರಳು ಗಣಿಗಾರಿಕೆಯಿಂದ ಒಡಲು ಬರಿದುಮಾಡಿ ಕೊಳ್ಳುತ್ತಿರುವಂತೆಯೇ, ನಿಸರ್ಗ ಸಮತೋಲನ ಕಾಪಾಡುವ ಬೆಟ್ಟಗುಡ್ಡಗಳು ನಿರ್ಮಾಣ ಕಾಮಗಾರಿಗಳಿಗೆ ಜಲ್ಲಿ, ಕಲ್ಲು, ಎಮ್‌ಸ್ಯಾಂಡ್ ಪೂರೈಸುವ ಸಲುವಾಗಿ ಬರಿದಾಗುತ್ತಿವೆ.

ಮೈಸೂರಿನಲ್ಲೇ ಇರುವ ತ್ಯಾಜ್ಯ ವಿಲೇವಾರಿ ಘಟಕವನ್ನು "ಸೂಯೆಜ್ ಫಾರ್ಮ್" ಎಂದು ಮುದ್ದಾಗಿ ಕರೆಯಲಾಗುತ್ತದೆ. ವಾಸ್ತವದಲ್ಲಿ ಅದು "ಸೆವೇಜ್ ಫಾರ್ಮ್" ಅಂದರೆ ಇಡೀ ನಗರದ ತ್ಯಾಜ್ಯವನ್ನು ಸಂಗ್ರಹಿಸುವ ಬೃಹತ್ ಕಸದ ಬೆಟ್ಟಗಳನ್ನು ಹೊಂದಿರುವ ಒಂದು ತಾಣ. ಈ ತಾಣದ ಸುತ್ತಲಿನ ಜನತೆ ಎದುರಿಸುತ್ತಿರುವ ಆರೋಗ್ಯದ ಸಮಸ್ಯೆಗಳು ಮೈಸೂರು ಮಹಾನಗರ ಪಾಲಿಕೆಯನ್ನಾಗಲೀ, ಅದೇ ವಲಯದಲ್ಲಿ ವಾಸಿಸುವ ಜನಪ್ರತಿನಿಧಿಗಳಿಗಾಗಲೀ ಸಮಸ್ಯೆ ಎನಿಸುತ್ತಲೇ ಇಲ್ಲ. ಆದರೂ ಅಲ್ಲಿನ ನಿವಾಸಿಗಳು ತಮ್ಮ ಜೀವನ ನಿರ್ವಹಣೆಗಾಗಿ ಆರೋಗ್ಯ ಕಾಪಾಡಿಕೊಂಡು, ಹಲವು ಅನಾರೋಗ್ಯಗಳೊಂದಿಗೇ ಬದುಕುತ್ತಿದ್ದಾರೆ. ಬಂಡವಾಳಶಾಹಿ ಅರ್ಥ ವ್ಯವಸ್ಥೆಯಲ್ಲಿ ಅನಾರೋಗ್ಯವನ್ನು ತಪ್ಪಿಸುವ ಯಾವುದೇ ಯೋಜನೆ ಇರುವುದಿಲ್ಲ ಬದಲಾಗಿ ತಲೆದೋರುವ ಅನಾರೋಗ್ಯಗಳ ನಿವಾರಣೆಗೆ "ಕಲ್ಯಾಣ ಯೋಜನೆಗಳನ್ನು" ರೂಪಿಸಲಾಗುತ್ತದೆ. ಯಶಸ್ವಿನಿ, ಜನೌಷಧಿ, ಆಯುಷ್ಮಾನ್ ಇತ್ಯಾದಿ. ಇದು ಬಂಡವಾಳ ವ್ಯವಸ್ಥೆಯ ದ್ವಂದ್ವಗಳಲ್ಲಿ ಅತ್ಯಂತ ಪ್ರಧಾನವಾದುದು.

ಈ ಕಾಳಜಿ, ಕಳಕಳಿ ಮತ್ತು ದ್ವಂದ್ವಗಳ ನಡುವೆಯೇ ನಾವು ಮತ್ತೊಂದು ಪರಿಸರ ದಿನವನ್ನು ಆಚರಿಸುತ್ತಿದ್ದೇವೆ. ಕಸ ಆಯಲು ಬರುವವರು ಕೈಗವುಸುಗಳಿಲ್ಲದ, ಮುಖಗವುಸುಗಳಿಲ್ಲದೆ, ಸೂಕ್ತ ವೇತನ ಸೌಲಭ್ಯಗಳೂ ಇಲ್ಲದೆ ತಮ್ಮ ಜೀವವನ್ನೇ ಪಣಕಟ್ಟಿಟ್ಟು ಮನೆಮನೆಗೆ ಬರುತ್ತಿರುತ್ತಾರೆ. ಆದರೂ ರಸ್ತೆಯ ಇಕ್ಕೆಲಗಳಲ್ಲಿ ತಾಜ್ಯದ ರಾಶಿ ರಾರಾಜಿಸುತ್ತಿರುತ್ತದೆ. ಮತಯಾಚನೆಗೆ ಬರುವ ಜನಪ್ರತಿನಿಧಿಗಳು ಮೂಗಿನೊಂದಿಗೆ ಒಳಗಣ್ಣನ್ನೂ ಮುಚ್ಚಿಕೊಂಡು ಹಾದು ಹೋಗಿಬಿಡುತ್ತಾರೆ. ಬೀಡಾಡಿ ದನಗಳು ಈ ಕಸದ ರಾಶಿಗಳಲ್ಲಿ ಬಾಯಾಡಿಸಿ ಮತ್ತಷ್ಟು ಹರಡಿಬಿಡುತ್ತವೆ. ಸುತ್ತ ವಾಸಿಸುವ ನಾಗರಿಕರು, ಗಂಗೆಯ ಪಾವಿತ್ರ್ಯತೆ, ಹಿಮಾಲಯದ ಭವ್ಯತೆಯ ಭ್ರಮೆಯಲ್ಲಿ ತೇಲಾಡುತ್ತಾ ಸ್ವಚ್ಚ ಭಾರತದ ಫಲಾನುಭವಿಗಳಾಗಿ ತಮ್ಮ ಬದುಕು ಸವೆಸುತ್ತಾ ಸಾಗುತ್ತಾರೆ. ಪರಿಸರ ಮಾಲಿನ್ಯ ಬಾಧಿಸಬೇಕಿರುವುದು ಈ ಜನತೆಯನ್ನು, ಜಾಗೃತಿ ಮೂಡಿಸಬೇಕಿರುವುದು ಈ ಜನತೆಯ ನಡುವೆ, ಸಾರ್ವಜನಿಕ ವೇದಿಕೆ ಅಥವಾ ವಿಚಾರ ಸಂಕಿರಣಗಳಲ್ಲಿ ಅಲ್ಲ.

ಈ ಸುಡುವಾಸ್ತವವನ್ನು ಅರ್ಥಮಾಡಿಕೊಂಡರೆ ಪರಿಸರ ದಿನಾಚರಣೆಯೂ ಸಾರ್ಥಕವಾದೀತು.



ಸೂಯೇಜ್ ಫಾರ್ಮ್, ಮೈಸೂರು

ಹಮಾಲಿ ಕಾರ್ಮಿಕರ 5ನೇ ರಾಜ್ಯ ಸಮ್ಮೇಳನ........ ಪುಟ 9 ರಿಂದ

ಸಂಕೇತಗಳಾದ ಶಿಶುನಾಳ ಶರೀಪ, ಬಸವಣ್ಣ, ಬುದ್ಧ, ಅಂಬೇಡ್ಕರ್, ಸಾವಿತ್ರಿಬಾಯಿ ಫುಲೆ, ಕನಕದಾಸ, ನಾರಾಯಣಗುರು, ಸಮಾನತೆಯ ಕನಸುಗಾರ ಮಾರ್ಕ್ಸ್, ಭಗತ್ ಸಿಂಗ್, ವಿವೇಕಾನಂದ ಅಷ್ಟು ಮಾತ್ರವಲ್ಲ, ಚಿತ್ರದುರ್ಗದ ಜಿಲ್ಲೆಯ ಅಸ್ಮಿತೆಗಳಾದ ನಾಯಕನಹಟ್ಟಿ ತಿಪ್ಪೇರುದ್ರಸ್ವಾಮಿ, ಮದಕರಿ ನಾಯಕ, ಮುರುಘರಾಜೇಂದ್ರ ಶ್ರೀಗಳು, ಓನಕೆ ಓಬವ್ವ, ಹಾಗೂ ಗದುಗಿನ ತೋಂಟಾದಾರ್ಯ, ಮೊದಲಾದವರನ್ನು ಅನಕ್ಷರಸ್ಥ ಕಾರ್ಮಿಕ ವರ್ಗ ತನ್ನ ಕೈಯಲ್ಲಿ ಹಿಡಿದು ಸಾಗಿ ಸಾಮರಸ್ಯವನ್ನು ಸಾರಿದರು. ಮೆರವಣಿಗೆಯಲ್ಲಿಯ ಕೆಂಬಾವುಟಗಳು, ಎತ್ತಿನ ಚಕ್ಕಡಿಗಳು ಜನರ ಗಮನಸೇಳೆದವು.

ಚಳ್ಳಕೆರೆಯ ದಲ್ಲಾಲರ ಸಮುದಾಯ ಭವನದಲ್ಲಿ ನಡೆದ ಪ್ರತಿನಿಧಿಗಳ ಅಧಿವೇಶನವನ್ನು ಸಿಐಟಿಯು ಕಾರ್ಯದರ್ಶಿ ಸೈಯದ್ ಮುಜೀಬ್ ಉದ್ಘಾಟಿಸಿ ಮಾತನಾಡಿದರು. ಸಮಾರೋಪ ಸಮಾರಂಭದ ವೇಳೆಗೆ ಆಗಮಿಸಿದ ಚಳ್ಳಕೆರೆ ಶಾಸಕರಾದ ಟಿ. ರಘುಮೂರ್ತಿ ಅವರು ಶುಭಕೋರಿ ಮಾತನಾಡಿ ಕಾರ್ಮಿಕರ ಸಮಸ್ಯೆಗಳ ಪರಿಹಾರಕ್ಕಾಗಿ ಸರಕಾರದ ಮೇಲೆ ಒತ್ತಡ ತರುವ ಪ್ರಯತ್ನ ಮಾಡುವೆ ಎಂದರು.

ನೂತನ ಪದಾಧಿಕಾರಿಗಳನ್ನು ಆಯ್ಕೆ : ಸಮ್ಮೇಳನವು ಈ ಕೆಳಕಂಡ ಪದಾಧಿಕಾರಿಗಳನ್ನು ಸರ್ವಾನುಮತದಿಂದ ಆಯ್ಕೆ ಮಾಡಿತು. **ಅಧ್ಯಕ್ಷರು:** ಕೆ. ಮಹಾಂತೇಶ್, **ಪ್ರಧಾನ ಕಾರ್ಯದರ್ಶಿ:** ಮಹೇಶ ಪತ್ತಾರ, **ಖಜಾಂಚಿ:** ಟಿ. ತಿಪ್ಪೇಸ್ವಾಮಿ, **ಉಪಾಧ್ಯಕ್ಷರುಗಳಾಗಿ** ನಿರುಪಾದಿ ಬೆಣಕಲ್, ಎಚ್. ತಿಪ್ಪಯ್ಯ, ಎಚ್.ಬಿ. ಓಬಳೇಶಪ್ಪ, ಬಸವಣ್ಣೆಪ್ಪ ನೀರಲಗಿ, ಎನ್.ಕೆ.ಸುಬ್ರಹ್ಮಣ್ಯ, ನಿಂಗಣ್ಣ, ನಾಗಪ್ಪ ನಾಯ್ಕ, ಎಚ್.ಓ.ನಾಗರಾಜ, ಪಿ.ಆರ್.ಭರತ, ಯಂಕಪ್ಪ ಕೆಂಗಲ್, ಕಲ್ಲಪ್ಪ ಕಡಬಲ್ಲನವರ, **ಕಾರ್ಯದರ್ಶಿಗಳಾಗಿ** ಗುರುಸಿದ್ದಪ್ಪ ಅಂಬಿಗೇರ, ಬಿ. ಸುರೇಶ, ಗೀತಾ ಚಕ್ರಸಾಲಿ, ಮರಿಸ್ವಾಮಿ, ಟಿ. ನಬೀಸಾಬ, ಕೃಷ್ಣಪ್ಪ ನಾಯಕ, ಮಂಜುನಾಥ ಹುಜರಾತಿ, ಇಮ್ತಿಯಾಜ್, ದುರ್ಗಾವಾರು ಬೋರಯ್ಯ, ಅಣ್ಣಪ್ಪ ಪೂಜಾರಿ ಆಯ್ಕೆಯಾದರು. 45 ಜನರ ರಾಜ್ಯ ಸಮಿತಿ ಮತ್ತು ಮಿಲ್ ಗೋಡೌನ್, ಎಪಿಎಂಸಿ, ನಗರ ಗ್ರಾಮೀಣ, ಮಹಿಳಾ ಉಪ ಸಮಿತಿಗಳನ್ನು ರಚಿಸಲಾಯಿತು.

●



ಕಾಂ. ವೀರೇಂದ್ರ ಸಿಂಗ್

ಕಾಂ. ವೀರೇಂದ್ರ ಸಿಂಗ್, ಸಿಪಿಐ(ಎಂ)ನ ಕೇಂದ್ರ ಮುಖಪತ್ರಿಕೆಗಳಾದ ಪೀಪಲ್ಸ್ ಡೆಮಾಕ್ರಸಿ ಮತ್ತು ಲೋಕಲಹರ್ ನ ವ್ಯವಸ್ಥಾಪಕರು, ಜೂನ್ 4 ರಂದು ನಿಧನರಾಗಿದ್ದಾರೆ. ಅವರು ಕಳೆದ ಒಂದೂವರೆ ವರ್ಷದಿಂದ ಕ್ಯಾನ್ಸರ್ ವಿರುದ್ಧ ಹೋರಾಡುತ್ತಿದ್ದರು

1957ರಲ್ಲಿ ಹರ್ಯಾಣದ ಚಿಮ್ನಿ ಗ್ರಾಮದಲ್ಲಿ ಜನಿಸಿದ ವೀರೇಂದ್ರರ ತಂದೆ ದಯಾಸಿಂಗ್ ಡಿಟಿಸಿ ಡ್ರೈವರ್ ಆಗಿದ್ದು ಅಲ್ಲಿನ ಸಿಐಟಿಯುಗೆ ಸೇರಿದ ಕಾರ್ಮಿಕ ಸಂಘದಲ್ಲಿ ಸಕ್ರಿಯರಾಗಿದ್ದರು.

ಕಲನೌರ್‌ನ ನ ಸತ್ಜಿಂದಾ ಕಲ್ಯಾಣ್ ಕಾಲೇಜಿನಲ್ಲಿ ಸ್ನಾತಕ ಪದವಿ ಪಡೆದ ವೀರೇಂದ್ರ ಎಪ್ಪತ್ತರ ದಶಕದ ಉತ್ತರಾರ್ಧದಲ್ಲಿ, ಲೋಕಲಹರ್ ಪ್ರಾರಂಭವಾದಾಗ ಅದರ ವ್ಯವಸ್ಥಾಪನಾ ವಿಭಾಗದಲ್ಲಿ ಪೂರ್ಣ ಕಾಲದ ಉದ್ಯೋಗಿಯಾಗಿ ಸೇರಿದರು.

1981 ರಲ್ಲಿ ಸಿಪಿಐ(ಎಂ) ಸೇರಿದ ನಂತರ ಅವರು 1982 ರಲ್ಲಿ ಪೂರ್ಣ ಕಾಲದ ಕಾರ್ಯಕರ್ತರಾದರು. ಅಂದಿನಿಂದ ನಾಲ್ಕು ದಶಕಗಳ ಈ ಸುದೀರ್ಘ ಅವಧಿಯಲ್ಲಿ ಅವರು ಪಕ್ಷದ ಪ್ರಕಟಣೆಗಳನ್ನು ನಿರ್ವಹಿಸುವಲ್ಲಿ ವಿವಿಧ ಜವಾಬ್ದಾರಿಗಳನ್ನು ವಹಿಸಿಕೊಂಡರು. ನಿಧನದ ವೇಳೆಯಲ್ಲಿ ಅವರು ಪಕ್ಷದ ಪತ್ರಿಕೆಗಳ ವ್ಯವಸ್ಥಾಪಕರಾಗಿದ್ದರು.

ಪಕ್ಷದ ಪೊಲಿಟ್ ಬ್ಯೂರೋ ಸದಸ್ಯರಾದ ಬಿ ವಿ ರಾಘವುಲು ಮತ್ತು ನೀಲೋತ್ಪಲ್ ಬಸು, ಫರಿದಾಬಾದ್ ನಲ್ಲಿರುವ ಅವರ ಮನೆಗೆ ತೆರಳಿ ಅಗಲಿದ ಸಂಗಾತಿಗೆ ಶ್ರದ್ಧಾಂಜಲಿ ಸಲ್ಲಿಸಿದರು ಮತ್ತು ಪತ್ನಿ, ಇಬ್ಬರು ಪುತ್ರರು, ಸೊಸೆ ಮತ್ತು ಒಬ್ಬ ಮೊಮ್ಮಗನಿರುವ ಅವರ ದುಃಖತಪ್ತ ಕುಟುಂಬಕ್ಕೆ ಸಂತಾಪ ಸೂಚಿಸಿದರು.

ನವ–ಉದಾರವಾದದಲ್ಲಿ ಹಣದುಬ್ಬರ–ತಡೆ ಸರಕಾರಗಳ ಕೈಯಲ್ಲಿಲ್ಲ...... ಪುಟ 13 ರಿಂದ

controls) ಎಂದು ಕರೆಯಲಾಗಿತ್ತು. ಹಣದುಬ್ಬರದ ನಿಯಂತ್ರಣವನ್ನು ವಿತ್ತೀಯ ಮತ್ತು ಹಣಕಾಸು ನೀತಿಗಳ ಮೂಲಕ ಮಾತ್ರವಲ್ಲದೆ "ಪೂರೈಕೆ ನಿರ್ವಹಣೆ"ಯ ಮೂಲಕ ಮತ್ತು ಸಾರ್ವಜನಿಕ ವಿತರಣೆ ಮತ್ತು ಪಡಿತರ ವ್ಯವಸ್ಥೆಯನ್ನು ಜಾರಿಗೆ ತರುವ ಮೂಲಕವೂ ಖಚಿತಪಡಿಸಲಾಗಿತ್ತು. ಈ ಎಲ್ಲ ಕ್ರಮಗಳಿಂದಾಗಿ ಹೂಡಿಕೆ, ಉತ್ಪಾದನೆ ಮತ್ತು ಉದ್ಯೋಗಗಳು ಬಹಳ ಮಟ್ಟಿಗೆ ಜೂಜುಕೋರರ ವರ್ತನೆಗಳಿಂದ ರಕ್ಷಿಸಲ್ಪಟ್ಟವು.

ಈಗ "ಉದಾರೀಕರಣ"ದ ಪ್ರಪಂಚದಲ್ಲಿ

ಬ್ರೆಟನ್ ವುಡ್ಸ್ ಸಂಸ್ಥೆಗಳು (ವಿಶ್ವ ಬ್ಯಾಕ್ ಮತ್ತು ಐಎಂಎಫ್) ಮತ್ತು ಅದರ ನಿಷ್ಠಾವಂತ ನವ–ಉದಾರವಾದಿ ಅರ್ಥಶಾಸ್ತ್ರಜ್ಞರು ಈ ಎಲ್ಲ ವ್ಯವಸ್ಥೆಗಳನ್ನೂ ಕಟುವಾಗಿ ಟೀಕಿಸುತ್ತಲೇ ಬಂದರು. ಮೂರನೆಯ ಜಗತ್ತಿನ ದೇಶಗಳು ಸ್ಥಾಪಿಸಿದ ಈ ನವ ನವೀನ ಹಣಕಾಸು ಸಂಸ್ಥೆಗಳ ಏರ್ಪಾಟನ್ನು ಅವರು "ಆರ್ಥಿಕ ದಬ್ಬಾಳಿಕೆ" ಎಂದು ಕರೆದರು. ಬದಲಿಗೆ, ಹಣಕಾಸು ಮಾರುಕಟ್ಟೆಗಳಲ್ಲಿ ಇಂಥಹ ನೇರ ಹಸ್ತಕ್ಷೇಪಗಳನ್ನು ತ್ಯಜಿಸಬೇಕೆಂದೂ ಮತ್ತು ಹಣಕಾಸು ವ್ಯವಸ್ಥೆಯನ್ನು "ಉದಾರೀಕರಣ"ಗೊಳಿಸುವಂತೆ ಒತ್ತಾಯಿಸಿದರು. ಆಹಾರ ಧಾನ್ಯಗಳ ವಿಷಯದಲ್ಲಿ ಇನ್ನೂ ಮುಂದುವರಿಯುತ್ತಿರುವ ಸಾರ್ವಜನಿಕ ವಿತರಣೆ ಮತ್ತು ಪಡಿತರವನ್ನು ಕಿತ್ತೊಗೆಯುವುದನ್ನು ಕೂಡ ಅವರು ಬಯಸಿದ್ದರು ಮತ್ತು ಈ ನಿಟ್ಟಿನಲ್ಲಿ ಮೂರು ಕುಖ್ಯಾತ ಕೃಷಿ ಕಾನೂನುಗಳನ್ನು ಜಾರಿಗೆ ತರುವಂತೆ ಮೋದಿ ಸರ್ಕಾರವನ್ನು ಒತ್ತಾಯಿಸಿದರು. ಸಾರ್ವಜನಿಕ ವಿತರಣೆ ಮತ್ತು ಪಡಿತರವನ್ನು ಕಿತ್ತೆಸೆಯುವ ತಮ್ಮ ಪ್ರಯತ್ನದಲ್ಲಿ ಅವರು ಯಶಸ್ವಿಯಾಗದಿದ್ದರೂ, ನವ–ಉದಾರವಾದಿ "ಸುಧಾರಣೆಗಳ" ಭಾಗವಾಗಿ "ಆರ್ಥಿಕ ಉದಾರೀಕರಣ"ವನ್ನು ಅವರು ಜಾರಿಗೆ ತಂದರು.

"ಆರ್ಥಿಕ ಉದಾರೀಕರಣ" ಎಂದರೆ, ಹಣಕಾಸು ನೀತಿಯ ಸಾಧನವಾಗಿ ಬಡ್ಡಿ ದರವನ್ನು ಏಕೈಕವಾಗಿ ಅವಲಂಬಿಸುವುದು ಎಂದರ್ಥ. ಹಣಕಾಸು ಬಂಡವಾಳವು ಸುಲಭವಾಗಿ ಹರಿದಾಡುವ ಜಗತ್ತಿನಲ್ಲಿ ಬಡ್ಡಿ ದರಗಳು ಅಮೆರಿಕದ ಬಡ್ಡಿ ದರಗಳೊಂದಿಗೆ ತುಲನಾತ್ಮಕವಾಗಿ ಸಂಬಂಧಿಸಿರುವುದರಿಂದ (ಈ ಅಂಶವನ್ನು ಆರಂಭದಲ್ಲಿ ಗಮನಿಸಿದಂತೆ), ಬಡ್ಡಿ ದರದ ವಿಷಯದಲ್ಲೂ ದೇಶವು ಹೆಚ್ಚಿನ ಸ್ವಾತಂತ್ರ್ಯವನ್ನು ಹೊಂದಿಲ್ಲ. ಮತ್ತು, "ವಿತ್ತೀಯ ಜವಾಬ್ದಾರಿ" ಶಾಸನದ ಪ್ರಕಾರ ಸರ್ಕಾರದ ಖರ್ಚು–ವೆಚ್ಚಗಳು ಸರ್ಕಾರದ ಆದಾಯಕ್ಕೆ ಸೀಮಿತಗೊಳಿಸಬೇಕಾಗುತ್ತದೆ ಮತ್ತು ಸರ್ಕಾರದ ಆದಾಯವನ್ನು ಶ್ರೀಮಂತರ ಮೇಲೆ ಹೆಚ್ಚಿನ ತೆರಿಗೆಗಳನ್ನು ವಿಧಿಸುವ ಮೂಲಕ ಹೆಚ್ಚಿಸಿಕೊಳ್ಳಲು ಸಾಧ್ಯವಿಲ್ಲದ (ಸಾಧ್ಯವಿಲ್ಲ ಏಕೆಂದರೆ, ಶ್ರೀಮಂತರ ಮೇಲೆ ಹೆಚ್ಚಿನ ತೆರಿಗೆಗಳನ್ನು ಹೇರಿದರೆ ಹೂಡಿಕೆದಾರರು ತಮ್ಮ ಹೂಡಿಕೆಯನ್ನು ಹಿಂತೆಗೆದು ಬೇರೆ ದೇಶಗಳಿಗೆ ಹೋಗುತ್ತಾರೆ ಎಂಬ ಭಯ ಭೀತಿಗೆ ಸರ್ಕಾರವು ಒಳಗಾಗಿದೆ) ಕಾರಣದಿಂದ, ಹಣದುಬ್ಬರದ ನಿಯಂತ್ರಣಕ್ಕಾಗಿ ಹಿಂದೆ ಬಳಸುತ್ತಿದ್ದ ಇದೇ ಬಡ್ಡಿ ದರವು ಈಗ ಹೂಡಿಕೆ, ಉತ್ಪಾದನೆ, ಉದ್ಯೋಗ ಮತ್ತು ಬೆಳವಣಿಗೆ ಇವುಗಳ ನಿರ್ಣಾಯಕ ಅಂಶವಾಗಿದೆ.

ಇವೆಲ್ಲದರ ಅರ್ಥ, ಒಂದು ದೇಶದ ಉತ್ಪಾದನೆ ಮತ್ತು ಉದ್ಯೋಗವನ್ನು ದೇಶದ ಕೆಲವೇ ಜೂಜುಕೋರರ ಗುಂಪು ನಿರ್ಧರಿಸುತ್ತದೆ ಎಂಬಂತಿರುವ ಪ್ರಪಂಚಕ್ಕೆ ಮರಳುತ್ತಿದ್ದೇವೆ ಎಂದಷ್ಟೇ ಅಲ್ಲ, ವಿಶ್ವದ ಪ್ರತಿಯೊಂದು ದೇಶದ, ಅಂದರೆ ಇಡೀ ವಿಶ್ವದ ಅರ್ಥವ್ಯವಸ್ಥೆಯಲ್ಲಿ ಉತ್ಪಾದನೆಯ ಮತ್ತು ಉದ್ಯೋಗದ ಮಟ್ಟವನ್ನು ಕೆಲವೇ ಅಮೆರಿಕನ್ ಜೂಜುಕೋರರ ಒಂದು ಗುಂಪು ನಿರ್ಧರಿಸುವ ಪ್ರಪಂಚದಲಿದ್ದೇವೆ.

ಖ್ಯಾತ ಅರ್ಥಶಾಸ್ತ್ರಜ್ಞ ಡಾ. ಕೆ.ಎನ್. ರಾಜ್ ಅವರು ಒಮ್ಮೆ 'ನಿಯಂತ್ರಣ ನೀತಿ'ಗಳ (ಡಿರಿಜಿಸ್ಟ್) ಯುಗವನ್ನು, ಅದು ಲಕ್ಷಾಂತರ ಕಾರ್ಮಿಕರ ಉದ್ಯೋಗಾವಕಾಶಗಳನ್ನು ನಿರ್ಧರಿಸುವ ಅವಕಾಶವನ್ನು ಬೆರಳೆಣಿಕೆಯ ಜೂಜುಕೋರ ಗುಂಪಿನ ಮರ್ಜಿಗೆ ಬಿಟ್ಟಿರಲಿಲ್ಲ ಎಂಬ ನೆಲೆಯಲ್ಲಿ ಶ್ಲಾಘಿಸಿದ್ದರು. ಆರ್ಥಿಕ ಉದಾರೀಕರಣವು ಈ ನಿರೋಧಕವನ್ನು(insulation) ನಿಖರವಾಗಿ ನಾಶಪಡಿಸಿತು ಮತ್ತು ಅದಕ್ಕಿಂತಲೂ ಹೆಚ್ಚಾಗಿ, ಪ್ರತಿಯೊಂದು ದೇಶದ ಉದ್ಯೋಗದ ಮಟ್ಟವನ್ನು ನಿರ್ಧರಿಸುವ ಅಂಶವನ್ನು ಕೆಲವು ಮಂದಿ ಅಮೆರಿಕನ್ ಜೂಜುಕೋರರ ಮರ್ಜಿಯೊಂದಿಗೆ ಜೋಡಿಸಿತು.

ಹಣದುಬ್ಬರವನ್ನು ಎದುರಿಸುವ ಒಂದು ಸಾಧನವಾಗಿ ಬಡ್ಡಿ ದರಗಳನ್ನು ಹೆಚ್ಚಿಸುವ ವಿವೇಕದ ಬಗ್ಗೆ ನಡೆಯುತ್ತಿರುವ ಚರ್ಚೆಯ ಕುರಿತು ವಿಶ್ವಾದ್ಯಂತ ಬಹಳಷ್ಟು ಬರೆಯಲಾಗಿದೆ. ಈ ಚರ್ಚೆಯು ಸಾಮಾನ್ಯವಾಗಿ ನವ–ಉದಾರವಾದಿ ಸನ್ನಿವೇಶವನ್ನು ಭಾವಿಸಿಕೊಳ್ಳುತ್ತದೆ ಮತ್ತು ನಿರುದ್ಯೋಗ ಹಾಗೂ ಹಣದುಬ್ಬರ ಇವುಗಳ ನಡುವೆ ಯಾವುದಕ್ಕೆ ಎಷ್ಟು ಪ್ರಾಶಸ್ತ್ಯ ಕೊಡಬೇಕು ಎಂದು ತಿಳಿಯಲು ಯಾವ ನಿರ್ದಿಷ್ಟ ಅಂಶವನ್ನು ಆಯ್ಕೆ ಮಾಡಬೇಕು ಎಂಬುದರ ಬಗ್ಗೆ ನಿಲುವುಗಳನ್ನು ನಂತರ ತೆಗೆದುಕೊಳ್ಳುತ್ತದೆ. ಆದರೆ, ನವ–ಉದಾರವಾದಿ ಸನ್ನಿವೇಶದಲ್ಲಿ ಈ ಪ್ರಾಶಸ್ತ್ಯದ ಅಂಶವು ಉದ್ಭವವಾಗುವುದೇ, ಇತರ ಸಾಧನಗಳನ್ನು ಸರ್ಕಾರದ ಕೈಯಿಂದ ಕಿತ್ತುಕೊಳ್ಳುವುದರಿಂದಾಗಿ. ಹಾಗಾಗಿ, ಇಲ್ಲಿರುವ ಒಟ್ಟು ಅಂಶವೆಂದರೆ, ಇಂತಹ ಪರಿಸ್ಥಿತಿಯನ್ನು ಸಂಪೂರ್ಣವಾಗಿ ತಪ್ಪಿಸಬೇಕು ಎಂದಾದರೆ, ಅದು ನವ–ಉದಾರವಾದಿ ಸನ್ನಿವೇಶವನ್ನು ಮೀರುವ ಮೂಲಕವೇ ಆಗಬೇಕಾಗುತ್ತದೆ. ಆದರೆ, ಹಣದುಬ್ಬರದ ನಿಯಂತ್ರಣದ ಚರ್ಚೆಯಲ್ಲಿ ಈ ಅಂಶವು ಕಂಡುಬರುವುದೇ ವಿರಳ.

ನೇತ್ರಾವತಿಯಲ್ಲಿ ಆ ದಿನ ನೀರಿನ ಬದಲಾಗಿ ನೆತ್ತರು ಹರಿದಂತೆ ಕಾಣಿಸಿತು..... ಪುಟ 16 ರಿಂದ

ಇದ್ದಿದ್ದೇ!' ಎಂದುಕೊಂಡು ನೇತ್ರಾವತಿ ಸೇತುವೆಯಿಂದ ನದಿಗೆ ಜಿಗಿಯುತ್ತಾರೆ. ಬದುಕದಿದ್ದರೂ ಪರವಾಗಿಲ್ಲ ಇವರ ಕೈಗೆ ಸಿಗಬಾರದು ಎಂಬ ಮನಸ್ಥಿತಿಗೆ ಆ ಇಬ್ಬರು ಯುವಕರನ್ನು ತಂದಿದ್ದ ಪೊಲೀಸರು ಮತ್ತು ಭಜರಂಗಿಗಳು ಹರಡಿಸಿದ ಭಯೋತ್ಪಾದನೆ ಎಂತಹದ್ದಿರಬಹುದು?

ಜೀವಭಯದಿಂದ ನದಿಗೆ ಹಾರಿದ್ದ ಮೊಹಮ್ಮದ್ ಮುಸ್ತಾಫಾ ಮತ್ತು ಆಸೀಫ್ ಬಗ್ಗೆ ಪೊಲೀಸರಿಗೆ ಮತ್ತು ಭಜರಂಗಿಗಳಿಗೆ ಕನಿಷ್ಠ ಲೊಚಗುಡುವಷ್ಟೂ ಅನುಕಂಪ ಮೂಡಲಿಲ್ಲ. "ಪರಾರಿಯಾಗಲು ನದಿಗೆ ಧುಮುಕಿರುವವರ ಪತ್ತೆಗೆ ಕ್ರಮ ವಹಿಸಲಾಗುತ್ತಿದೆ" ಎಂಬರ್ಥದಲ್ಲಿ ಪೊಲೀಸ್ ಹೇಳಿಕೆಗಳನ್ನು ನೀಡಿ ಮುಸ್ತಾಫ ಮತ್ತು ಆಸೀಫ್ ಪತ್ತೆ ಕಾರ್ಯ ಮುಂದುವರೆಸಲಾಯಿತು. ದನ ಸಾಗಾಟವನ್ನು ಹಿಡಿಯುವುದು ಎಂದರೆ ದನದ ರಕ್ಷಣಾ ಕಾರ್ಯಾಚರಣೆ!. ಜೀವ ಭಯದಿಂದ ನೀರಿಗೆ ದುಮುಕಿದ ವ್ಯಕ್ತಿಗಳ ವಿಷಯವಾಗಿ ಮಾತ್ರ ರಕ್ಷಣಾ ಕಾರ್ಯಾಚರಣೆಯ ಬದಲು 'ಪತ್ತೆ ಹಚ್ಚಿ ಹಿಡಿಯುವ ಕಾರ್ಯಾಚರಣೆ'...! ಕನಿಷ್ಠ ಬಾಯಿಮಾತಿಗಾದರೂ, 'ರಕ್ಷಣಾ ಕಾರ್ಯಾಚರಣೆ' ಎಂದು ಹೇಳಲೂ ಆಗದಷ್ಟು ದ್ವೇಷ ತುಂಬಿ ಹೋಗಿತ್ತು ಈ ಪೊಲೀಸರ, ಭಜರಂಗಿಗಳ ಮನಸ್ಸಿನಲ್ಲಿ.

ನೇತ್ರಾವತಿಯಲ್ಲಿ ಆ ದಿನ ನೀರಿನ ಬದಲಾಗಿ ನೆತ್ತರು ಹರಿದಂತೆ ಕಾಣಿಸಿತು.

'ಕೇಸರಿ ಶಾಲು', 'ನೈತಿಕ ಪೊಲೀಸುಗಿರಿ', 'ಧರ್ಮ ರಕ್ಷಣೆ', 'ಭಾರತೀಯ ಸಂಸ್ಕೃತಿ ರಕ್ಷಣೆ' ಇವೆಲ್ಲದರ ಹಿಂದೆ ಬೇರೆಯದ್ದೇ ರಾಜಕೀಯ ಅಜೆಂಡಾ ಇದೆ ಎಂಬುದು ಹಿಂದುಳಿದ ವರ್ಗಗಳಿಗೆ ಗೊತ್ತಾಗಬೇಕಿದೆ. ಎಲ್ಲಾ ಸಂದರ್ಭದಲ್ಲೂ ಹಿಂದುತ್ವದ 'ರಾಜಕೀಯ ಅಜೆಂಡಾ' ಬಯಲಾಗುತ್ತಿದ್ದರೂ ಮರೆವಿನ ಕಾರಣದಿಂದ ಜನರು ಮತ್ತೆ ಮತ್ತೆ ತಮಗೆ ಸಂವಿಧಾನ ದತ್ತ ಸವಲತ್ತುಗಳನ್ನು ತೆಗೆದು ಹಾಕಲು ಚಿತಾವಣೆ ನಡೆಸುತ್ತಿರುವವರಿಂದ ಈ ಕೋಮುವಾದಿ ದಾಳಕ್ಕೆ ಸಿಲುಕಿಕೊಳ್ಳುತ್ತಾರೆ.

ಪ್ರಾರಂಭದಲ್ಲಿ ಮೇಲು–ಕೀಳು ಜಾತಿ ವ್ಯವಸ್ಥೆಯನ್ನು ಉಳಿಸಿಕೊಳ್ಳಲು, ಕೆಳವರ್ಗಗಳು ಅಭಿವೃದ್ಧಿ ಹೊಂದದಂತೆ ನೋಡಿಕೊಳ್ಳಲು, ಬ್ರಾಹ್ಮಣ್ಯದ ರಕ್ಷಣೆಗಾಗಿ ಊಳಿಗಮಾನ್ಯ ಯಜಮಾನಿಕ ವ್ಯವಸ್ಥೆಯು ಹಿಂದುತ್ವದ ಜೊತೆ ಮೈತ್ರಿ ಮಾಡಿಕೊಂಡಿತ್ತು. ಈಗ ಕಾರ್ಪೋರೇಟ್ ಮತ್ತು ಹಿಂದುತ್ವದ ನಡುವೆ ಮೈತ್ರಿಯಾಗಿ ಸರ್ಕಾರಿ ವ್ಯವಸ್ಥೆಯನ್ನು ಬಳಸಿಕೊಂಡೇ ಹಿಂದುಳಿದ ವರ್ಗಗಳನ್ನು ತುಳಿಯುತ್ತಲೇ ಮೇಲ್ವರ್ಗದ ಯಜಮಾನಿಕೆ ಮತ್ತು ಕಾರ್ಪೋರೇಟ್ ವ್ಯವಸ್ಥೆಯ ಪರ ಕೆಲಸ ಮಾಡುತ್ತಿದೆ. ಆದ್ದರಿಂದಲೇ ಹಿಂದುತ್ವ ರಾಜಕಾರಣದ ಸುಳ್ಳುಗಳು, ಅಪ್ರಾಮಾಣಿಕತೆ ಮತ್ತು ಹಿಡನ್ ಅಜೆಂಡಾ, ಸರ್ಕಾರಿ ಭಾಗಿದಾರಿಕೆಯನ್ನು ಘಟನೆಗಳ ಸಹಿತ "ನೇತ್ರಾವತಿಯಲ್ಲಿ ನೆತ್ತರು" ಪುಸ್ತಕದಲ್ಲಿ ಕ್ರೋಢೀಕರಿಸಲಾಗಿದೆ.

– ನವೀನ್ ಸೂರಿಂಜೆ

ನೈತಿಕ ಪೊಲೀಸುಗಿರಿಯ ದೌರ್ಜನ್ಯ, ಕ್ರೂರ ಪೊಲೀಸರ ಪಕ್ಷಪಾತತನ ಬಿಚ್ಚಿಟ್ಟಿದ್ದಾರೆ

ಇತ್ತೀಚೆಗೆ ಏಕ ಸಂಸ್ಕೃತಿಯ ಪ್ರತಿಪಾದಕರು ಹೆಚ್ಚುತ್ತಿದ್ದು, ದೇಶದೊಳಗೆ 'ನಾಗರಿಕ ಭಯೋತ್ಪಾದನೆ'ಯನ್ನು ಮಾಡುತ್ತಿದ್ದಾರೆ. ಈ ರೀತಿಯ ಆಂತರಿಕ ಭಯೋತ್ಪಾದನೆಯು ದೇಶದ ಗಡಿರಕ್ಷಣಾ ಸಮಸ್ಯೆಗಿಂತಲೂ ಹೆಚ್ಚಿನ ಸಮಸ್ಯೆಯನ್ನು ಸೃಷ್ಟಿಸುತ್ತಿದ್ದು, ದೇಶವನ್ನು ಆಂತರಿಕವಾಗಿ ವಿಭಜನೆಗೆ ಪ್ರೇರೇಪಿಸುತ್ತದೆ. ದೇಶಪ್ರೇಮಿ ಭಾರತೀಯರು ಈಗಲೇ ಎಚ್ಚೆತ್ತುಕೊಂಡು ಇದನ್ನು ಪ್ರತಿಭಟಿಸದೇ ಇದ್ದರೆ ದೇಶವಿಭಜನೆಯೋ, ವಿನಾಶವೋ ಆಗುವುದರಲ್ಲಿ ಯಾವ ಸಂಶಯವೂ ಇಲ್ಲ.

ಒಂದೆಡೆಯಲ್ಲಿ ದಲಿತ, ಹಿಂದುಳಿದ ಯುವಕರನ್ನು ಬಳಸಿಕೊಂಡ ಮೇಲ್ವರ್ಗದ ಮತಾಂಧರು, ಮತ್ತೊಂದೆಡೆ ಮತಾಂಧರಾಗಿರುವ ಪೊಲೀಸರು. ಕೇಸರಿ ಮತ್ತು ಕೆಲ ಖಾಕಿ ಮತಾಂಧರು ಜಂಟಿಯಾಗಿ ಹಿಂದುಳಿದ, ದಲಿತ, ಅಲ್ಪಸಂಖ್ಯಾತರ ಮೇಲೆ ದಾಳಿ ನಡೆಸುತ್ತಿದ್ದಾರೆ. 'ನೇತ್ರಾವತಿಯಲ್ಲಿ ನೆತ್ತರು' ಎಂಬ ಈ ಪುಸ್ತಕದಲ್ಲಿ ಕೋಮುಗಲಭೆಗಳ ಆಳ–ಅಗಲ, ನೈತಿಕ ಪೊಲೀಸುಗಿರಿಯ ದೌರ್ಜನ್ಯ, ಕ್ರೂರ ಪೊಲೀಸರ ಪಕ್ಷಪಾತತನ ಮತ್ತು ಕೋಮುಗಲಭೆಗಳಲ್ಲಿ ಭಾಗಿದಾರಿತನವನ್ನು ಒಂದೊಂದು ಲೇಖನದಲ್ಲಿ ನವೀನ್ ಸೂರಿಂಜೆಯವರು ಎಳೆಎಳೆಯಾಗಿ ಬಿಚ್ಚಿಟ್ಟಿದ್ದಾರೆ. ಸಂವಿಧಾನಬದ್ಧ ಸ್ವಸ್ಥ ಸಮಾಜದ ಆಶಯ ಹೊಂದಿರುವ ನಾಗರಿಕರು, ಸರ್ಕಾರಿ ಅಧಿಕಾರಿಗಳು ಓದಲೇಬೇಕಾದ ಪುಸ್ತಕವಿದು.

– ಬಿ.ಕೆ. ಶಿವರಾಂ, ನಿವೃತ್ತ ಎಸಿಪಿ

ಹಿಂದುತ್ವ ಮತೀಯವಾದ ಕಾರ್ಯಾಚರಣೆಯ ವಿಧಾನಗಳ ಬಗ್ಗೆ ಬೆಳಕು ಚೆಲ್ಲುತ್ತದೆ

ಹಿಂದುತ್ವವಾದಿ ಫ್ಯಾಸಿಸ್ಟ್ ರಾಜಕೀಯವನ್ನು ವಿರೋಧಿಸಲು, ನಾವು ನಮ್ಮ ಬದುಕಿನ ವಿವೇಕ ವಿವೇಚನೆಗಳನ್ನು ಎಚ್ಚರದಲ್ಲಿ ಇಟ್ಟುಕೊಳ್ಳುವುದು ಎಷ್ಟು ಮುಖ್ಯವೋ, ಅಷ್ಟೇ ಫ್ಯಾಸಿಸ್ಟ್ ಹಿಂಸಾ ಕೃತ್ಯಗಳ ಸ್ವರೂಪವನ್ನು ಅರಿಸುವ ವಾಸ್ತವಿಕ ವಿದ್ಯಮಾನಗಳ ನಿರೂಪಣೆಗಳೂ ಅಗತ್ಯ.

ಯುವ ಮಾಧ್ಯಮ ವರದಿಗಾರರಾಗಿ ಕರಾವಳಿಯಲ್ಲಿ ಧೀರ್ಘ ಕಾಲ ಚುರುಕಿನ ತನಿಖಾ ವರದಿಗಳನ್ನು ಪ್ರಕಟಿಸಿದ ನವೀನ್ ಸೂರಿಂಜೆಯವರು ತಮ್ಮ ವೃತ್ತಿ ಅನುಭವವನ್ನು ಕಡೆದು ಕಟ್ಟಿರುವ ಬರಹಗಳ ಸಂಕಲನವಿದು. ಸರಳವೂ ತೀಕ್ಷ್ಣವೂ ಆದ ಈ ಬರಹಗಳನ್ನು ಅಗತ್ಯವಾಗಿ (ಹಿಂದುತ್ವ ರಾಜಕೀಯಕ್ಕೆ ಮನಸ್ಸು ಕೊಟ್ಟವರೂ ಸೇರಿದಂತೆ) ಎಲ್ಲಾ ನಾಗರಿಕರೂ ಓದಬೇಕು.


ಹಿಂದುತ್ವ ಮತೀಯವಾದ ಕಾರ್ಯಾಚರಣೆಯ ವಿಧಾನಗಳ ಬಗ್ಗೆ ಬೆಳಕು ಚೆಲ್ಲುವುದು ಮಾತ್ರವಲ್ಲದೆ, ಬಡತನದ ಬವಣೆಗಳನ್ನೂ, (ಆರೋಪಕ್ಕೆ ತುತ್ತಾಗಿ ಸ್ವತಃ ಜೈಲುವಾಸ ಅನುಭವಿಸಿರುವವರಾಗಿ) ಮಂಗಳೂರು ಜೈಲೊಳಗಿನ ಮಾನವ ಗತಿಯ ಕಥನಗಳನ್ನು ಬಹಳ ಅಂತಃಕರಣದಲ್ಲಿ ನವೀನ್ ನಿರೂಪಿಸಿರುವರು.

– ಕೆ. ಫಣಿರಾಜ್

■

NEW No. MAG(3)/NPP/205/2021-2022
JANASHAKTHI KANNADA VARA PATRIKE JUNE 13-19, 2022 Price: Rs. 10/- Date of Publication: 10 JUNE 2022 RNI No. KARKAN /2006/17926 Posted on 13-06-2022
"REGISTERD" Postal Reg. No. RNP/KA/BGS/2078/2019-21 Posted at BG PSO, BG - 560026 Licensed to Post without prepayment License No. PMG/BG/WPP-283/2019-21 **Posted at Periodical Rate -** Rs. 2

ನೇತ್ರಾವತಿಯಲ್ಲಿ ನೆತ್ತರು



"ಒಂದು ದೇಶವನ್ನು ನಾಶಗೊಳಿಸಬೇಕಾದರೆ, ಆ ದೇಶದ ಜನರು ಧರ್ಮದ ಹೆಸರಿನಲ್ಲಿ ಪರಸ್ಪರ ಹೊಡೆದಾಡುವಂತೆ ಮಾಡಬೇಕು, ಅಂತಹ ದೇಶವು ತನ್ನಿಂದ ತಾನೇ ನಾಶವಾಗುತ್ತದೆ."

- ಲಿಯೋ ಟಾಲ್‌ಸ್ಟಾಯ್

ಇದು ನಮ್ಮ ದೇಶದಲ್ಲಿ ಇಂದು ದಿನೇ ನಿಜವಾಗುತ್ತಿದೆ. ಇದನ್ನು ತಡೆಯಬೇಕಾದರೆ ಅದು ಯಾಕೆ ನಡೆಯುತ್ತಿದೆ ಎಂದು ಅರ್ಥ ಮಾಡಿಕೊಳ್ಳಬೇಕು. ಇದಕ್ಕೆ ಸಹಾಯ ಮಾಡುವ ಪುಸ್ತಕ 'ನೇತ್ರಾವತಿಯಲ್ಲಿ ನೆತ್ತರು'. 'ಕರಾವಳಿಯ ಕೋಮುಹಿಂಸೆಯ ಪ್ರಕರಣಗಳ' ನೈಜ ಕಥನಗಳು ಇದರಲ್ಲಿವೆ. ಇದನ್ನು ಬರೆದವರು ಈ ಪ್ರಕರಣಗಳ ಪ್ರತ್ಯಕ್ಷದರ್ಶಿ ಪತ್ರಕರ್ತ ನವೀನ್ ಸೂರಿಂಜೆ. ಈ ಪ್ರಕರಣಗಳ ಭೀಕರ ವಾಸ್ತವವನ್ನು ಪ್ರಾಮಾಣಿಕವಾಗಿ ವರದಿ ಮಾಡಿದ 'ತಪ್ಪಿಗಾಗಿ' ಅವರು ಜೈಲಿಗೂ ಹೋಗಿ ಬಂದರು. ಸೂರಿಂಜೆ ಇಲ್ಲಿ ಬಿಚ್ಚಿಟ್ಟಿರುವ ಸುಮಾರು 40 ಕಥನಗಳು ಒಂದಕ್ಕಿಂತ ಒಂದು ಬೆಚ್ಚಿ ಬೀಳಿಸುವಂಥದು. ಈ ಪುಸ್ತಕದ ಲೇಖಕರ ಮಾತು, ಪೋಲಿಸ್ ಅಧಿಕಾರಿ ಬಿ.ಕೆ.ಶಿವರಾಂ ಅವರ ಮುನ್ನುಡಿಯ ಆಯ್ದ ಭಾಗಗಳು ಮತ್ತು ಚಿಂತಕ ಕೆ.ಫಣಿರಾಜ್ ಅವರ ಟಿಪ್ಪಣಿ ಅದರ ಮಹತ್ವದ ಮುನ್ನೋಟ ನೀಡುತ್ತದೆ. ಈ ಪುಸ್ತಕವನ್ನು ಕ್ರಿಯಾ ಮಾಧ್ಯಮ ಪ್ರಕಟಿಸಿದೆ.

ನೇತ್ರಾವತಿಯಲ್ಲಿ ಆ ದಿನ ನೀರಿನ ಬದಲಾಗಿ ನೆತ್ತರು ಹರಿದಂತೆ ಕಾಣಿಸಿತು

(ಲೇಖಕರ ಮಾತಿನ ಆಯ್ದ ಭಾಗಗಳು)

ಸೌಹಾರ್ದತೆಯ ಸಮಾನತೆಯ ಭಾರತವು ಉಳಿಯಬೇಕಾದರೆ ನಾವು ನೇರವಾಗಿ ಮಾತನಾಡುವ, ಬರೆಯುವ ಧೈರ್ಯ ತೋರಬೇಕಾಗುತ್ತದೆ. ಆದ್ದರಿಂದ ಹಿಂದುತ್ವ ಎಂಬ ರಾಜಕೀಯ ಅಜೆಂಡಾ ತಂದಿಟ್ಟಿರುವ ಅಪಾಯಗಳ ಕುರಿತು ಈ ಪುಸ್ತಕದಲ್ಲಿ ನೇರವಾಗಿ ಉಲ್ಲೇಖಿಸಿದ್ದೇನೆ. ಇಲ್ಲಿ ನಾನು ಬರೆದಿರುವ ಪ್ರತಿಯೊಂದು ಘಟನೆಗಳಿಗೂ ಸಾಕ್ಷಿಯಾಗಿ ಪೊಲೀಸ್ ದಾಖಲೆಗಳು, ಮಾನವ ಹಕ್ಕು ಆಯೋಗದ ದಾಖಲೆಗಳು, ಕೋರ್ಟ್ ಅಫಿದಾವಿತ್‌ಗಳು ಇಲ್ಲವೇ ಪ್ರತ್ಯಕ್ಷದರ್ಶಿಗಳು ಇದ್ದಾರೆ. ನಾನು ನೋಡಿದ, ಆದರೆ ದಾಖಲೆಗಳಲ್ಲಿಲ್ಲದ ಇನ್ನೂ ಇಂತಹುದೇ ಹತ್ತಾರು ಕಥನಗಳು ನನ್ನ ಬಳಿ ಇದ್ದರೂ ಅದನ್ನು ಇಲ್ಲಿ ದಾಖಲಿಸಿಲ್ಲ.

ಈಗ ಮಂಗಳೂರು, ಉಡುಪಿಗಳು ದೇಶದ ಕೋಮುವಾದದ ಪ್ರಯೋಗಶಾಲೆಯಂತಾಗಿವೆ. "ರಾಮಜನ್ಮಭೂಮಿ ಹೋರಾಟವನ್ನು ಕೈಗೊಳ್ಳಬೇಕು ಮತ್ತು ಬಾಬರಿ ಮಸೀದಿಯನ್ನು ಧ್ವಂಸ ಮಾಡಬೇಕು" ಎಂಬ ನಿರ್ಣಯವನ್ನು ಕೈಗೊಂಡಿದ್ದು 1985ರಲ್ಲಿ ಉಡುಪಿಯಲ್ಲಿ ನಡೆದ ಧರ್ಮಸಂಸತ್ತಿನಲ್ಲಿ. ಅದು ಉಡುಪಿಯ ಪೇಜಾವರ ವಿಶ್ವೇಶತೀರ್ಥ ಸ್ವಾಮಿ ಉಡುಪಿ ಕೃಷ್ಣಮಠದಲ್ಲಿ ಮೂರನೇ ಬಾರಿ ಪರ್ಯಾಯ ಪೀಠವೇರಿದ ವರ್ಷ. ಅಲ್ಲಿಂದ ಪ್ರಾರಂಭವಾದ, ನಂತರ ಇಡೀ ದೇಶದಲ್ಲಿ ಹರಡಿದ ಕೋಮುಗಲಭೆಗಳಿಂದಾಗಿ 'ಸೌಹಾರ್ದ ಭಾರತ'ವು ಸಾವಿನಂಚಿಗೆ ಜಾರುತ್ತಲೇ ಇದೆ. ಈಗ ನಮ್ಮ ದೇಶ ಸಾವಿನಂಚಿನಲ್ಲಿದೆ. ದೇಶದಾದ್ಯಂತ ಇರುವ ಜೀವಪರ ಹೋರಾಟಗಾರರಿಂದ, ಮನುಷ್ಯತ್ವ ಉಳಿಸಿಕೊಂಡಿರುವ ಮನುಷ್ಯರಿಂದ ಈ ದೇಶ ಉಸಿರಾಡುವ ಮಟ್ಟಿಗಷ್ಟೇ ಉಳಿದುಕೊಂಡಿದೆ ಎನ್ನಬಹುದು.

ಹಾಗೆ ನೋಡಿದರೆ ಕರಾವಳಿಯಲ್ಲಿ ಈ ಮಟ್ಟಿಗಿನ ಕೋಮುವಾದ ಬೆಳೆಯಲು ಮುಖ್ಯ ಕಾರಣ ಆಗಿನ ಕಾಂಗ್ರೆಸ್ ಮತ್ತು ಕಮ್ಯೂನಿಷ್ಟರು. ಕಾಂಗ್ರೆಸ್ ಮತ್ತು ಕಮ್ಯೂನಿಷ್ಟರಿಂದಾಗಿಯೇ ಭೂಸುಧಾರಣಾ ಕಾಯ್ದೆಯು ಕರಾವಳಿಯಲ್ಲಿ ಯಶಸ್ವಿಯಾಗಿ ಕಾರ್ಯಗತವಾಯಿತು. ಇದರಿಂದಾಗಿಯೇ ಕರಾವಳಿಯ ಶೂದ್ರ ಹಿಂದುಳಿದ ಸಮುದಾಯಗಳಿಗೆ ಭೂಮಿ ಸಿಕ್ಕಿತು. ಒಕ್ಕಲಿನ ಆಳು ಮತ್ತು ಒಕ್ಕೆಲ್ಲಾಯ (ಒಕ್ಕಲಿನ ಉಲ್ಲಾಯ : ಕೃಷಿ ಭೂಮಿಯ ಧಣಿ) ಎಂಬ ಸಾಮಾಜಿಕ ಪರಿಸ್ಥಿತಿಗಳು ಬದಲಾದವು.

ಧಣಿ ಒಕ್ಕಲಿನಲ್ಲಿದ್ದ ಹಿಂದುಳಿದ ಶೂದ್ರ ಸಮುದಾಯಗಳು ಕೃಷಿ ಭೂಮಿಯನ್ನು ಹೊಂದುವುದರ ಜೊತೆಗೆ ವಿದ್ಯಾಭ್ಯಾಸದತ್ತವೂ ಹೊರಳಿದವು. ಇದು ಮೇಲುಜಾತಿಗಳ ಪ್ರತಿಷ್ಠೆಗೆ ಪೆಟ್ಟು ಕೊಟ್ಟಿತು. ಕರಾವಳಿಯಲ್ಲಿ ಹಳೆಯ ಯಜಮಾನಿಕೆಯನ್ನು ಹಳೇ ಮಾದರಿಯಲ್ಲೇ ಉಳಿಸಿಕೊಳ್ಳಲು ಹೆಣಗಾಡುತ್ತಿದ್ದ ಮೇಲುಜಾತಿಯ ಉಳ್ಳವರಿಗೆ ಆಗಷ್ಟೇ ಕಾಲಿಟ್ಟ ಹಿಂದುತ್ವ ಕಾನ್ಸೆಪ್ಟ್ ನೆರವಾಯ್ತು.

ಅಲ್ಲಿಂದೀಚೆಗೆ ನಡೆದಿದ್ದು ಎಲ್ಲರಿಗೂ ಗೊತ್ತಿದೆ. ಕಾರಣವೇ ಇಲ್ಲದೇ ಮುಸ್ಲಿಮರ ಮೇಲೆ ಹಲ್ಲೆಗಳಾದವು. ತನಗೆ ಸಂಬಂಧವೇ ಇಲ್ಲದ, ತನ್ನ ಕುಟುಂಬ ಸದಸ್ಯರೂ ಅಲ್ಲದ, ಯಾವುದೇ ಕುಟುಂಬದಿಂದ ದೂರುಗಳು ಇಲ್ಲದೇ ಇದ್ದರೂ ಹಿಂದೂ ಮುಸ್ಲಿಂ ಯುವಕ ಯುವತಿಯರು ಪ್ರೀತಿಸುವುದನ್ನು ವಿರೋಧಿಸಿ ಕೋಮುಗಲಭೆಗಳು, ಹಲ್ಲೆಗಳು ನಡೆಯಿತು. ಶೂದ್ರ ಯುವಕರ ಮನಸ್ಸನ್ನು ಮಲಿನಗೊಳಿಸಿ ಅವರನ್ನು "ಧರ್ಮ ಮತ್ತು ಹಿಂದುತ್ವ ಉಳಿಸುವ ದಾರಿ ಇದು ಮಾತ್ರವೇ, ಮತ್ತು ಇದು ಗರ್ವದ ಕೆಲಸ" ಎಂದು ಹುರಿದುಂಬಿಸಿ ಈ ರೀತಿ ಹಲ್ಲೆಗಳನ್ನು ಮಾಡಿ ಜೈಲಿಗೆ ಹೋಗಲು ಸಿದ್ಧವಾಗುವಂತೆ ಚಿತಾವಣೆ ನಡೆಸಲಾಯಿತು. ಮೇಲ್ವರ್ಗಗಳು ಕಾರ್ಯಕ್ರಮಗಳಲ್ಲಿ ಬಿಳಿ ಲುಂಗಿ, ಬಿಳಿ ಶಾಲಿನಲ್ಲಿ ಮಿಂಚಿದರೆ ಹಿಂದುಳಿದ ವರ್ಗಗಳು ಕೇಸರಿ ಶಾಲು ಹಾಕಿಕೊಂಡು ಸ್ವಯಂಸೇವಕರಾದರು. ಹಿಂದುತ್ವ ರಾಜಕಾರಣದ ಮೂಲಕ ಅಂತೂ ಇಂತೂ ಮತ್ತೆ ಹಿಂದೂ ಧರ್ಮದ ಹೆಸರಿನಲ್ಲಿ ಹಳೆಯ ಯಜಮಾನಿಕೆಯನ್ನು ಸ್ಥಾಪಿಸುವಲ್ಲಿ ಮೇಲ್ವರ್ಗಗಳು ಯಶಸ್ವಿಯಾದವು.

ದೊಡ್ಡ ಮಟ್ಟದ ಸಾವು ನೋವಿನ ಕೋಮುಗಲಭೆಗಳು ಆಗಾಗ ನಡೆಯುತ್ತಿದ್ದರೆ, ಹುಡುಗ ಹುಡುಗಿಯ ಮೇಲಿನ ನೈತಿಕ ಪೊಲೀಸುಗಿರಿ ದಾಳಿಗಳು, ದನ ಸಾಗಾಟಗಾರರ ಮೇಲಿನ ಹಲ್ಲೆಗಳು ಇಲ್ಲಿ ನಿರಂತರವಾಗಿ ನಡೆಯುತ್ತಿವೆ. ಅಕ್ರಮ ದನಸಾಗಾಟಗಾರರ ಮೇಲೆ ಪೊಲೀಸರು ಕ್ರಿಮಿನಲ್ ಮೊಕದ್ದಮೆ ಹೂಡಲು ಅವಕಾಶ ಇದೆ, ಆದರೆ ಅವರು ಅದರ ವಿಚಾರಣೆ ಸಿವಿಲ್ ಸ್ವರೂಪದಲ್ಲಿ ನಡೆಸಬೇಕು. ದನ ಸಾಗಾಟಗಾರರ ಮೇಲೆ ಹೂಡಲಾದ ಮೊಕದ್ದಮೆಯನ್ನು ಪೊಲೀಸರು ದನಮಾರಾಟಗಾರರಾದ ಹಿಂದೂ ಕೃಷಿಕರ ಮೇಲೆ ಹಾಕುವುದಿಲ್ಲ! ಖರೀದಿ–ಮಾರಾಟ, ದನದ ಆರೋಗ್ಯದ ಬಗ್ಗೆ ವೈದ್ಯಾಧಿಕಾರಿಗಳ ಪ್ರಮಾಣಪತ್ರ, ಸಂಚಾರ ನಿಯಮ ಉಲ್ಲಂಘನೆ, ಜಾನುವಾರು ಕಾಯ್ದೆಗಳ ಉಲ್ಲಂಘನೆಯ ಬಗೆಗಿನ ಕಾಗದಪತ್ರಗಳನ್ನು ಪರಿಶೀಲನೆ ಮಾಡಿ ತನಿಖೆ ಮಾಡಬೇಕಾದ ಪೊಲೀಸರು, ದನಸಾಗಾಟಗಾರರ ವಿಷಯವಾಗಿ ವಿಚಾರಣೆಯನ್ನೇ ನಡೆಸದೇ ಬೀದಿಯಲ್ಲೇ ಶಿಕ್ಷೆ ಘೋಷಿಸಿಬಿಡುತ್ತಾರೆ. ಪೊಲೀಸ್ ಮತ್ತು ಭಜರಂಗದಳ ಜಂಟಿ ಕಾರ್ಯಾಚರಣೆಯಿಂದ ಬೀದಿಯಲ್ಲೇ ಹೆಣವಾದ ಅಮಾಯಕ ದನಸಾಗಾಟಗಾರರೆಷ್ಟೋ? ಬೀದಿಯಲ್ಲೇ ಬಿದ್ದ ಹೊಡೆತದಿಂದ ಕೈಕಾಲು ಕಳೆದುಕೊಂಡು, ಕಿಡ್ನಿ ಡ್ಯಾಮೇಜ್ ಆಗಿ ಜೀವಚ್ಛವವಾದ ಜೀವಗಳೆಷ್ಟೋ?

2009ರ ಘಟನೆ ನನಗೆ ಇನ್ನೂ ಕಣ್ಣಿಗೆ ಕಟ್ಟಿದಂತೆ ನೆನಪಿದೆ. ಉಪ್ಪಿನಂಗಡಿಯ ಕೃಷಿಕರ ಮನೆಯಿಂದ ಗೊಡ್ಡು ದನಗಳನ್ನು ವಾಹನದಲ್ಲಿ ಸಾಗಿಸುತ್ತಿದ್ದ ವೇಳೆ ಪೊಲೀಸರು ಮತ್ತು ಹಿಂದೂ ಸಂಘಟನೆಯ ಕಾರ್ಯಕರ್ತರು ಜಂಟಿಯಾಗಿ ನೇತ್ರಾವತಿ ಸೇತುವೆಯಲ್ಲಿ ವಾಹನವನ್ನು ತಡೆಯುತ್ತಾರೆ. ಪೊಲೀಸರು ಮಾತ್ರ ತಡೆದಿದ್ದರೆ ಚಾಲಕ ಇಳಿದು ದಾಖಲೆ ನೀಡಿ ಮುಂದುವರೆಯುತ್ತಿದ್ದನೋ ಏನೋ? ಪೊಲೀಸರ ಜತೆ ಕೇಸರಿ ಶಾಲುಧಾರಿ ಕಾರ್ಯಕರ್ತರೂ ಇದ್ದಿದ್ದರಿಂದ, ಅವರ ಆಟಾಟೋಪಗಳು, ಹಿಂಸೆಗಳ ಅರಿವಿದ್ದರಿಂದ ದನ ಸಾಗಾಟ ವಾಹನದಲ್ಲಿದ್ದ ಮೊಹಮ್ಮದ್ ಮುಸ್ತಾಫಾ ಮತ್ತು ಆಸೀಫ್ ಗಾಡಿ ನಿಲ್ಲಿಸಿ ಇವರಿಂದ ತಪ್ಪಿಸಿಕೊಂಡು ಓಡಲು ಶುರು ಮಾಡುತ್ತಾರೆ. ಇಂತಹ ಸಂದರ್ಭದಲ್ಲಿ, ಪೊಲೀಸರು ಹೆಚ್ಚೆಂದರೆ ವಾಹನ ಸೀಝ್ ಮಾಡಿ ಕೇಸು ಹಾಕಲು ಮಾತ್ರವೇ ಬದ್ಧರು. ಆದರೆ ಈ ಪ್ರಕರಣದಲ್ಲಿ ಪೊಲೀಸರು ಮತ್ತು ಹಿಂದುತ್ವ ಕಾರ್ಯಕರ್ತರು ಓಡುತ್ತಿದ್ದ ಮುಸ್ತಾಫ ಮತ್ತು ಆಸೀಫರನ್ನು ಭಯೋತ್ಪಾದಕರನ್ನೋ ಅಥವಾ ಡಕಾಯಿತರನ್ನೋ

ಬೆನ್ನಟ್ಟುವಂತೆ ಬೆನ್ನಟ್ಟುತ್ತಾರೆ. ನೇತ್ರಾವತಿ ಸೇತುವೆ ಮೇಲೆ ಓಡಿ ಓಡಿ ಸುಸ್ತಾದ ಮೊಹಮ್ಮದ್ ಮುಸ್ತಾಫಾ ಮತ್ತು ಆಸೀಫ್ ಇಬ್ಬರೂ 'ಈ ಪೊಲೀಸರು ಅಥವಾ ಹಿಂದುತ್ವ ಕಾರ್ಯಕರ್ತರ ಕೈಗೆ ಸಿಕ್ಕು ಯಮಹಿಂಸೆ ಅನುಭವಿಸಿ ಸಾಯುವುದಕ್ಕಿಂತ

ಬದುಕಿದರೆ ಬದುಕಿಯೇನು ಇಲ್ಲವಾದರೆ ಸಾವು ಪುಟ 15 ಕ್ಕೆ

JANASHAKTHI KANNADA VARA PATRIKE: Printed, Published by **U. BASAVARAJ**, No. 37/a, 8th Cross, EMS Bhavan, Mahalakshmi Layout, Bangalore 560086, Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027 Editor : **NITYANANDASWAMI**